


# ಅಖಿಲ ಭಾರತ ಪತ್ರಿಕೆ

ಆಗಸ್ಟ್ 2020

# ತಪಸ್ಸಿನ ಹೃದ್ಗುಹೆ

ಬೆಲೆ : 15/-



ಆದರೀಗಿದೋ ಸಂಭ್ರಮದ ಭರತ ಮಂಗಳದ ಸ್ಪಂದದಲ್ಲಿ
ಕಾಣ್ಕೆಗತಿ ಪುಳಕ ಅಚ್ಚರಿಯ ಜ್ಯೋತಿ ತಾನೀಗ ತೋರಿತಿಲ್ಲಿ,
ಸೂರ್ಯನಾ–ಸಪ್ತ–ಮೇಖಲೆಯ ಸುಪ್ತ ಪ್ರಜ್ಞಾನ ವೀಥಿ ಸೂತ್ರ
ಸೋಮನಾ–ಪಂಚ–ವಲಯಗಳ ಕಾಂತಿ–ಸುಜ್ಞಾನ–ಶಾಂತಿ–ಪಾತ್ರ

ವಿಸ್ತಾರದಲ್ಲಿ ಪ್ರಸ್ಥಾನವಿರುವ ಆ ಪರಮಜ್ಯೋತಿ–ಧಾಮ
ನಮ್ಮ ದೈನ್ಯತೆಯ ರಿಕ್ತ–ಭೌತಿಕದ ಸಶರೀರದಾಚೆ ಭೂಮ.
ಪಟಚಿತ್ರಗೊಳದ ಆ ಭೂಮಧಾಮದಾ ಪಥದ ಸರಣಿ ಲೀಲೆ
ಆನ್ವೇಷಕೆಂದು ಈ ಭೂಮಗಾಮಿ ಸಾಗಿರುವನದರ ಮೇಲೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 1 ರೇಣು 5 ಪುಟ 91)**

**ಅಖಿಲ ಭಾರತ ಪತ್ರಿಕೆ**
**ಆಗಸ್ಟ್ 2020**

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

ಸಂಪುಟ: 30 ಸಂಚಿಕೆ: 08

## ಪರಿವಿಡಿ

# “ತಪಸ್ಸಿನ ಹೃದ್ಗುಹೆ”

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಶ್ರೀ ಅರವಿಂದರ ಸಂಕೇತ** 8
ಅನು: ನಾಗಜ್ಯೋತಿ ಎಲಿವಾರ, ಮಾನ್ವಿ

**ಕೆಲವು ಆಸಕ್ತಿದಾಯಕ ಪತ್ರಗಳು** 10

**ಶ್ರೀ ಅರವಿಂದರ ಸಂಸ್ಮರಣೆಗಳು** 20
ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ

**ಶ್ರೀಮಾತೆಯವರ ಸಂಸ್ಮರಣೆಗಳು** 26
ಅನು: ಪ್ರೊ. ವೀರಭದ್ರಪ್ಪ ಕೆ. ರಾಯಚೂರು

**ಶ್ರೀ ಅರವಿಂದರ ಯೋಗದ ಯೋಜನೆ** 31
ಅನು: ಡಾ॥ ಬಿ ಆರ್ ಭೀಡ, ರಾಯಚೂರು

**ನವೀನ ಯೋಗ ಮತ್ತು ಉದ್ದೇಶಗಳು** 39
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರು – ಶತಮಾನದ ನೋಟ** 58
(ಮುಂದುವರೆದ ಭಾಗ – 7)
– ಶ್ರೀ ನವನೀತ ರಾಮಚಂದ್ರರಾಯರು

## ಸಂಪಾದಕರ ಟಿಪ್ಪಣಿ

ಅಂತರಾತ್ಮದ ಆದೇಶದ ಪ್ರಕಾರವಾಗಿಯೇ ರೂಪುಗೊಂಡ ಕರೆಯನ್ನು ಒಪ್ಪಿ ಶ್ರೀ ಅರವಿಂದರು ಪಾಂಡಿಚೇರಿಗೆ ಆಗಮಿಸಿದ್ದರು. ಈ ಭೂಮಿಗೆ ಮತ್ತು ಮಾನವ ಕುಲಕ್ಕೆ ಅತಿಮಾನವ ಪ್ರಜ್ಞೆಯನ್ನು ದೊರಕಿಸಿಕೊಡುವ ಸಲುವಾಗಿಯೇ, ಅದರ ಸಾಧನೆಗಾಗಿಯೇ ಸೂಕ್ತ ಸ್ಥಳವಾಗಿ ನಿಯತಿಗೊಳಿಸಲ್ಪಟ್ಟಂತಹ ಈ ಪಾಂಡಿಚೇರಿಗೆ ಅವರು ಆಗಮಿಸಿದಾಗ, ಕೆಲವೇ ದಿನಗಳಲ್ಲಿ, ಈ ಪ್ರಚಂಡವಾದ ಉಪಕ್ರಮದಲ್ಲಿ ಶ್ರೀಮಾತೆಯವರೂ ಅವರೊಡನೆ ಸಹವರ್ತಿಯಾದರು. ಈ ಸಂಚಿಕೆಯಲ್ಲಿ ಶ್ರೀ ಅರವಿಂದರು ಪಾಂಡೀಚೇರಿಗೆ ಆಗಮಿಸಿದ ಪ್ರಾರಂಭದ ಅವಧಿಯ ಘಟನೆಗಳನ್ನು ಕುರಿತು ರೂಪಿಸಲ್ಪಟ್ಟಿದೆ. (ಏಐಎಮ್)

*

## ಸಂಪಾದಕೀಯ

ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನಗಳು ಭಾರತದ ವಿಷಯಕ್ಕಂತೂ ಯುಗ ಪರಿವರ್ತನೆಯ ಅವಧಿಯಾಗಿದೆ. ತೀವ್ರ ಸ್ವರೂಪದ ಮೌಲ್ಯಗಳ ರೂಪಾಂತರಗಳು ಓತಪ್ರೋತವಾಗಿ, ಕಾಲದ ಮಥನದಲ್ಲಿ ಉದ್ಭವಿಸುತ್ತಿರುವಾಗ, ಅವುಗಳನ್ನು ತಹಬಂದಿಗೆ ತಂದು, ಸೂಕ್ತವಾದ ಒಂದು ಪಥವನ್ನು ನಿರ್ಮಿಸುವಲ್ಲಿ ಆಯಾ ಪ್ರದೇಶದ ಆಧ್ಯಾತ್ಮಿಕ ವಲಯ ತನ್ನನ್ನು ತೊಡಗಿಸಿಕೊಂಡಿರುತ್ತದೆ. ಆದರೆ ಭಾರತದ ವಿಷಯದಲ್ಲಿ ಶತಶತಮಾನಗಳ ಕಾಲದಲ್ಲಿ ಈ ಆಧ್ಯಾತ್ಮಿಕ ವಲಯವನ್ನು ಅದುಮಿಡುವ ಕಾರ್ಯವೇ ಘಟಿಸಿವೆ. ಪಾಶ್ಚಾತ್ಯ ಆಡಳಿತ ವ್ಯವಸ್ಥೆಯಲ್ಲಿ ಭೌತಿಕ ಸ್ವರೂಪದ ಆಕರ್ಷಣೆಗಳನ್ನು ಕಂಡರೂ ಭಾರತೀಯ ಆತ್ಮ ಮಾತ್ರ ಗ್ಲಾನಿಗೆ ಒಳಗಾಯಿತು. ಅದನ್ನು ಸರಿಪಡಿಸಲೆಂದೇ, ಅದೂ ಆಧುನಿಕ ವೈಜ್ಞಾನಿಕ ಭಾಷಾ ವ್ಯವಸ್ಥೆಯಲ್ಲಿಯೇ ಎಲ್ಲರಿಗೂ ತಿಳಿಸುವ ಮಹತ್ವದ ತಿರುವನ್ನು ರೂಪಿಸಿದ್ದು ಶ್ರೀ ವಿವೇಕಾನಂದರು. ಇವರನ್ನು ಅನುಸರಿಸಿಯೇ ಇಂದಿಗೂ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಗ ಮತ್ತು ಆಧ್ಯಾತ್ಮದ ವಿಷಯದಲ್ಲಿ, ಇಡೀ ಭೂಮಂಡಲವೇ ಭಾರತವನ್ನು ಗಮನಿಸುತ್ತಿದೆ.

ಭೌತಿಕ ಸ್ವಾತಂತ್ರ್ಯದ ಜೊತೆಜೊತೆಗೆ ಆತ್ಮ ಸ್ವಾತಂತ್ರ್ಯವೂ ಇರಬೇಕು, ಈ ಆತ್ಮ ಸ್ವಾತಂತ್ರ್ಯವನ್ನು ಯಾರೂ ಹೊರಗಿನಿಂದ ಕೊಡಲು ಸಾಧ್ಯವಿಲ್ಲ. ಇದು ಅಂತರಂಗದಲ್ಲಿಯೇ ಅರಳಬೇಕು. ಗ್ಲಾನಿಗೊಳಗಾಗಿ ಕುಸಿದು ಹೋಗಿದ್ದ ಭಾರತದ ಆತ್ಮ ಗ್ಲಾನಿಯನ್ನು ಹೋಗಲಾಡಿಸಿ ಎಲ್ಲರಿಗೂ ಈ ವಿಶ್ವ ಪ್ರಜ್ಞೆಯ ಅತಿಮಾನಸದ ಚೈತನ್ಯ ದೊರೆಯಬೇಕು ಎನ್ನುವ ಉದಾತ್ತ ಹಂಬಲದಿಂದ ಶ್ರೀ ಅರವಿಂದರು ಪಾಂಡಿಚೇರಿಗೆ ಬರುತ್ತಾರೆ. ಭೌತಿಕ ಸ್ವಾತಂತ್ರ್ಯದ ಹೋರಾಟದಲ್ಲಿ ತೀವ್ರಗಾಮೀ ನೆಲೆಯಲ್ಲಿಯೇ ಗುರುತಿಸಿಕೊಂಡಿದ್ದ ಅವರು, ಈ ಭೌತಿಕ ಸ್ವಾತಂತ್ರ್ಯದ ಜೊತೆಗೆ ಆತ್ಮ ಸ್ವಾತಂತ್ರ್ಯದ ವ್ಯಾಪ್ತಿಯನ್ನೂ ಮನುಕುಲಕ್ಕೆ ದೊರಕಿಸಿ ಕೊಡುವ ಉದ್ದೇಶದಿಂದ, ಅದನ್ನು ಸಾಧಿಸುವದಕ್ಕಾಗಿ ಸಾಧನೆಯಲ್ಲಿ ತೊಡಗಿದ್ದು ಒಂದು ನಿಯತಿಯಲ್ಲಿ ಸಾಕಾರಗೊಂಡ ಅಪೂರ್ವ ಘಟನೆಯಾಗಿದೆ.

ಇಂದಿನ ಭೌತಿಕ ಸುಖಕ್ಕೆ ವೈಜ್ಞಾನಿಕ ಕೊಡುಗೆಗಳು ಸದಾ ಭ್ರಮಾಪೂರಿತ ಸುಖವನ್ನೇ ತೋರಿಸುತ್ತಿವೆ. ಇದಕ್ಕೆ ಮಾರುಹೋದಲ್ಲಿ ಆವರಿಸಿಕೊಳ್ಳುವ ವೈಚಾರಿಕ ಶೂನ್ಯತೆಯು, ಮಾನವನ ನೈಜ ಸ್ವರೂಪವನ್ನೇ ಬದಲಿಸಿ ಬಿಡುತ್ತವೆ.

ಭೌತಿಕದಲ್ಲಿ ಕ್ಷಣಿಕ ತೃಪ್ತಿಗಳನ್ನು ಕೊಡುವ ಸಲುವಾಗಿಯೇ ಪರಿಕರಗಳನ್ನು ರೂಪಿಸುವ ಮೂಲಕ ವಿಜ್ಞಾನವೂ ತನ್ನ ಸೀಮಿತತನವನ್ನು ಬಯಲುಗೊಳಿಸಿ–ಕೊಂಡಿದೆ. ಈ ಮೂಲಕ ತನ್ನನ್ನು ತಾನೇ ಬಂಧನಕ್ಕೆ ಒಳಪಡಿಸಕೊಂಡ ವಿಜ್ಞಾನ ಲೋಕವೂ ಸಹಿತ ಹತಾಶಗೊಂಡಿರುವ ಇಂದಿನ ವಿಷಣ್ಣ ಪರಿಸ್ಥಿಯಲ್ಲಿ, ಅನ್ವೇಷಣೆ ಅನ್ವೇಷಣೆ ಎನ್ನುತ್ತಲೇ ಕುಸಿದು ಹೋಗಿರುವ ಇಡೀ ಮಾನವ ಕುಲಕ್ಕೆ, ಒಂದು ಹೊಸ ಭರವಸೆಯ ಕಿರಣಕ್ಕಾಗಿ ಕಾಯುತ್ತಿದೆ. ಈ ರೀತಿಯ ಅಧಃಪತನ–ಗೊಂಡಿರುವ ಸ್ಥಿತಿಯಲ್ಲಿಯೇ ಇರುವಂತೆ ಮಾನವನನ್ನು ದೇವರು ರೂಪಿಸಿಲ್ಲ.

ವಿಕಸನದ ಹಂತದಲ್ಲಿ ಬಂದ ಈ ಆಘಾತಗಳನ್ನು ಸೂಕ್ತವಾಗಿ ಎದುರಿಸಿ, ತಲ್ಲಣಗೊಂಡ ಮಾನವ ಕುಲವನ್ನು ಮತ್ತೆ ಪರಿಪೂರ್ಣತೆಯ ಪಥಕ್ಕೆ ಕರೆದೊಯ್ಯಲು, ಅಲ್ಲಿ ಪಯಣವನ್ನು ಮುಂದುವರೆಸಲು, ಅವಶ್ಯವಾಗಿರುವ ಸಾಧನಾ ಪಥವನ್ನೇ ಶ್ರೀ ಅರವಿಂದರು ಸಾಕ್ಷಾತ್ಕರಿಸಿರುವದು.

ಆಧುನಿಕ ಮನೋವಿಜ್ಞಾನವೂ ಸಹಿತ ಇಂದಿಗೂ ಸಂಶೋಧಿಸುತ್ತಿರುವದು 'ಮನಸ್ಸಿನ ಕೇಂದ್ರ ಯಾವುದು' ಎನ್ನುವ ವಿಷಯವಾಗಿದೆ. ಆದರೆ ಶ್ರೀ ಅರವಿಂದರು ಈ ಮನಸ್ಸು ಹೊಂದಿರುವ ಆಯಾಮಗಳ ಕುರಿತು, ಅದು ಆ ಊರ್ಧ್ವದಲ್ಲಿರುವ ಅನಂತ ಚೈತನ್ಯದಿಂದಲೇ ರೂಪಿತಗೊಂಡಿದ್ದು, ತಾತ್ಕಾಲಿಕವಾಗಿ ಆವರಿಸಿರುವ ಈ ಭೌತಿಕ ಬಂಧನದಿಂದ ಮುಕ್ತಿ ಪಡೆಯುವ ಅಥವಾ ಈ ಭೌತಿಕದ ಸ್ಪಂದನದಲ್ಲಿಯೇ ಆ ತುರಿಯವನ್ನು ಕಾಣುವ ವಿಧಾನವನ್ನು ತಮ್ಮ ನವೀನ "ಪೂರ್ಣಯೋಗ"ದಲ್ಲಿ ನಿರೂಪಿಸಿದ್ದಾರೆ. ಮಾನವನ ಮನಸ್ಸು ಅಡಗಿಸಿಕೊಂಡಿರುವ ಈ ಮಹದ್–ಶಕ್ತಿಯನ್ನು ಜಾಗ್ರತಗೊಳಿಸುವ ಮೂಲ ಹೇಗೆ ವಿಶ್ವಪ್ರಜ್ಞೆಯ ಹಿನ್ನೆಲೆಯಲ್ಲಿ ಮಾನವ ಕುಲವನ್ನು ಪೂರ್ಣತ್ವದ ಹಂತ ತಲುಪಲು ಸಾಧ್ಯವಿರುವ ಪಥದ ಕುರಿತು ತಮ್ಮ ಕೃತಿಗಳಲ್ಲಿ ವಿವೇಚಿಸಿದ್ದಾರೆ.

ಶ್ರೀ ಅರವಿಂದರು ಪಾಂಡೀಚೇರಿಗೆ ಬಂದ ಅವಧಿಯಲ್ಲಿ ಇಡೀ ಭಾರತದ ಆತ್ಮ ಯಾವ ರೀತಿಯ ಗೊಂದಲದಲ್ಲಿತ್ತೋ ಅದೇ ರೀತಿಯ ಗೊಂದಲವನ್ನು ಇಂದು ಭಾರತ ಮಾತ್ರವಲ್ಲದೇ ವಿಶ್ವಾದ್ಯಂತ ಕಾಣುತ್ತಿದ್ದೇವೆ. ಇಡೀ ವಿಶ್ವವೇ ಮುಳುಗಿಹೋಗುತ್ತದೆಯೇನೋ ಎನ್ನುವ ವಿಪ್ಲವಕಾರೀ ಘಟನೆಗಳು ಸಾಕ್ಷಿ–ಯಾಗುತ್ತಿವೆ. ಇಂತಹ ಸಂದಿಗ್ಧ ಸ್ಥಿತಿಯಿಂದ ಹೊರಬಂದು, ಆತ್ಮಿಕವಾಗಿಯೂ

ಬದುಕಿಗೆ ಹೇಗೆ ತಾದಾತ್ಮ್ಯಯನ್ನು ಸಾಧಿಸಿಕೊಳ್ಳಬಹುದು ಎನ್ನುವ ಹಿನ್ನೆಲೆಯಲ್ಲಿ ಈ ಸಂಚಿಕೆ, ಆ ಪಥದಲ್ಲಿ ತನ್ನ ಪಯಣ ಮುಂದುವರೆಸಿದೆ.


ಪೂರ್ಣ ಯೋಗದ ಕುರಿತು ಅದನ್ನು ಹೇಗೆ ಸಪ್ತ ಚತುಷ್ಟಯಗಳ ಅನ್ವಯಿಕೆಯಲ್ಲಿ ಅಳವಡಿಸಿಕೊಳ್ಳಬಹುದು ಎಂದು ಅವರು ಹೇಳುವ ಮೂಲಕ, ಮಾನವನು ಈ ಮೊದಲು ನಿಸರ್ಗ ಸಹಜವಾಗಿಯೇ ಹೊಂದಿದ ಸಾಮರ್ಥ್ಯವನ್ನು ಮತ್ತೆ ಪಡೆದುಕೊಳ್ಳುವ ವಿಧಾನಗಳನ್ನು ಅನುಷ್ಠಾನಗೊಳಿಸಿದ್ದಾರೆ.

ನಿರ್ಗುಣದ ಗಗನ–ಮಂಡಲಕೆ ವರ್ಣ–ದಂಡೆಗಳ ಮುಡಿಸಲೆಂದು
ಸ್ವಯಂ–ಲೀಲೆಯಲಿ ಉದಿತ ಮೋದದಲಿ ವಿಕಸನಕೆ ಸಜ್ಜುಗೊಂಡು
ಜಾಗರಣಗೊಂಡ ಅವನ ಮನವೀಗ, ನಿರ್ಮಾಯ, ಮುಗ್ಧ–ಬದ್ಧ
ಅವನಿಗವನಲ್ಲಿ ಜೊತೆ ವಿಶ್ವ ಸಹಿತ ಲಿಖಿಸಲೆನೆ ಇರುವ ಶುದ್ಧ

ವಿಜ್ಞಾನಮಯದ ಸಂಭೂತಿಯಿದುವು ನಿಯತದಲಿ ನಿಖರ ನಿತ್ಯ
ಪ್ರಕೃತಿಯಾ ಸರ್ವ–ಸಾಮಾನ್ಯ–ತಥ್ಯ ಸಮಾನತೆಯಲ್ಲಿ ಸತ್ಯ
ತೇಜ–ದೀಪ್ತಿಯಲಿ ಕಾಂತಿ ಸೂಸುತಿಹ ಪ್ರಭೆ ಮಿನುಗು ದೇಹವೀಗ
ಅಂತರಾತ್ಮದಲಿ ಅಂತರ್ನಿವಾಸಿಯಾಗಿರುವ ದೇವನಾಗ

[ಸಾವಿತ್ರಿ: ದಳ 1 ರೇಣು 5 ಪುಟ 71]

ಇದರ ಸೂತ್ರರೂಪಿ ಕಾವ್ಯವಾಗಿರುವ 'ಸಾವಿತ್ರಿ'ಯಲ್ಲಿ, ಅವತರಣದ ಮುಖಾಂತರ ಲಭ್ಯವಾಗುವ ಚಿರಂತನ ಬೆಳಗಿನ ಅನುಭಾವಕ್ಕೆ ಮತ್ತೆ ಮನುಕುಲ ಸಿದ್ಧಗೊಳ್ಳಬೇಕೆಂದು ಪಥ ನಿರ್ಮಿಸಿದ್ದಾರೆ. (ಪಿಪಿಕೆ)



ಪಾಂಡಿಚೇರಿಯು ನಾನು ಮರಳಿ ಪಡೆದುಕೊಂಡ ನನ್ನ ಮೂಲ ನೆಲೆಯಾಗಿದ್ದು, ಇದು ನನ್ನ ತಪಸ್ಸಿನ ಹೃದ್ಗುಹೆಯಾಗಿದೆ. ಇದು ಕೇವಲ ಯೋಗಿಕ ದೃಷ್ಟಿಯಿಂದ ಮಾತ್ರವಲ್ಲದೇ, ಜೊತೆಗೆ ನನ್ನಲ್ಲಿಯೇ ನನ್ನನ್ನು ಆವಿಷ್ಕರಿಸಿಕೊಳ್ಳುವದೂ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/255 – ಶ್ರೀ ಅರವಿಂದರು**

– ಅನುವಾದ: ನಾಗಜ್ಯೋತಿ ಎಲಿವಾರ



ಪೂರ್ವದಲ್ಲಿ ನಿರ್ದಿಷ್ಟಗೊಂಡಿರುವ ಉಳಿದೆಲ್ಲ ಯೋಗಗಳನ್ನು ಮೀರಿ ನನ್ನ ಯೋಗವು ತದುತ್ತರದತ್ತ ಪಯಣಿಸುತ್ತಿದೆ.

*

ಪ್ರತಿಯೊಬ್ಬ ವ್ಯಕ್ತಿಯೂ, ಯಾವುದೇ ಸಾಧನಾ ವಿಧಾನದಲ್ಲಿ ಈ ಯೋಗದ ಅಂಶವಾಗಿ ತತ್ಪರನಾದಲ್ಲಿ, ಆ ಅನುಭವಗಳನ್ನು ದರ್ಶಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/379 – ಶ್ರೀ ಅರವಿಂದರು**

– ಅನುವಾದ: ನಾಗಜ್ಯೋತಿ ಎಲಿವಾರ



## ಶ್ರೀ ಅರವಿಂದರ ಸಂಕೇತ

– ಅನುವಾದ: ನಾಗಜ್ಯೋತಿ ಎಲಿವಾರ

– ಅವರೋಹಣಗೊಂಡಿರುವ ತ್ರಿಕೋಣವು ಸತ್–ಚಿತ್–ಆನಂದವನ್ನು ಪ್ರತಿನಿಧಿಸುತ್ತಿದೆ

– ಆರೋಹಣ (ಅಧಿರೋಹಣ) ಗೊಂಡಿರುವ ತ್ರಿಕೋಣವು ಈ ಜೀವನ, ಪ್ರಕಾಶ ಮತ್ತು ಪ್ರೇಮದಲ್ಲಿರುವ ಜಡದಿಂದ (ಭೌತಿಕದಿಂದ) ಪರಿಹಾರಗಳಿಗಾಗಿ ಅಭೀಪ್ಸೆಯನ್ನು ಪ್ರತಿನಿಧಿಸುತ್ತಿದೆ

– ಇವೆರಡರ ಸಂಗಮದಲ್ಲಿ ನಿರ್ಮಿತವಾಗಿರುವ, ಅಂದರೆ ಕೇಂದ್ರ ಭಾಗದಲ್ಲಿರುವ ಚೌಕವು ಪರಿಪೂರ್ಣತೆಯನ್ನು ಅಭಿವ್ಯಕ್ತಿಸುತ್ತದೆ. ಅದರ ಕೇಂದ್ರ ಭಾಗದಲ್ಲಿ ಈ ಪರಮೋಚ್ಚವಾದ ಪದ್ಮದ ಅವತಾರವಿರುತ್ತದೆ,

– ಚೌಕದಲ್ಲಿ ಇರುವ ಜಲವು, ಸೃಷ್ಟಿ ಮತ್ತು ಪುನರುತ್ಪತ್ತಿಯನ್ನು ಪ್ರತಿನಿಧಿಸುತ್ತದೆ.

*

ಅಧಿರೋಹಣಗೊಂಡಿರುವ ತ್ರಿಕೋನವು ಸೃಷ್ಟಿಯ ಅಭೀಪ್ಸೆಯನ್ನು ಹೊಂದಿದೆ; ಅವರೋಹಣದಲ್ಲಿರುವ ತ್ರಿಕೋನವು ಅದರ ದಿವ್ಯ–ಪ್ರತಿಸ್ಪಂದನವಾಗಿದೆ. ಇವೆರಡರ ಸಂಗಮದಲ್ಲಿ ನಿರ್ಮಿತ ಚೌಕವು ಅಭಿವ್ಯಕ್ತಿಯನ್ನು ಸಂಕೇತಿಸುತ್ತಿದೆ.

*

ಕೆಂಪು ಕಮಲವು ಶ್ರೀ ಅರವಿಂದರ ಸಂಕೇತವಾಗಿದೆ. ಆದರೆ ಇಲ್ಲಿ, ವಿಶೇಷವಾಗಿ ಶತಮಾನದ ಅವಧಿಯ ಹಿನ್ನಲೆಯಲ್ಲಿ ಅದನ್ನು "ನೀಲ ಕಮಲ"ವನ್ನಾಗಿ ಸಂಕೇತಿಸಲಾಗುತ್ತದೆ. ಅದನ್ನೇ ಆಯ್ಕೆ ಮಾಡಲಾಗಿದೆ. ನೀಲವರ್ಣವು

ಶ್ರೀ ಅರವಿಂದರ ಪ್ರಭಾವಲಯದ ವರ್ಣವಾಗಿದೆ. ಈ ಭೂಮಿಯ ಮೇಲೆ ಆ ಪರಮವು ಅಭಿವ್ಯಕ್ತಗೊಳ್ಳುತ್ತಿರುವದನ್ನು ಸಂಕೇತಿಸುತ್ತಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/28–29**

(ಶ್ರೀಮಾತೆಯವರು ಕೆಂಪು ಕಮಲವನ್ನು ಶ್ರೀ ಅರವಿಂದರು ಎಂದು ಹಾಗೂ ಶ್ವೇತ ಕಮಲವು ತಮ್ಮನ್ನು ಸಂಕೇತಿಸುತ್ತಿದೆ ಎಂದು ತಿಳಿಸಿದ್ದಾರೆ.)

ಕೆಂಪು ಕಮಲ – ಈ ಭೂಮಿಯ ಮೇಲೆ ಆ ಪರಮವು ಅಭಿವ್ಯಕ್ತಿಗೊಳ್ಳುವದನ್ನು ಸಂಕೇತಿಸುತ್ತದೆ.

ಶ್ವೇತ ಕಮಲ – ದಿವ್ಯ–ಚೇತನವನು ಅಭಿವ್ಯಕ್ತಗೊಳಿಸುತ್ತದೆ.

*

ನಮ್ಮ ಪ್ರೇಮವು ಶಾಶ್ವತವಾದ ಋತವಾಗಿರುತ್ತದೆ.

*

ಅವರಿಲ್ಲದೇ ನಾನು ಉದಿತಗೊಳ್ಳಲಾರೆ;
ನಾನಿಲ್ಲದೇ ಅವರು ಅಭಿವ್ಯಕ್ತಗೊಳ್ಳಲಾರರು.

*

ಯಾವಾಗ ನೀವು ನಿಮ್ಮ ಹೃದಯ ಮತ್ತು ಚಿಂತನಗಳಲ್ಲಿ ಶ್ರೀ ಅರವಿಂದರು ಮತ್ತು ನನ್ನ ಮಧ್ಯೆ ಯಾವುದೇ ವ್ಯತ್ಯಾಸವನ್ನು ಕಾಣುವದಿಲ್ಲವೋ, ಯಾವಾಗ ಶ್ರೀ ಅರವಿಂದರು ನನ್ನನ್ನು ಕುರಿತೇ ಚಿಂತನ ನಡೆಸಿದ್ದಾರೋ ಹಾಗೂ ನನ್ನ ಚಿಂತನವೂ ಸಹಿತ ಶ್ರೀ ಅರವಿಂದರ ಕುರಿತೇ ಇರುವದೋ, ಹೀಗಾಗಿ ಪರಸ್ಪರರಲ್ಲಿ ಪರಸ್ಪರರನ್ನು ಕುರಿತೇ ಚಿಂತನವು ಇರುವದರಿಂದ, ಇದು ಸಹಜವಾಗಿರುವದರಿಂದ, ಅದೂ ಏಕವ್ಯಕ್ತಿಯಾಗಿ ಮತ್ತು ಒಂದೇ ವ್ಯಕ್ತಿತ್ವವಾಗಿಯೇ ಚಿಂತನವಾಗಿರುವದರಿಂದ, ಇದನ್ನು ನೀನು ಅರಿತು ಸಾಗುವೆಯೋ, ಆಗ ಮಾತ್ರ ನೀನು ಈ ಅಧಿಮಾನಸದ ಶಕ್ತಿಗೆ ಮತ್ತು ಚೇತನದ ಎಡೆಗೆ ನಿನ್ನ ಪ್ರಯಾಣವನ್ನು ಪ್ರಾಂರಭಿಸಿದಂತಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/32** **– ಶ್ರೀಮಾತೆ**

# ಕೆಲವು ಆಸಕ್ತಿದಾಯಕ ಪತ್ರಗಳು

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

## ಅಂತಸ್ಥವಾಗಿರುವ ಜಗತ್ತಿನ ಗುರು

ನಾನು ಯಾವುದರಿಂದ ಪ್ರಾರಂಭಮಾಡಿದೆನೋ, ಲೇಲೆಯವರು ನನಗೆ ಏನು ಕೊಟ್ಟರೋ, ಕಾರಾಗೃಹದಲ್ಲಿ ನಾನೇನು ಮಾಡಿದೆನೋ– ಇಲ್ಲಿ ಮತ್ತು ಅಲ್ಲಿ ನೋಡುತ್ತ ಒಂದು ಪರಿಭ್ರಮಣ ಮಾಡುತ್ತ, ಸ್ಪರ್ಶಿಸುತ್ತ, ತೆಗೆದುಕೊಳ್ಳುತ್ತ, ನಿರ್ವಹಿಸುತ್ತ, ಎಲ್ಲ ಹಳೆಯ ಅಪೂರ್ಣ ಯೋಗಗಳನ್ನು ಪರೀಕ್ಷಿಸುತ್ತ, ಹೆಚ್ಚು ಅಥವಾ ಕಡಿಮೆ ಸಂಪೂರ್ಣವಾಗಿ ಒಂದರ ಅನುಭವವನ್ನು ಪಡೆದುಕೊಳ್ಳುತ್ತ, ಆ ಮೇಲೆ ಇನ್ನೊಂದರ ಹಿಂದೆ ಹೋಗುವುದು ಎಲ್ಲವೂ ಪಥಕ್ಕಾಗಿ ಹುಡುಕಾಟವಾಗಿತ್ತು. ನಂತರದಲ್ಲಿ ನಾನು ಪಾಂಡಿಚೇರಿಗೆ ಬಂದಾಗ ಈ ಅಸ್ಥಿರ ಸ್ಥಿತಿಯು ನಿಂತುಹೋಯಿತು. ಅಂತಸ್ಥವಾದ ಜಗತ್ತಿನ ಗುರುವು ನನ್ನ ಪಥವನ್ನು, ಅದರ ಪೂರ್ಣ ಸಿದ್ಧಾಂತವನ್ನು, ಯೋಗದ ಒಡಲಿನ ಹತ್ತು ಅಂಗಗಳನ್ನು ನನಗೆ ಪೂರ್ತಿಯಾಗಿ ತೋರಿಸಿದನು. ಈ ಹತ್ತು ವರ್ಷಗಳು ಅವನು ಅದನ್ನು ಅನುಭವದಲ್ಲಿ ಬೆಳೆಸಲು ನನ್ನನ್ನು ಅಣಿಗೊಳಿಸುತ್ತಿದ್ದ; ಅದಿನ್ನೂ ಪೂರ್ತಿಯಾಗಿಲ್ಲ....

## ಹಳೆಯ ಯೋಗಗಳ ದೋಷಗಳು

ಹಳೆಯ ಯೋಗದ ದೋಷವೇನೆಂದರೆ, ಮನಸ್ಸನ್ನು ಹಾಗೂ ಕಾರಣವನ್ನು ತಿಳಿಯುವುದು ಮತ್ತು ಆತ್ಮವನ್ನು ತಿಳಿಯುವುದು, ಅದು ಮನಸ್ಸಿನಲ್ಲಿ ಆಧ್ಯಾತ್ಮಿಕ ಅನುಭವದೊಂದಿಗೆ ತೃಪ್ತವಾಗಿ ಉಳಿಯುತ್ತಿತ್ತು. ಆದರೆ ಮನಸ್ಸು ಛಿದ್ರವಾಗಿರುವುದನ್ನು ಮಾತ್ರ ಗ್ರಹಿಸಬಹುದು; ಅದು ಅನಂತವನ್ನು, ಅವಿಭಜಿತವನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲಾರದು. ಸಮಾಧಿಯ ಭಾವಪರವಶತೆ, ಮೋಕ್ಷದ ವಿಮೋಚನೆ, ನಿರ್ವಾಣದ ಅಳಿವು, ಇತ್ಯಾದಿಗಳ ಮುಖಾಂತರ ಅದನ್ನು ವಶಪಡಿಸಿಕೊಳ್ಳುವುದು ಮನಸ್ಸಿನ ಮಾರ್ಗ, ಅದಕ್ಕೆ ಮತ್ತೊಂದು ಮಾರ್ಗವಿಲ್ಲ.

ಯಾರೋ ಒಬ್ಬರು ಇಲ್ಲಿ ಅಥವಾ ಅಲ್ಲಿ ಈ ವೈಶಿಷ್ಟ್ಯವಿಲ್ಲದ ವಿಮೋಚನೆಯನ್ನು ನಿಜಕ್ಕೂ ಪಡೆದುಕೊಳ್ಳಬಹುದು, ಅದರೆ ಲಾಭವೇನು? ಚೇತನ, ಆತ್ಮ, ದೇವರು ಯಾವಾಗಲೂ ಅಲ್ಲಿವೆ. ಮಾನವನು ದೇವರನ್ನು (ವೈಯಕ್ತಿಕವಾಗಿ ಮತ್ತು ವಟ್ಟಾರೆಯಾಗಿ) ಇಲ್ಲಿ ಸಾಕಾರಗೊಳಿಸಿಕೊಳ್ಳಬೇಕೆಂದು – ಜೀವನದಲ್ಲಿ ದೇವನ

ಅರಿವಾಗಬೇಕೆಂದು ದೇವನು ಬಯಸುತ್ತಾನೆ. ಹಳೆಯ ಯೋಗ ಪದ್ಧತಿಯು ಚೇತನ ಮತ್ತು ಜೀವನವನ್ನು ಸಮನ್ವಯಗೊಳಿಸಲಿಲ್ಲ ಅಥವಾ ಒಂದುಗೂಡಿಸಲಿಲ್ಲ; ಅದೊಂದು ದೇವನ ಮಾಯೆಯೆಂದು ಅಥವಾ ಅಸ್ಥಿರ ಆಟವೆಂದು ಅದು ಜಗತ್ತನ್ನು ನಿರ್ಲಕ್ಷಿಸಿತು. ಪರಿಣಾಮವಾಗಿ ಜೀವನದ ಪ್ರಾಬಲ್ಯದ ಇಳಿಕೆ ಮತ್ತು ಭಾರತದ ಅವನತಿ. ಗೀತೆಯು ಹೇಳುತ್ತದೆ: ಉತ್ಸೀದೇಯುರಿಮೆ ಲೋಕಾಃ ನ ಕುರ್ಯಾಂ ಕರ್ಮ ಚೇದಹಮ್, "ನಾನು ಕರ್ಮವನ್ನು ಮಾಡದಿದ್ದರೆ ಈ ಲೋಕಗಳು (ಜನರು) ನಾಶವಾಗುವವು." ಸತ್ಯವಾಗಿಯೂ ಭಾರತದ "ಈ ಜನರು" ವಿನಾಶದೆಡೆ ಹೋಗಿದ್ದಾರೆ. ಕೆಲ ತಪಸ್ವಿಗಳು ಪರಿತ್ಯಾಗ ಮಾಡಿದರೆ, ಪೂಜ್ಯ ಜನರು ಮತ್ತು ಜಾಗೃತ ಜೀವಗಳು ಮುಕ್ತಿಯನ್ನು ಪಡೆದರೆ, ಪ್ರೀತಿಯ ಉನ್ಮಾದದಲ್ಲಿ, ದೇವೋನ್ಮಾದದಲ್ಲಿ ಮತ್ತು ಅತ್ಯಾನಂದದಲ್ಲಿ ಕೆಲ ಭಕ್ತರು ಕುಣಿದರೆ, ಮತ್ತು ಜೀವ ಮತ್ತು ಜ್ಞಾನರಹಿತರಾಗಿ ಒಂದು ಪೂರ್ಣ ಜನಾಂಗ ಅಂಧಕಾರದ ಮತ್ತು ಜಡತ್ವದ ಆಳಕ್ಕೆ ಇಳಿದರೆ ಅದೆಂಥ ಆಧ್ಯಾತ್ಮಿಕ ಪರಿಪೂರ್ಣತೆ?

## ನಾನೇಕೆ ರಾಜಕೀಯ ತ್ಯಜಿಸಿದೆ

ನಾನೇಕೆ ರಾಜಕೀಯ **ತ್ಯಜಿಸಿದೆ?** ಯಾಕೆಂದರೆ ನಮ್ಮ ರಾಜಕೀಯವು ನಿಜವಾದ ಭಾರತೀಯ ವಿಷಯವಲ್ಲ; ಅದು ಯುರೋಪಿನಿಂದ ಆಮದಾದದ್ದು, ಯುರೋಪಿನ ಮಾರ್ಗಗಳ ಅನುಕರಣೆ. ಆದರೆ ಅದು ಕೂಡಾ ಬೇಕಾಗಿತ್ತು. ನೀವು ಮತ್ತು ನಾನು ಸಹ ಯುರೋಪಿನ ಶೈಲಿಯ ರಾಜಕೀಯದಲ್ಲಿ ತೊಡಗಿಸಿಕೊಂಡೆವು. ನಾವು ಆ ರೀತಿ ಮಾಡದೇ ಹೋಗಿದ್ದರೆ ದೇಶವು ಉದಯಿಸುತ್ತಿರಲಿಲ್ಲ, ಮತ್ತು ನಾವು ಅನುಭವ ಹೊಂದುತ್ತಿರಲಿಲ್ಲ ಅಥವಾ ಪೂರ್ಣ ಅಭಿವೃದ್ಧಿಯನ್ನು ಹೊಂದುತ್ತಿರಲಿಲ್ಲ. ಈಗಲೂ ಅದರ ಅವಶ್ಯಕತೆ ಇದೆ, ಭಾರತದ ಇತರೆ ಪ್ರಾಂತ್ಯಗಳಲ್ಲಿದ್ದಂತೆ ಬಂಗಾಳದಲ್ಲಿ ಅಷ್ಟಿಲ್ಲ. ನೆರಳನ್ನು ವಿಸ್ತರಿಸುವ ಬದಲು ನಿಜ ವಸ್ತುವನ್ನು ಹಿಡಿದುಕೊಳ್ಳುವ ಸಮಯ ಈಗ ಬಂದಿದೆ. ಭಾರತದ ನಿಜವಾದ ಆತ್ಮವನ್ನು ಎಬ್ಬಿಸಬೇಕಾಗಿದೆ ಮತ್ತು ಅದಕ್ಕನುಸಾರವಾಗಿ ಎಲ್ಲವನ್ನೂ ಮಾಡಬೇಕು....

## ಎಲ್ಲದರಲ್ಲೂ ದೇವರು

ದೇಹವನ್ನು ಶವವನ್ನಾಗಿ ನೋಡುವುದು ವೈರಾಗ್ಯದ ಸಂಕೇತ, ನಿರ್ವಾಣದ ಮಾರ್ಗ. ಪ್ರಾಪಂಚಿಕ ಜೀವನವು ಈ ಯೋಚನೆಯ ಜೊತೆಗೆ ಹೋಗುವುದಿಲ್ಲ.

ಪ್ರತಿಯೊಂದರಲ್ಲೂ ಸಂತೋಷವಿರಲೇಬೇಕು, ಚೇತನದಲ್ಲಿದ್ದಂತೆ ದೇಹದಲ್ಲಿಯೂ. ದೇಹವು ಪ್ರಜ್ಞೆಯಿಂದ ಮಾಡಲ್ಪಟ್ಟಿದೆ, ದೇಹವು ದೇವನ ಒಂದು ರೂಪ. ಜಗತ್ತಿನಲ್ಲಿರುವ ಎಲ್ಲದರಲ್ಲೂ ದೇವರನ್ನು ಕಾಣುತ್ತೇನೆ. ಸರ್ವಂ ಇದ ಬ್ರಹ್ಮ, ವಾಸುದೇವೋ ಸರ್ವಮಿತಿ ("ಇಲ್ಲಿಯ ಎಲ್ಲವೂ ಬ್ರಹ್ಮವಾಗಿದೆ, ವಾಸುದೇವನು ದೇವನಾಗಿದ್ದಾನೆ") – ಈ ದೃಷ್ಟಿಯು ವಿಶ್ವಾನಂದವನ್ನು ತರುತ್ತದೆ. ಈ ಆನಂದದ ವಾಸ್ತವಿಕ ಅಲೆಗಳು ದೇಹದ ಮುಖಾಂತರ ಸಹ ಪ್ರವಹಿಸುತ್ತವೆ. ಆಧ್ಯಾತ್ಮಿಕ ಭಾವನೆಯಿಂದ ತುಂಬಿದ ಈ ಸ್ಥಿತಿಯಲ್ಲಿ ಪ್ರಾಪಂಚಿಕ ಜೀವನವನ್ನು ಸಾಗಿಸಬಹುದು, ಮದುವೆಯಾಗಬಹುದು ಅಥವಾ ಮತ್ತಿನ್ನೇನಾದರೂ ಮಾಡಬಹುದು. ಪ್ರತಿಯೊಂದು ಚಟುವಟಿಕೆಯಲ್ಲೂ ದೇವನ ಹರ್ಷದ ಸ್ವ–ಅಭಿವ್ಯಕ್ತಿಯನ್ನು ಕಾಣುತ್ತೇವೆ.

**ಅವರ ಬರವಣಿಗೆಗಳನ್ನು ತಿಳಿದುಕೊಳ್ಳುವಲ್ಲಿನ ತೊಂದರೆ "ಆಲೋಚನಾ–ಭೀತಿ"**

ಆರ್ಯದ ಬಗ್ಗೆಯೂ ಒಂದು ದೂರು ಅಲ್ಲಿದೆ; ಜನರಿಗೆ ಅದು ಅರ್ಥವಾಗುತ್ತಿಲ್ಲ. ಅವರ ಓದಿಗೆ ಅಷ್ಟೊಂದು ಆಲೋಚನೆಯನ್ನು ಮತ್ತು ಪರಿಗಣನೆಯನ್ನು ಯಾರು ಕೊಡಬಯಸುತ್ತಾರೆ?.... ಇದಕ್ಕೆ ಸಂಬಂಧಿಸಿದಂತೆ, ಬಹಳ ಸಮಯದಿಂದ ನಾನು ಗಮನಿಸಿಕೊಂಡು ಬಂದಿದ್ದ ಒಂದೋ ಅಥವಾ ಎರಡು ವಿಷಯಗಳ ಬಗ್ಗೆ ನಿಮಗೆ ಸಂಕ್ಷಿಪ್ತವಾಗಿ ಹೇಳಬೇಕು. ಭಾರತದ ದೌರ್ಬಲ್ಯಕ್ಕೆ ಪರಾಧೀನ ಸ್ಥಿತಿಯಾಗಲಿ ಇಲ್ಲವೆ ಬಡತನವಾಗಲಿ, ಇಲ್ಲವೆ ಆಧ್ಯಾತ್ಮಿಕತೆಯ ಅಥವಾ ಧರ್ಮದ ಕೊರತೆಯಾಗಲಿ ಮುಖ್ಯ ಕಾರಣವಲ್ಲ ಆದರೆ ಆಲೋಚನಾ ಶಕ್ತಿಯ ಕುಂದುವಿಕೆ, ಜ್ಞಾನದ ಸ್ಥಳದಲ್ಲಿ ಅಜ್ಞಾನದ ಹರಡುವಿಕೆ ಎಂದು ನನ್ನ ನಂಬಿಕೆ. ಆಲೋಚನೆ ಮಾಡುವ ಅಸಮರ್ಥತೆಯನ್ನು ಅಥವಾ ಮನಸ್ಸಿಲ್ಲದಿರುವಿಕೆಯನ್ನು ಎಲ್ಲ ಕಡೆಯಲ್ಲೂ ನಾನು ಕಾಣುತ್ತೇನೆ – ಆಲೋಚನೆಯ ಅಶಕ್ತತೆ ಅಥವಾ "ಆಲೋಚನಾ–ಭೀತಿ". ಮಧ್ಯಕಾಲದಲ್ಲಿ ಇದು ಸರಿ ಇರಬಹುದು. ಆದರೆ ಸದ್ಯಕ್ಕೆ ಈ ವರ್ತನೆ ದೊಡ್ಡ ಅವನತಿಯ ಸಂಕೇತ.

ಏನೇ ಆದರೂ ನಾವು ಸಾಮರ್ಥ್ಯದ ಆರಾಧಕರಲ್ಲ; ನಾವು ಸುಲಭ ಮಾರ್ಗದ ಆರಾಧಕರು. ಆದರೆ ನಾವು ಸುಲಭ ಮಾರ್ಗದಿಂದ ಸಾಮರ್ಥ್ಯವನ್ನು/ಪ್ರಭಾವನನ್ನು ಪಡೆದುಕೊಳ್ಳಲಾಗದು. ನಮ್ಮ ಪೂರ್ವಜರು ಚಿಂತನೆಯ ವಿಸ್ತಾರವಾದ ಸಮುದ್ರದಲ್ಲಿ ಈಜಿದ್ದರು ಹಾಗೂ ಅಗಾಧ ಜ್ಞಾನವನ್ನು ಪಡೆದುಕೊಂಡರು; ಒಂದು ಬೃಹತ್ತಾದ ನಾಗರೀಕತೆಯನ್ನು ಸ್ಥಾಪಿಸಿದರು. ಆದರೆ

ಅವರು ತಮ್ಮ ಮಾರ್ಗದಲ್ಲಿ ಮುಂದೆ ಹೋದಂತೆ ಬಳಲಿಕೆಯಿಂದ ಮತ್ತು ದಣಿವಿನಿಂದ ಸೋಲಿಸಲ್ಪಟ್ಟರು. ಅವರ ಚಿಂತನೆಯ ಸಾಮರ್ಥ್ಯ ಕಡಿಮೆಯಾಯಿತು, ಮತ್ತು ಅದರ ಜೊತೆಗೆ ಅವರ ಕ್ರಿಯಾತ್ಮಕ ಶಕ್ತಿಯ ಪ್ರಭಾವವೂ ಕುಗ್ಗಿತು.

ನಮ್ಮ ನಾಗರೀಕತೆಯು ನಿಂತ ಹಿನ್ನೀರಿನಂತಾಗಿದೆ, ನಮ್ಮ ಧರ್ಮವು ಬಾಹ್ಯಗಳ ಒಂದು ಅಂಧಾಭಿಮಾನವಾಗಿದೆ, ನಮ್ಮ ಆಧ್ಯಾತ್ಮಿಕತೆಯು ಒಂದು ಮಂಕಾದ ಅಸ್ಥಿರ ಬೆಳಕಾಗಿದೆ ಅಥವಾ ಒಂದು ಕ್ಷಣಿಕ ಅಮಲಿನ ಅಲೆಯಾಗಿದೆ. ಈ ವಸ್ತುಸ್ಥಿತಿ ಇರುವಲ್ಲಿಯವರೆಗೆ ಭಾರತದ ಯಾವುದಾದರು ಶಾಶ್ವತ ಪುನರುಜ್ಜೀವನ ಸಾಧ್ಯವಿಲ್ಲ....

**ಅವರ ಯೋಗದ ಅಡಿಪಾಯ**

....ಭಾವನಾತ್ಮಕ ಪ್ರಚೋದನೆಯನ್ನು, ಭಾವನೆ ಮತ್ತು ಮಾನಸಿಕ ಉತ್ಸಾಹವನ್ನು ಆಧಾರವನ್ನಾಗಿ ಮಾಡುವ ಬಯಕೆ ಯಾವತ್ತಿಗೂ ನನಗಿಲ್ಲ. ವಿಶಾಲ ಮತ್ತು ಪ್ರಭಲ ಸಮಾನತೆಯನ್ನು ನನ್ನ ಯೋಗದ ಅಡಿಪಾಯವನ್ನಾಗಿ ನಾನು ಮಾಡಬೇಕೆಂದುಕೊಂಡಿರುವೆ; ಆ ಸಮಾನತೆಯ ಆಧಾರದ ಮೇಲೆ ಆಶೀರ್ವದಿಸಲ್ಪಡುವ ಜೀವಿಗಳ ಎಲ್ಲ ಚಟುವಟಿಕೆಗಳಲ್ಲಿ ಒಂದು ಸಂಪೂರ್ಣ, ಸ್ಥಿರ ಹಾಗೂ ಅಚಲ ಸಾಮರ್ಥ್ಯ ನಾನು ಬಯಸುತ್ತೇನೆ; ಆ ಸಾಮರ್ಥ್ಯದ ಸಾಗರದ ಮೇಲೆ ಜ್ಞಾನದ ಸೂರ್ಯನ ಬೀರುವಿಕೆ ಮತ್ತು ಆ ಹೊಳೆಯುವ ಅಗಾಧತೆಯಲ್ಲಿ ಅನಂತ ಪ್ರೇಮದ ಹಾಗೂ ಸಂತೋಷದ ಹಾಗೂ ಏಕತೆಯ ಒಂದು ಸ್ಥಾಪಿತ ಬ್ರಹ್ಮಾನಂದವನ್ನು ನಾನು ಬಯಸುತ್ತೇನೆ. ಸಹಸ್ರ ಸಹಸ್ರ ಅನುಯಾಯಿಗಳು ನನಗೆ ಬೇಕಿಲ್ಲ. ಕ್ಷುಲ್ಲಕ ಅಹಂಕಾರದಿಂದ ಮುಕ್ತರಾದ ಒಂದು ನೂರು ಪರಿಪೂರ್ಣ ಜನರನ್ನು ದೇವರ ಉಪಕರಣಗಳೆಂದು ನಾನು ಪಡೆದರೆ ಸಾಕು. ಸಾಮಾನ್ಯ ವಿಧದ "ಗುರು"ತ್ವದಲ್ಲಿ ನನಗೆ ವಿಶ್ವಾಸವಿಲ್ಲ. ನಾನು ಒಬ್ಬ ಗುರುವಾಗಲು ಬಯಸುವುದಿಲ್ಲ. ನನಗೆ ಬೇಕಾಗಿರುವುದು ಏನೆಂದರೆ, ಯಾರಾದರೂ ನನ್ನ ಸ್ಪರ್ಶದಿಂದ ಅಥವಾ ಇನ್ನೊಬ್ಬರಿಂದ ಜಾಗೃತರಾಗುವುದು, ಅವನ ಸುಪ್ತ ದಿವ್ಯತೆಯನ್ನು ಆಂತರ್ಯದಿಂದ ಪ್ರಕಟಪಡಿಸುವುದು ಮತ್ತು ದಿವ್ಯಜೀವನವನ್ನು ಸಾಕ್ಷಾತ್ಕಾರಪಡಿಸಿಕೊಳ್ಳುವುದು. ಇಂತಹ ಜನರು ದೇಶವನ್ನು ಮೇಲೆತ್ತಬಲ್ಲರು....

**ಬೆಂಗಾಲಿ ಬರವಣಿಗೆಗಳು ಪುಟ. 372–373**

**ಅವರ ಗುರಿ**

ನನ್ನ ಉದ್ದಿಷ್ಟಕಾರ್ಯ ಗಣಿತವನ್ನು, ಸನ್ಯಾಸಿಗಳನ್ನು, ತಪಸ್ವಿಗಳನ್ನು ಸೃಷ್ಟಿಸುವುದಲ್ಲ; ಆದರೆ, ಬಲವಾದ ಆತ್ಮಗಳನ್ನು ಕೃಷ್ಣನ ಹಾಗೂ ಕಾಳಿಯ ಲೀಲೆಗೆ ಹಿಂದಕ್ಕೆ ಕರೆಯುವುದು. ಅದು ನನ್ನ ಬೋಧನೆ, ವಿಮರ್ಶೆಯಿಂದ ನೋಡುವುದಾದರೆ ನನ್ನ ಹೆಸರು ಸನ್ಯಾಸತ್ವದ ರೂಪಗಳಿಗೆ ಅಥವಾ ಸನ್ಯಾಸತ್ವದ ಆದರ್ಶಕ್ಕೆ ಎಂದಿಗೂ ಜೋಡಿಸಲೇಬಾರದು. ಬುದ್ಧನ ಸಮಯದಿಂದ ಪ್ರತಿಯೊಂದು ವೈರಾಗ್ಯದ ಚಳುವಳಿಯು ಭಾರತವನ್ನು ದುರ್ಬಲವಾಗಿಸಿದೆ ಮತ್ತು ಒಂದು ಸ್ಪಷ್ಟ ಕಾರಣಕ್ಕಾಗಿ. ಜೀವನವನ್ನು ತ್ಯಜಿಸುವುದು ಒಂದು ಸಂಗತಿ, ಜೀವನವನ್ನು ನಾಗರಿಕ, ವೈಯಕ್ತಿಕ, ಬೃಹತ್ ಜಗಜ್ಜೀವನ ಹಾಗೂ ಹೆಚ್ಚು ದೈವಿಕ ಮಾಡಿಕೊಳ್ಳುವುದು ಇನ್ನೊಂದು ಸಂಗತಿ. ಇನ್ನೊಂದು ಆದರ್ಶವನ್ನು ದುರ್ಬಲಗೊಳಿಸದೆ ಒಂದು ಆದರ್ಶವನ್ನು ದೇಶದ ಮೇಲೆ ಹೇರಲಿಕ್ಕಾಗದು. ಜೀವನದಿಂದ ಉತ್ತಮ ಆತ್ಮಗಳನ್ನು ನೀವು ತೆಗೆದುಕೊಳ್ಳದೇನೆ ಜೀವನವನ್ನು ಇನ್ನೂ ಗಟ್ಟಿಯಾಗಿ ಹಾಗೂ ದೊಡ್ಡದಾಗಿ ಉಳಿಸಬಹುದು. ಅಹಂಕಾರದ ಪರಿತ್ಯಾಗ, ಜೀವನದಲ್ಲಿ ದೇವರನ್ನು ಒಪ್ಪಿಕೊಳ್ಳುವುದು ನಾನು ಬೋಧಿಸುವ ಯೋಗ, – ಬೇರೆ ಪರಿತ್ಯಾಗವಿಲ್ಲ.

**ದಿವ್ಯ ಮಾನವ ನಿರ್ಮಾಣ (ರೂಪಿಸುವಿಕೆ)**

ಸದ್ಯಕ್ಕೆ ನನ್ನ ಕರ್ತವ್ಯ ಮಾನವ – ನಿರ್ಮಾಣವಲ್ಲ, ಆದರೆ ದೈವೀ ಮಾನವ ನಿರ್ಮಾಣ. ಜಗತ್ತು ಒಂದು ಹೊಸ ಪ್ರಗತಿಗೆ, ಒಂದು ಹೊಸ ವಿಕಸನಕ್ಕೆ ಅಣಿಯಾಗುತ್ತಿದೆ, ಇದು ನನ್ನ ಪ್ರಸ್ತುತ ಬೋಧನೆಯಾಗಿದೆ. ಯಾವುದೇ ಜನಾಂಗ, ಯಾವುದೇ ದೇಶ ಆ ಹೊಸ ವಿಕಸನದ ಮಾರ್ಗವನ್ನು ಹಿಡಿದುಕೊಳ್ಳುತ್ತದೆಯೋ ಮತ್ತು ಅದನ್ನು ನೇರವೇರಿಸುತ್ತದೆಯೋ, ಅದು ಮಾನವ ಕುಲದ ನಾಯಕನಾಗುತ್ತದೆ. ನಾನು ಕಂಡಂತೆ ಈ ಹೊಸ ವಿಕಸನವು ಯಾವ ಆಲೋಚನೆಯ ಮೇಲೆ ಆಧರಿಸಿದೆ ಮತ್ತು ಯಾವ ಯೋಗ ಪದ್ಧತಿಯು ಅದನ್ನು ಪೂರ್ಣಗೊಳಿಸಬಹುದು ಎಂದು ನಾನು ಆರ್ಯದಲ್ಲಿ ತಿಳಿಸಿದ್ದೇನೆ....

ಆದರೆ ಅರ್ಥ ಮಾಡಿಕೊಳ್ಳಬೇಕೆಂಬ ಕಾಳಜಿ ಇರುವವರಿಗೆ ಅಲ್ಲೊಂದು ಸಂದೇಶವಿದೆ. ಅದರಲ್ಲಿ ನಿಜವಾಗಿ ಮೂರು ಭಾಗಗಳಿವೆ –

(1) ಪ್ರತಿ ಮನುಷ್ಯ ವೈಯಕ್ತಿಕವಾಗಿ ಭವಿಷ್ಯದ ದಿವ್ಯಮಾನವತೆಯ ಮಾದರಿಯಲ್ಲಿ ತನ್ನನ್ನು ಮಾರ್ಪಡಿಸಿಕೊಳ್ಳಲು, ಜನಿಸಲು ಪ್ರಯತ್ನ ಪಡುವಂಥ ಹೊಸ ಸತ್ಯ ಯುಗದ ಮಾನವರು;

(2) ಮಾನವ ಕುಲವನ್ನು ಮುನ್ನಡೆಸುವ ಇಂಥ ಮನುಷ್ಯ ಜನಾಂಗದ ವಿಕಾಸವಾಗಲು ಮತ್ತು

(3) ಈ ಪ್ರವರ್ತಕರ ಮತ್ತು ಈ ಆಯ್ದ ಜನಾಂಗದ ಅಡಿಯಲ್ಲಿಯ ಮಾರ್ಗದೆಡೆಗೆ ಎಲ್ಲ ಮಾನವ ಕುಲವನ್ನು ಕರೆಯುವುದು.

*

**'ಆರ್ಯ' ದ ಒಬ್ಬ ಓದುಗನಿಗೆ ಪತ್ರ**

21 ಸಪ್ಟೆಂಬರ್ 1914

***1. ನಿಖರವಾಗಿ ಧ್ಯಾನವೆಂದರೇನು.***

ಧ್ಯಾನದ ಭಾರತೀಯ ಕಲ್ಪನೆಯನ್ನು ವ್ಯಕ್ತಪಡಿಸಲು ಇಂಗ್ಲೀಷ್‌ನಲ್ಲಿ ಎರಡು ಶಬ್ದಗಳಿವೆ, "meditation (ಧ್ಯಾನ)" ಮತ್ತು "contemplation (ಚಿಂತನೆ)".

ಧ್ಯಾನವೆಂದರೆ, ಒಂದೇ ವಿಷಯದ ತಯಾರಿ ಮಾಡುವ ಒಂದೇ ಆಲೋಚನಾ ಸರಣಿಗಳ ಮೇಲೆ ಸರಿಯಾಗಿ ಮನಸ್ಸನ್ನು ಕೇಂದ್ರೀಕರಿಸುವುದು. ಚಿಂತನೆ ಎಂದರೆ ಒಂದೇ ಉದ್ದೇಶವನ್ನು/ಗುರಿಯನ್ನು, ರೂಪವನ್ನು ಅಥವಾ ಕಲ್ಪನೆಯನ್ನು (ಆಲೋಚನೆಯನ್ನು) ಗಮನಿಸುವುದರಿಂದ ಏಕಾಗ್ರತೆಯ ಬಲದಿಂದ ಉದ್ದೇಶದ, ರೂಪದ ಅಥವಾ ಆಲೋಚನೆಯ ಬಗ್ಗೆ ಜ್ಞಾನವು ಮನಸ್ಸಿನಲ್ಲಿ ಸ್ವಾಭಾವಿಕವಾಗಿ ಉದಯಿಸುವಂತೆ ಮಾಡುವುದು. ಧ್ಯಾನದ ತತ್ವವು, ವಿಚಾರದಲ್ಲಾಗಲಿ, ದೃಷ್ಟಿಕೋನದಲ್ಲಾಗಲಿ ಅಥವಾ ಜ್ಞಾನದಲ್ಲಾಗಲಿ ಮಾನಸಿಕ ಏಕಾಗ್ರತೆಯಾಗಿರುವುದರಿಂದ ಇವೆರಡೂ ವಿಷಯಗಳು (ಧ್ಯಾನ ಮತ್ತು ಚಿಂತನೆ) ಧ್ಯಾನದ ರೂಪಗಳೇ ಆಗಿವೆ. ಧ್ಯಾನದ ಬೇರೆ ರೂಪಗಳೂ ಇವೆ. ವಿವೇಕಾನಂದರು ನಿಮಗೆ ಒಂದು ಸಲಹೆ ನೀಡುತ್ತಾರೆ, ನಿಮ್ಮ ವಿಚಾರಗಳಿಂದ ಹಿಂದೆ ಸರಿಯಿರಿ ಅವು ಸಂಭವಿಸುವಂತೆ ನಿಮ್ಮ ಮನಸ್ಸಿನಲ್ಲಿ ಸಂಭವಿಸಲಿ ಮತ್ತು ಅವುಗಳನ್ನು ಸುಮ್ಮನೆ ಗಮನಿಸಿ ಹಾಗೂ ಅವುಗಳೇನೆಂದು ನೋಡಿರಿ. ಇದನ್ನು ಸ್ವ-ವೀಕ್ಷಣೆಯಲ್ಲಿ ಏಕಾಗ್ರತೆಯೆಂದು ಕರೆಯಬಹುದು.

ಈ ರೂಪವು ಮತ್ತೊಂದನ್ನು ಮುನ್ನಡೆಸುತ್ತದೆ, ಮನಸ್ಸನ್ನು ಒಂದು ತೆರನಾದ ಶುದ್ಧ ಜಾಗೃತ ಸ್ಥಳವನ್ನಾಗಿ ಬಿಡುವುದಕ್ಕಾಗಿ ಅದರಲ್ಲಿನ ಎಲ್ಲ ಆಲೋಚನೆಗಳನ್ನು ಖಾಲಿ ಮಾಡಬೇಕು, ಆ ಸ್ಥಳಾವಕಾಶದ ಮೇಲೆ, ಸಾಮಾನ್ಯ ಮಾನವ ಮನಸ್ಸಿನ ಕೆಳದರ್ಜೆಯ ಆಲೋಚನೆಗಳಿಂದ ಗಲಿಬಿಲಿಗೊಳ್ಳದ ಕಪ್ಪು ಹಲಗೆಯ ಮೇಲೆ ಬಿಳಿ ಬಳಪದ ಬರವಣಿಗೆಯ ಸ್ಫುಟತೆಯೊಂದಿಗೆ ದಿವ್ಯಜ್ಞಾನವು ಬಂದು ತಾನಾಗಿಯೇ ಮುದ್ರೆಯೊತ್ತಬೇಕು. ಎಲ್ಲ ಮಾನಸಿಕ ಆಲೋಚನೆಗಳ ನಿರಾಕರಣೆಯು ಯೋಗದ ಒಂದು ಪದ್ಧತಿ ಮತ್ತು ಇಷ್ಟಪಡುವ ಪದ್ಧತಿಯೂ ಸಹ ಎಂದು ಗೀತೆಯು ಹೇಳುವುದನ್ನು ನೀವು ಕಾಣುತ್ತೀರಿ. ಅದು ಯಾಂತ್ರಿಕ ಯೋಚನಾ ಪ್ರಕ್ರಿಯೆಗೆ ಗುಲಾಮಗಿರಿಯಿಂದ ಮನಸ್ಸನ್ನು ಸ್ವತಂತ್ರಗೊಳಿಸಿ ಮತ್ತು ತಾನಿಚ್ಛೆಪಟ್ಟಂತೆ ಯೋಚನೆ ಮಾಡುವಂತೆ ಅಥವಾ ಮಾಡದಂತೆ ಅಥವಾ ತನ್ನ ಸ್ವಂತ ಯೋಚನೆಗಳನ್ನು ಆಯ್ದುಕೊಳ್ಳುವಂತೆ ಇಲ್ಲವೆ ಯೋಚನೆಯನ್ನು ಮೀರಿ ನಮ್ಮ ತತ್ವಶಾಸ್ತ್ರದಲ್ಲಿ ವಿಜ್ಞಾನವೆಂದು ಕರೆಯಲ್ಪಡುವ ಸತ್ಯದ ಶುದ್ಧ ಗ್ರಹಿಕೆಯ ಕಡೆಗೆ ಹೋಗುವುದರಿಂದ ಅದನ್ನು ಬಿಡುಗಡೆಯ ಧ್ಯಾನವೆಂದು ಕರೆಯಬಹುದು.

ಮಾನವ ಮನಸ್ಸಿಗೆ ಧ್ಯಾನವು ಅತ್ಯಂತ ಸರಳ ಪ್ರಕ್ರಿಯೆ, ಆದರೆ ಅದು ಅದರ ಪರಿಣಾಮಗಳಲ್ಲಿ ಅತ್ಯಂತ ಕಿರಿದಾದದ್ದು; ಚಿಂತನೆಯು ಹೆಚ್ಚು ಕಠಿಣ, ಆದರೆ ಸರ್ವಶ್ರೇಷ್ಠ; ವಿಚಾರ ಸರಣಿಗಳಿಂದ ಸ್ವ–ನಿರೀಕ್ಷಣೆ ಮತ್ತು ಬಿಡುಗಡೆಯು ಎಲ್ಲವುಗಳಲ್ಲಿ ಅತ್ಯಂತ ಕಠಿಣವಾದದ್ದು, ಆದರೆ ಅದರ ಫಲಗಳಲ್ಲಿ ಮತ್ತು ವಿಶಾಲತೆಯಲ್ಲಿ ಸರ್ವಶ್ರೇಷ್ಠ. ನಮ್ಮ ಒಲವು ಮತ್ತು ಸಾಮರ್ಥ್ಯಾನುಸಾರವಾಗಿ ಅವುಗಳಲ್ಲಿ ಯಾವುದಾದರೊಂದನ್ನು ನಾವು ಆರಿಸಿಕೊಳ್ಳಬಹುದು. ಪರಿಪೂರ್ಣ ವಿಧಾನವೆಂದರೆ ಅವೆಲ್ಲವುಗಳನ್ನೂ ಉಪಯೋಗಿಸುವುದು, ಪ್ರತಿಯೊಂದು ತನ್ನದೆ ಆದ ಸ್ಥಾನದಲ್ಲಿ ಮತ್ತು ತನ್ನ ಸ್ವಂತ ಉದ್ದೇಶಕ್ಕೆ; ಆದರೆ ಇದು ಯೋಗಕ್ಕೆ ಸ್ವ–ಅನ್ವಯಿಸುವಲ್ಲಿ ಭದ್ರವಾದ ನಂಬಿಕೆ ಮತ್ತು ಗಟ್ಟಿಯಾದ ತಾಳ್ಮೆ ಮತ್ತು ಮಹಾನ್ ಸಂಕಲ್ಪ ಶಕ್ತಿಯ ಅವಶ್ಯಕತೆಯಿದೆ.

### *2. ಧ್ಯಾನಕ್ಕಾಗಿ ಗುರಿಗಳು ಅಥವಾ ಕಲ್ಪನೆಗಳು ಏನಾಗಿರಬೇಕು?*

ನಿಮ್ಮ ಸ್ವಭಾವಕ್ಕೆ ಮತ್ತು ಅತ್ಯಂತ ಉನ್ನತವಾದ ಆಕಾಂಕ್ಷೆಗಳಿಗೆ ಅನುಗುಣವಾದ ಏನಾದರೊಂದು. ಆದರೆ ನನ್ನ ಸ್ಪಷ್ಟ ಉತ್ತರವನ್ನು ನೀವು ಕೇಳಿದರೆ, ಬ್ರಹ್ಮವು ಧ್ಯಾನಕ್ಕೆ ಅಥವಾ ಚಿಂತನೆಗೆ ಯಾವಾಗಲೂ ಉತ್ತಮವಾದ ಗುರಿಯೆಂದು ನಾನು

ಹೇಳಲೇಬೇಕು, ಮನಸ್ಸನ್ನು ಸ್ಥಿರಗೊಳಿಸಬೇಕಾಗಿದ್ದು ಸರ್ವರಲ್ಲಿ ದೇವರು, ದೇವರಲ್ಲಿ ಸರ್ವವು ಮತ್ತು ಸರ್ವವೇ ದೇವರು ಎಂಬ ಕಲ್ಪನೆಯ ಮೇಲೆ. ಮೂಲಭೂತವಾಗಿ ಅದು ಸಶರೀರ ದೇವರೋ (ಸಾಕಾರ) ಅಥವಾ ನಿರಾಕಾರ ದೇವರೋ, ಅಥವಾ ಸ್ವಯಂ ಆತ್ಮನಿಷ್ಠನೋ ಎನ್ನುವುದು ಗಮನಾರ್ಹವಾಗುವುದಿಲ್ಲ. ಆದರೆ ಈ ಕಲ್ಪನೆಯನ್ನು ನಾನು ಅತ್ಯುತ್ತಮವೆಂದು ಕಂಡುಕೊಂಡಿದ್ದೇನೆ, ಏಕೆಂದರೆ ಇದು ಅತ್ಯುನ್ನತವಾದದ್ದು ಮತ್ತು ಬೇರೆ ಎಲ್ಲ ಸತ್ಯಗಳನ್ನು (ಸತ್ಯಗಳು ಈ ಜಗತ್ತಿನವಾಗಿರಲಿ ಅಥವಾ ಬೇರೆಯದಾಗಿರಲಿ ಅಥವಾ ಅತಿಶಯ ಅಸ್ತಿತ್ವದಾಚೆಗಿನದಾಗಿರಲಿ) ಇದು ಅಂಗೀಕರಿಸುತ್ತದೆ, – "ಇದೆಲ್ಲವೂ ಬ್ರಹ್ಮವಾಗಿದೆ." ಆರ್ಯದ ಮೂರನೇ ಸಂಚಿಕೆಯ, ಈಶೋಪನಿಷತ್ತಿನ ಎರಡನೆಯ ಕಂತಿನ ವಿಶ್ಲೇಷಣೆಯಲ್ಲಿ ಈ ಕಲ್ಪನೆಯನ್ನು (ಬ್ರಹ್ಮ) ತಿಳಿದುಕೊಳ್ಳಲಿಕ್ಕೆ ನಿಮಗೆ ಸಹಾಯವಾಗಬಹುದಾದ ಬ್ರಹ್ಮನ ಈ ದರ್ಶನದ ವಿವರಣೆಯನ್ನು ಕಾಣುತ್ತೀರಿ.

***3. ಧ್ಯಾನಕ್ಕಾಗಿ ಅವಶ್ಯಕವಾಗಿ ಬೇಕಾದ ಆಂತರಿಕ ಹಾಗೂ ಬಾಹ್ಯ ನಿಯಮಗಳು.***

ಅಲ್ಲಿ ಅವಶ್ಯಕ ಬಾಹ್ಯ ನಿಯಮಗಳಿಲ್ಲ, ಆದರೆ ಏಕಾಂತತೆ ಹಾಗೂ ನಿರ್ಜನತೆ ಹಾಗೆಯೆ ದೇಹದ ಸ್ಥಿರತೆಯು ಧ್ಯಾನ ಮಾಡುವ ಸಮಯದಲ್ಲಿ ಸಹಾಯಕವಾಗುತ್ತವೆ, ಕೆಲವೊಮ್ಮೆ ಆರಂಭಿಕರಿಗೆ ಬಹುತೇಕ ಆವಶ್ಯಕವಾಗುತ್ತವೆ. ಒಂದು ಸಲ ಧ್ಯಾನ ಮಾಡುವ ಅಭ್ಯಾಸ ರೂಪಗೊಂಡ ಮೇಲೆ ಅದನ್ನು ಎಲ್ಲ ಸಂದರ್ಭಗಳಲ್ಲಿ (ಮಲಗಿದಾಗ, ಕೂತುಕೊಂಡಾಗ, ನಡೆಯುವಾಗ, ಒಂಟಿಯಾಗಿ, ಜೊತೆಯಲ್ಲಿ, ನೀರವತೆಯಲ್ಲಿ, ಗದ್ದಲದ ಮಧ್ಯೆ ಇತ್ಯಾದಿ..) ಮಾಡಲು ಸಾಧ್ಯವಾಗಬಹುದು.

ಧ್ಯಾನಕ್ಕೆ ಮೊದಲ ಅವಶ್ಯಕ ಆಂತರಿಕ ನಿಯಮವು ಅಡಚಣೆಗಳ (ಮನಸ್ಸಿನ ಅಲೆದಾಟ, ಮರೆವು, ನಿದ್ರೆ, ದೈಹಿಕ ಹಾಗೂ ಮಾನಸಿಕ ಒತ್ತಡ ಮತ್ತು ಚಡಪಡಿಕೆ ಇತ್ಯಾದಿ) ವಿರುದ್ಧ ಸಂಕಲ್ಪದ ಏಕಾಗ್ರತೆಯಾಗಿದೆ.

ಆಂತರಿಕ ಪ್ರಜ್ಞೆಯಿಂದ (ಚಿತ್) ಉದ್ಭವಿಸುವ ಯೋಚನೆಯ ಹಾಗೂ ಭಾವನೆಯ ಶುದ್ಧತೆ ಮತ್ತು ಅಚಲತೆ ಎರಡನೆ ಅವಶ್ಯಕ ನಿಯಮವಾಗಿದೆ; ಅಂದರೆ, ತೊಂದರೆಕೊಡುವ ಎಲ್ಲ ಪ್ರತಿಕ್ರಿಯೆಗಳಿಂದ (ಕೋಪ, ದುಃಖ, ಖಿನ್ನತೆ, ಪ್ರಾಪಂಚಿಕ ಘಟನೆಗಳ ಬಗ್ಗೆ ಆತಂಕ ಇತ್ಯಾದಿ) ಸ್ವಾತಂತ್ರ್ಯ. ಮಾನಸಿಕ ಪರಿಪೂರ್ಣತೆ ಮತ್ತು ನೈತಿಕತೆಗಳು ಯಾವಾಗಲೂ ಪರಸ್ಪರ ನಿಕಟ ಸಂಬಂಧಿತವಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/295 – ಶ್ರೀ ಅರವಿಂದರು**

ಒಂದು ವೇಳೆ ನೀವು ಎ.ಜಿ. (ಶ್ರೀ ಅರಬಿಂದೊ ಅವರನ್ನು ಕೆಲವು ಶಿಷ್ಯರು ಎ.ಜಿ. ಎಂದು ಕರೆಯುತ್ತಿದ್ದರು) ಮತ್ತು ಮೀರಾ (ಶ್ರೀಮಾತೆಯವರು) ಅವರ ಮಧ್ಯದ ಅಗಲಿಕೆಯನ್ನು ಕಠಿಣ ಮಾಡಿದರೂ ಸಹ ತಪ್ಪಾಗುತ್ತದೆ. ಸಾಧನೆಯ ಸಂಪೂರ್ಣ ಬೆಳವಣಿಗೆಗಾಗಿ ಇಬ್ಬರ ಪ್ರಭಾವಗಳೂ ಅವಶ್ಯಕ. ಇಬ್ಬರೂ ಒಟ್ಟಿಗೆ ಮಾಡಿದ ಕಾರ್ಯವು ಮಾತ್ರ ಅತಿಮಾನಸ ಸತ್ಯವನ್ನು ಭೌತಿಕ ಸ್ಥರದಲ್ಲಿ ಕೆಳಗೆ ತರಲು ಸಾಧ್ಯ. ಎ.ಜಿ. ಯವರು ನೇರವಾಗಿ ಮನಸ್ಸಿನ ಮೇಲೆ ಮತ್ತು ಬೆಳಗಿದ ಮನಸ್ಸಿನ ಮುಖಾಂತರ ಪ್ರಾಣ ಪುರುಷನ ಮೇಲೆ ಕೆಲಸ ಮಾಡುತ್ತಾರೆ; ಅವರು ಪ್ರಧಾನವಾಗಿ ಪ್ರಕಾಶಿತ ಜ್ಞಾನದಲ್ಲಿನ (ಒಳ ಅರಿವಿನ, ಅತಿಮಾನಸ ಅಥವಾ ಆಧ್ಯಾತ್ಮಿಕ) ಶಕ್ತಿಯಾದ ಪುರುಷ ಘಟಕವನ್ನು ಮತ್ತು ಈ ಜ್ಞಾನದಲ್ಲಿ ಕೆಲಸ ಮಾಡುವ ಸಾಮರ್ಥ್ಯವನ್ನು ಪ್ರತಿನಿಧಿಸುತ್ತಾರೆ. ಇಂಥಹ ಸಮಯದಲ್ಲಿ ಚೈತ್ಯ ಪುರುಷನು ಈ ಕ್ರಿಯೆಯನ್ನು ಬೆಂಬಲಿಸುತ್ತಾನೆ ಮತ್ತು ಭೌತಿಕ ಹಾಗೂ ಪ್ರಾಣಿಕ ಸ್ಥರಗಳನ್ನು ರೂಪಾಂತರಗೊಳಿಸಲು ಸಹಾಯ ಮಾಡುತ್ತಾನೆ. ಮೀರಾ ಅವರು (ಶ್ರೀಮಾತೆಯವರು) ಪ್ರಕಾಶಿತ ಚೈತ್ಯ ಪ್ರಜ್ಞೆಯ ಮುಖಾಂತರ ಚೈತ್ಯ ಪುರುಷನ ಹಾಗೂ ಭಾವನಾತ್ಮಕ, ಪ್ರಾಣಿಕ ಮತ್ತು ಭೌತಿಕ ಸ್ವಭಾವದ ಮೇಲೆ ನೇರವಾಗಿ ಕೆಲಸ ಮಾಡುತ್ತಾರೆ. ಅತಿಮಾನುಷ ಪುರುಷನ ಪ್ರಕಾಶಿತ ಅಂತರ್ದೃಷ್ಟಿಯು ಸರಿಯಾದ ರೀತಿಯಲ್ಲಿ ಮತ್ತು ಸರಿಯಾದ ಕ್ಷಣದಲ್ಲಿ ಕಾರ್ಯ ಮಾಡಲು ಆವಶ್ಯಕವಾದ ಜ್ಞಾನವನ್ನು ಅವರಿಗೆ ಕೊಡುತ್ತದೆ. ಶ್ರೀಮಾತೆಯವರ ಬಲವನ್ನು ಪ್ರತಿನಿಧಿಸುವ ಶಕ್ತಿಯ ತತ್ವವು ನೇರವಾಗಿ ಚೈತ್ಯವಾಗಿದೆ, ಪ್ರಾಣಿಕವಾಗಿದೆ, ಭೌತಿಕವಾಗಿದೆ ಮತ್ತು ಅವರ ಆಧ್ಯಾತ್ಮಿಕ ಜ್ಞಾನವು ಪ್ರಧಾನವಾಗಿ ತನ್ನ ಸ್ವಭಾವದಲ್ಲಿ ಪ್ರಯೋಗಿಕವಾಗಿದೆ. ಹೇಳಬೇಕೆಂದರೆ, ಅದೊಂದು ಬೃಹತ್ ಮತ್ತು ವಿವರವಾದ ಮಾನಸಿಕ, ಪ್ರಾಣಿಕ ಮತ್ತು ಕಾರ್ಯದಲ್ಲಿರುವ ಹಾಗೂ ಜ್ಞಾನದೊಂದಿಗಿನ ಭೌತಿಕ ಶಕ್ತಿಗಳ ಜ್ಞಾನ ಮತ್ತು ಅನುಭವ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/329–30 – ಶ್ರೀ ಅರವಿಂದರು**



ಆತ್ಮ ಸಮರ್ಪಣೆಯ ಸಂಕಲ್ಪ ಮಾಡುವುದು ಯೋಗದ ಮೊದಲ ಪ್ರಕ್ರಿಯೆಯಾಗಿದೆ. ನಿಮ್ಮೆಲ್ಲ ಅಂತಃಕರಣದಿಂದ ಮತ್ತು ನಿಮ್ಮೆಲ್ಲ ಸಾಮರ್ಥ್ಯದಿಂದ ನಿಮ್ಮನ್ನು ನೀವು ದೇವರ ಕರಗಳಲ್ಲಿ ಹಾಕಿಕೊಳ್ಳಿ. ಯಾವುದೇ ನಿಯಮಗಳನ್ನು ಮಾಡಿಕೊಳ್ಳಬೇಡಿ, ಏನನ್ನೂ ಕೇಳಬೇಡಿ, ಯೋಗದಲ್ಲಿ ಸಿದ್ಧಿಗಾಗಿಯೂ ಸಹ, ಬೇರೆ ಯಾವುದರಿಂದಲ್ಲದೆ ನಿಮ್ಮಲ್ಲಿ ಮತ್ತು ನಿಮ್ಮ ಮುಖಾಂತರವಾಗಿ ಮಾತ್ರ ಅವನ ಸಂಕಲ್ಪವು ನೇರವಾಗಿ ನೆರವೇರಲಿ. ಯಾರು ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೋ ಮತ್ತು ಏನನ್ನೂ ಬೇಡಿಕೊಳ್ಳುವುದಿಲ್ಲವೋ ಅವರಿಗೆ ದೇವರು ಅವರು ಬೇಡಿದ್ದೆಲ್ಲವನ್ನೂ ಕೊಡುತ್ತಾನೆ. ಬದಲಾಗಿ, ಅವರು ಏನೆಲ್ಲ ಕೇಳಬಹುದೋ ಮತ್ತು ಅವಶ್ಯಕತೆಯಿದೆಯೋ ಮತ್ತು ಇದಕ್ಕೆ ಸೇರಿದಂತೆ ತನ್ನನ್ನು ತಾನು ಮತ್ತು ಪ್ರೀತಿಯ ಸಹಜ ವರಗಳನ್ನೂ ಕೊಡುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/74 – ಶ್ರೀ ಅರವಿಂದರು**

# ಶ್ರೀ ಅರವಿಂದರ ಸಂಸ್ಮರಣೆಗಳು

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

**ರಾಜಕೀಯ ನಿರ್ಗಮನ**

ಪಾಂಡಿಚೇರಿಯಲ್ಲಿ, ಈ ಸಮಯದ ನಂತರ ಶ್ರೀ ಅರವಿಂದರ ಯೋಗ ಸಾಧನೆಯು ಹೆಚ್ಚು ಹೆಚ್ಚು ಆಸಕ್ತಿದಾಯಕವಾಗುತ್ತ ಬಂತು. ಯಾವುದೇ ಸಾರ್ವಜನಿಕ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುವುದನ್ನು ಬಿಟ್ಟುಬಿಟ್ಟರು, ಪುನಃಸ್ಥಾಪಿಸಿದ ರಾಷ್ಟ್ರೀಯ ಕಾಂಗ್ರೇಸ್‌ನ ಸಭೆಗಳ ಅಧ್ಯಕ್ಷತೆ ವಹಿಸುವ ಒಂದಕ್ಕಿಂತ ಹೆಚ್ಚು ವಿನಂತಿಯನ್ನು ನಿರಾಕರಿಸಿದರು. ತಮ್ಮ ಆಧ್ಯಾತ್ಮಿಕ ಚಟುವಟಿಕೆಗಳೊಂದಿಗೆ ಸಂಬಂಧವಿರದ ಯಾವುದೇ ರೀತಿಯ, ಯಾವುದೇ ಸಾರ್ವಜನಿಕ ಹೇಳಿಕೆಗಳಿಂದ ಅಥವಾ ಯಾವುದೇ ಬರವಣಿಗೆಗಳ ಅಥವಾ ಲೇಖನಗಳ ಕೊಡುಗೆಯಿಂದ (ನಂತರ ಆರ್ಯದಲ್ಲಿ ಬರೆದವುಗಳನ್ನು ಹೊರತುಪಡಿಸಿ) ದೂರವಿರುವುದನ್ನು ಒಂದು ನಿಯಮವನ್ನಾಗಿ ಮಾಡಿಕೊಂಡರು. ತಾವು ಮುನ್ನಡೆಸಿದ ಕ್ರಾಂತಿಕಾರಿ ಶಕ್ತಿಗಳೊಂದಿಗೆ ಒಬ್ಬ ಅಥವಾ ಇಬ್ಬರು ವ್ಯಕ್ತಿಗಳ ಮುಖಾಂತರ ಕೆಲವು ವರ್ಷಗಳವರೆಗೆ ಗುಪ್ತ ಸಂವಹನವನ್ನು ಇರಿಸಿಕೊಂಡಿದ್ದರು, ಒಂದು ಸಮಯದ ನಂತರ ಇದನ್ನೂ ಸಹ ಬಿಟ್ಟರು, ಮತ್ತು ರಾಜಕೀಯದಲ್ಲಿ ಯಾವುದೇ ರೀತಿಯ ಭಾಗವಹಿಸುವಿಕೆಯಿಂದ ದೂರ ಉಳಿಯುವುದು ಪೂರ್ಣಗೊಂಡಿತು. ಅವರ ಭವಿಷ್ಯತ್ತಿನ ನೋಟ ಸ್ಪಷ್ಟವಾಗಿ ಬೆಳೆದಂತೆ, ಭಾರತದ ಸಂಭಾವ್ಯ ಸ್ವಾತಂತ್ರ್ಯವು ಶಕ್ತಿಗಳ ಮೆರವಣಿಗೆಯಿಂದ ಖಚಿತವಾದುದನ್ನು ಕಂಡರು. ಇದರಿಂದ, ಭಾರತೀಯ ಪ್ರತಿರೋಧದ ಒತ್ತಡದಿಂದ ಮತ್ತು ಅಂತರ ರಾಷ್ಟ್ರೀಯ ಘಟನೆಗಳ ಒತ್ತಡದಿಂದ ಸ್ವಾತಂತ್ರವನ್ನು ಬಿಟ್ಟುಕೊಡುವಂತೆ ಬ್ರಿಟನ್ ದೇಶವನ್ನು ಒತ್ತಾಯಪಡಿಸುವುದು ಮತ್ತು ಅವಳು (ಭಾರತ ಮಾತೆ) ಆಗಲೇ ಯಾವುದೇ ವಿರೋಧದಿಂದ ಹಾಗೂ ಹಿಂಜರಿಕೆಯಿಂದ ಆ ಸಂಭ್ಯಾವ್ಯತೆಯ ಕಡೆಗೆ ಚಲಿಸುತ್ತಿರುವ ಅರಿವು ಅವರಿಗಾಯಿತು. ಸಶಸ್ತ್ರ ಬಂಡಾಯದ ಅವಶ್ಯಕತೆ ಇಲ್ಲದಿರುವುದನ್ನು ಅವರು ಮನಗಂಡರು. ಅದಕ್ಕಾಗಿ ರಾಷ್ಟ್ರೀಯತಾವಾದಿ ಕಾರಣಕ್ಕೆ ಅಪಚಾರವಿಲ್ಲದೆ ಗುಪ್ತ ತಯಾರಿಯನ್ನು ಬಿಟ್ಟುಕೊಡುವುದನ್ನು ಮನಗಂಡರು. ಆದಾಗ್ಯೂ, ಕ್ರಾಂತಿಕಾರಿ ಚೇತನವನ್ನು ಉಳಿಸಿಕೊಳ್ಳುವುದು ಮತ್ತು ತುಂಡಾಗದ ಹಾಗೆ ಕಾಯ್ದುಕೊಳ್ಳುವುದು ಎಂಬುದನ್ನೂ ಕಂಡುಕೊಂಡರು. ಆದ್ದರಿಂದ ಇನ್ನು ಮುಂದೆ ರಾಜಕೀಯದಲ್ಲಿ ಅವರ ವೈಯಕ್ತಿಕ ಮಧ್ಯಸ್ತಿಕೆಯು ಅನಿವಾರ್ಯವಲ್ಲ. ಇದೆಲ್ಲವನ್ನೂ ಹೊರತುಪಡಿಸಿ

ಅವರ ಮುಂದೆ ಗೊತ್ತುಪಡಿಸಿದ ಆಧ್ಯಾತ್ಮಿಕ ಕೆಲಸದ ಪ್ರಮಾಣವು ಅವರಿಗೆ ಹೆಚ್ಚೆಚ್ಚು ಸ್ಪಷ್ಟವಾಯಿತು, ಮತ್ತು ಅದರ ಮೇಲೆ ತಮ್ಮೆಲ್ಲ ಸಾಮರ್ಥ್ಯಗಳ ಕೇಂದ್ರಿಕರಿಸುವಿಕೆಯ ಅವಶ್ಯಕತೆಯಿದೆ ಎನ್ನುವುದನ್ನು ಕಂಡುಕೊಂಡರು. ಹಾಗೆಯೆ ಆಶ್ರಮವು ಅಸ್ತಿತ್ವದಲ್ಲಿ ಬಂದಾಗ, ಅದನ್ನು ಎಲ್ಲ ರಾಜಕೀಯ ನಂಟುಗಳಿಂದ ಹಾಗೂ ಚಟುವಟಿಕೆಯಿಂದ ಮುಕ್ತವಾಗಿರಿಸಿದರು; ನಂತರದಲ್ಲಿ ಎರಡು ಸಲ ವಿಶೇಷ ಸಂದರ್ಭಗಳಲ್ಲಿ ಅವರ ರಾಜಕೀಯದಲ್ಲಿ ಮಧ್ಯಪ್ರವೇಶವೂ ಸಹ ಸಂಪೂರ್ಣವಾಗಿ ವೈಯಕ್ತಿಕವಾಗಿತ್ತು ಮತ್ತು ಅದರಲ್ಲಿ ಆಶ್ರಮದ ಸಂಬಂಧ ಇರಲಿಲ್ಲ.

ಬಹಳಷ್ಟು ಜನರು ಊಹಿಸಿಕೊಂಡಂತೆ, ಪ್ರಪಂಚದ ಅಥವಾ ಭಾರತದ ಅದೃಷ್ಟದಲ್ಲಿ ಅಧಿಕವಾದ ಒಲವು ಇಲ್ಲದೆ ಅವರು ಉನ್ನತ ಆಧ್ಯಾತ್ಮಿಕ ಅನುಭವದಲ್ಲಿ ವಿಶ್ರಾಂತರಾದರೆಂದು ಅರ್ಥವಲ್ಲ. ಅವರ ಯೋಗದ ತತ್ವವು ದಿವ್ಯತೆಯನ್ನು ಸಾಕ್ಷಾತ್ಕರಿಸಿಕೊಳ್ಳುವುದು ಮತ್ತು ಸಂಪೂರ್ಣ ಆಧ್ಯಾತ್ಮಿಕ ಪ್ರಜ್ಞೆಯನ್ನು ಹೊಂದುವುದು ಅಷ್ಟೇ ಆಗಿರಲಿಲ್ಲ, ಆದರೆ ಎಲ್ಲ ಜೀವನವನ್ನು ಮತ್ತು ಎಲ್ಲ ಜಾಗತಿಕ ಚಟುವಟಿಕೆಯನ್ನು ಸಹ ಈ ಆಧ್ಯಾತ್ಮಿಕ ಪ್ರಜ್ಞೆಯ ಹಾಗೂ ಕ್ರಿಯೆಯ ವ್ಯಾಪ್ತಿಗೆ ತೆಗೆದುಕೊಂಡು ಹೋಗುವುದು ಮತ್ತು ಜೀವನವನ್ನು ಚೇತನದ ಮೇಲೆ ಆಧರಿಸುವುದು ಹಾಗೂ ಅದಕ್ಕೆ ಆಧ್ಯಾತ್ಮಿಕ ಅರ್ಥವನ್ನು ಕೊಡುವುದಾಗಿದೆ. ತಮ್ಮ ಏಕಾಂತ ವಾಸದಲ್ಲಿ ಶ್ರೀ ಅರವಿಂದರು, ಪ್ರಪಂಚದಲ್ಲಿ ಹಾಗೂ ಭಾರತದಲ್ಲಿ ನಡೆಯುವ ಎಲ್ಲ ಘಟನೆಗಳ ಮೇಲೆ ಒಂದು ನಿಕಟ ನಿಗಾ ಇಟ್ಟಿದ್ದರು ಮತ್ತು ಅವಶ್ಯಕತೆಯಿದ್ದಾಗ ಸಕ್ರೀಯವಾಗಿ ಆಧ್ಯಾತ್ಮಿಕ ಬಲ ಮತ್ತು ಮೌನವಾದ ಆಧ್ಯಾತ್ಮಿಕ ಕ್ರಮದೊಂದಿಗೆ ಮಧ್ಯಪ್ರವೇಶಿಸುತ್ತಿದ್ದರು...

**ಬಹಿರಂಗ ಹಸ್ತಕ್ಷೇಪಗಳು**

ಮೊದಲನೆಯದು ಎರಡನೆ ವಿಶ್ವಯುದ್ಧಕ್ಕೆ ಸಂಬಂಧಿಸಿದ್ದಾಗಿತ್ತು. ಪ್ರಾರಂಭದಲ್ಲಿ ಅವರು ಸಕ್ರೀಯವಾಗಿ ತಮ್ಮನ್ನು ಅದರೊಂದಿಗೆ ಸಂಬಂಧಿಸಿಕೊಳ್ಳಲಿಲ್ಲ, ಆದರೆ ಯಾವಾಗ ಹಿಟ್ಲರ್ ತನ್ನನ್ನು ವಿರೋಧಿಸಿದ ಎಲ್ಲ ಪಡೆಗಳನ್ನು ಹತ್ತಿಕ್ಕುವನೆಂದು ಮತ್ತು ನಾಜಿನೀತಿಯು ಜಗತ್ತನ್ನು ನಿಯಂತ್ರಿಸುವುದೆಂದು ಗೋಚರಿಸಿದಾಗ ಅವರು ಮಧ್ಯ ಪ್ರವೇಶಿಸಲು ಪ್ರಾರಂಭಿಸಿದರು, ತಾವು ಮಿತ್ರ ಪಡೆಗಳ ಜೊತೆಗೆ ಇರುವುದಾಗಿ ಬಹಿರಂಗವಾಗಿ ಘೋಷಿಸಿದರು, ನಿಧಿಗಾಗಿ ಮನವಿ ಬಂದಾಗ ಅವರು ಹಣಕಾಸಿನ ಕೊಡುಗೆಗಳನ್ನು ನೀಡಿದರು ಮತ್ತು ಅವರ ಸಲಹೆಯನ್ನು

ಯಾಚಿಸಿದವರಿಗೆ ಸೇನೆಯನ್ನು ಸೇರಲು ಹಾಗೂ ಯುದ್ಧ ಶ್ರಮದಲ್ಲಿ ಭಾಗವಹಿಸಲು ಪ್ರೇರೆಪಿಸಿದರು. ಡನ್‌ಕಿರ್ಕನ ಕ್ಷಣದಿಂದ ಪ್ರತಿಯೊಬ್ಬರೂ ಇಂಗ್ಲಂಡ ದೇಶದ ತಕ್ಷಣದ ಪತನವನ್ನು ಮತ್ತು ಹಿಟ್ಲರ್‌ನ ಖಚಿತ ಜಯವನ್ನು ನೀರಿಕ್ಷಿಸುತ್ತಿದ್ದಾಗ ಆಂತರಿಕವಾಗಿ ಅವರು ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಮಿತ್ರ ರಾಷ್ಟ್ರಗಳ ಬೆನ್ನಿಗೆ ಇಟ್ಟರು. ಜರ್ಮನಿಯ ವಿಜಯದ ರಭಸವನ್ನು ತಕ್ಷಣವಾಗಿ ತಡೆಹಿಡಿಯುವುದನ್ನು ಮತ್ತು ಯುದ್ಧದ ಗಾಳಿಯು ವಿರುದ್ಧ ದಿಕ್ಕಿನಲ್ಲಿ ಹೊರಳಲು ಪ್ರಾರಂಭಿಸಿರುವುದನ್ನು ನೋಡಿ ಅವರು ತೃಪ್ತಿ ಹೊಂದಿದರು. ಅವರು ಅದನ್ನು ಯಾಕೆ ಮಾಡಿದರೆಂದರೆ, ಹಿಟ್ಲರ್ ಮತ್ತು ನಾಜಿನೀತಿಯ ಹಿಂದುಗಡೆ ಅಂಥ ಅಸುರಿ ಶಕ್ತಿಗಳಿರುವುದನ್ನು ಹಾಗೂ ಅವುಗಳ ಜಯವೆಂದರೆ ದುಷ್ಟತನದ ದಬ್ಬಾಳಿಕೆಗೆ ಮಾನವ ಕುಲದ ಗುಲಾಮತ್ವ, ಮತ್ತು ವಿಕಾಸದ ಚಲನೆಗೆ ವಿಶೇಷವಾಗಿ ಮಾನವ ಕುಲದ ಆಧ್ಯಾತ್ಮಿಕ ವಿಕಸನಕ್ಕೆ ಹಿನ್ನಡೆ ಎನ್ನುವುದನ್ನು ಅವರು ಕಂಡಿದ್ದರು: ಅದು ಯುರೋಪ ಅಷ್ಟೇ ಅಲ್ಲದೆ ಏಷಿಯಾ, ಮತ್ತು ಅದರಲ್ಲಿ ಭಾರತವನ್ನು ಸಹ ಗುಲಾಮತನದೆಡೆಗೆ ಒಯ್ಯುತ್ತದೆಯೆಂದು, ಬೇರಾವುದಕ್ಕಿಂತಲೂ ಈ ದೇಶವು ಸಹಿಸಿದ ಅತಿ ಭಯಾನಕವಾದ ಒಂದು ಗುಲಾಮತನವೆಂದು, ಮತ್ತು ಅವಳ ಬಿಡುಗಡೆಗಾಗಿ ಮಾಡಿದ್ದ ಎಲ್ಲ ಕಾರ್ಯಗಳನ್ನು ರದ್ದುಗೊಳಿಸುವುದೆಂದು ಅವರು ಕಂಡಿದ್ದರು. ಇದೇ ಕಾರಣವೂ ಸಹ ಬಹಿರಂಗವಾಗಿ ಕ್ರಿಪ್ಸನ ಪ್ರಸ್ತಾವವನ್ನು ಅವರು ಬೆಂಬಲಿಸಲು ಮತ್ತು ಅದನ್ನು ಅಂಗೀಕರಿಸಬೇಕೆಂದು ಕಾಂಗ್ರೇಸ್‌ನ ಮುಖಂಡರನ್ನು ಒತ್ತಾಯ ಮಾಡಲು ಅವರನ್ನು ಪ್ರೇರೇಪಿಸಿತು. ...ಅವರು ಕ್ರಿಪ್ಸನ ಪ್ರಸ್ತಾವವನ್ನು ಬೆಂಬಲಿಸಿದರು ಯಾಕೆಂದರೆ, ಅದರ ಒಪ್ಪಿಕೊಳ್ಳುವಿಕೆಯಿಂದ ಭಾರತ ಹಾಗೂ ಬ್ರಿಟನ್ ಅಸುರೀ ಶಕ್ತಿಗಳ ವಿರುದ್ಧ ಒಂದಾಗಿ ನಿಲ್ಲುವುದು ಮತ್ತು ಕ್ರಿಪ್ಸನ ಪರಿಹಾರವನ್ನು ಸ್ವಾತಂತ್ರ್ಯದೆಡೆಗಿನ ಒಂದು ಮೆಟ್ಟಿಲನ್ನಾಗಿ ಉಪಯೋಗಿಸಿಕೊಳ್ಳುವುದಾಗಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/65–66**

### ನಾಲ್ಕು ಮಹತ್ವದ ಸಿದ್ಧಿಗಳು

ಅವರ ಯೋಗ ಮತ್ತು ಅವರ ಆಧ್ಯಾತ್ಮಿಕ ತತ್ವದ ಮೇಲೆ ಸ್ಥಾಪಿಸಿದ ನಾಲ್ಕು ಸಿದ್ಧಿಗಳಲ್ಲಿ ಎರಡನ್ನು ಶ್ರೀ ಅರವಿಂದರು ಆಗಲೇ ಪೂರ್ಣವಾಗಿ ಸಿದ್ಧಿಮಾಡಿ–ಕೊಂಡಿದ್ದರು. ಮೊದಲನೆಯದನ್ನು ಅವರು ಪಡೆದುಕೊಂಡಿದ್ದು ಬರೋಡಾದಲ್ಲಿ

1908ರಲ್ಲಿ ಮಹಾರಾಷ್ಟ್ರದ ಯೋಗಿ ವಿಷ್ಣು ಭಾಸ್ಕರ ಲೇಲೆ ಅವರೊಡನೆ ಧ್ಯಾನವನ್ನು ಮಾಡುತ್ತಿದ್ದಾಗ; ಒಂದು ಸಂಪೂರ್ಣ ಪ್ರಜ್ಞೆಯ ಪೂರ್ಣ ಹಾಗೂ ನಿರಂತರ ನಿಶ್ಚಲತೆಯ ನಂತರ ಮತ್ತು ಮೊದಲಿಗೆ ಜಗತ್ತಿನ ಒಟ್ಟು ಮಿಥ್ಯೆಯ ಒಂದು ಅಗಾಧವಾದ ಅನುಭವದಿಂದ ಹಾಗೂ ಗ್ರಹಿಕೆಯಿಂದ ಗಮನಕೊಡಲ್ಪಟ್ಟ ನಿಶ್ಯಬ್ದ ಆಕಾಶರಹಿತ ಮತ್ತು ಕಾಲರಹಿತ ಬ್ರಹ್ಮನ ಸಾಕ್ಷಾತ್ಕಾರ ಅದಾಗಿತ್ತು. ಆದರೆ, ಎರಡನೆಯ ಸಿದ್ಧಿಯ ನಂತರ ಇದು ಮಾಯವಾಯಿತು. ಎರಡನೆಯ ಸಿದ್ಧಿಯು (ಅಲಿಪುರ ಜೈಲಿನಲ್ಲಿ ಸಂಭವಿಸಿದ್ದು) ಬ್ರಹ್ಮಾಂಡ ಪ್ರಜ್ಞೆಯದು ಹಾಗೂ ಎಲ್ಲ ಜೀವಗಳ ಮತ್ತು ಇರುವುದೆಲ್ಲದರ ದೇವನದು. ಅವರು ಈ ಘಟನೆಯ ಬಗ್ಗೆ ಉತ್ತರಪಾಡಾದ ಅವರ ಭಾಷಣದಲ್ಲಿ ಹೇಳಿದ್ದರು. ಬ್ರಹ್ಮನ ಎರಡು ಅಂಶಗಳಾದ ಜಡ ಹಾಗೂ ಚೈತನ್ಯದೊಂದಿಗೆ ಪರಮ ಸತ್ಯದ ಸಾಕ್ಷಾತ್ಕಾರ ಮತ್ತು ಅತಿಮಾನಸದೆಡೆಗೆ ನಿರ್ದೇಶಿಸುವ ಪ್ರಜ್ಞೆಯ ಉನ್ನತ ಸ್ತರಗಳ ಸಾಕ್ಷಾತ್ಕಾರ, ಇತರ ಎರಡು ಸಿದ್ಧಿಗಳ (ಸಾಕ್ಷಾತ್ಕಾರ) ಮಾರ್ಗದಲ್ಲಿ ಅದಾಗಲೇ ಅವರು ಅವರ ಧ್ಯಾನಗಳಲ್ಲಿ ಅಲಿಪುರ ಜೈಲಿನಲ್ಲಿದ್ದರು.

## ಶ್ರೀ ಅರವಿಂದರ ಯೋಗದ ಮೇಲೆ ಒಂದು ಟಿಪ್ಪಣಿ

ಪಾಂಡಿಚೇರಿಗೆ ನಾನು ಹೋಗುವವರೆಗೂ ನಾನು ಯಾವುದೇ ಶಿಷ್ಯರನ್ನು ತೆಗೆದುಕೊಳ್ಳಲಿಲ್ಲ; ನಾನು ಮೊದಲಿಗೆ ನನ್ನ ಸಂಗಡಿಗರೊಂದಿಗೆ ಅಥವಾ ಪಾಂಡಿಚೇರಿಯಲ್ಲಿ ನನ್ನನ್ನು ಸೇರಿದವರೊಂದಿಗೆ ಗುರು–ಶಿಷ್ಯರ ಸಂಬಂಧಕ್ಕಿಂತ ಹೆಚ್ಚಾಗಿ ಗೆಳೆಯರ ಹಾಗೂ ಜೊತೆಗಾರರ ಸಂಬಂಧ ಹೊಂದಿದ್ದೆ; ಅವರ ಪರಿಚಯ ನನಗಾಗಿದ್ದು ರಾಜಕೀಯ ಹಿನ್ನೆಲೆಯಲ್ಲಿ ಹೊರತು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಅಲ್ಲ. ಶ್ರೀಮಾತೆಯವರು ಜಪಾನ್‌ನಿಂದ ತಿರುಗಿ ಬರುವವರೆಗೆ ಹಾಗೂ ಆಶ್ರಮವು ಸ್ಥಾಪಿತವಾದ ಮೇಲೆ ಬದಲಿಗೆ 1926ರಲ್ಲಿ ತನ್ನಷ್ಟಕ್ಕೇ ಸ್ಥಾಪಿತವಾದ ಮೇಲೆ ನಿಧಾನವಾಗಿ ಆಧ್ಯಾತ್ಮಿಕ ಸಂಬಂಧಗಳ ಬೆಳವಣಿಗೆಯಾದವು. ಗುರುವಿಲ್ಲದೆಯೆ ನಾನು ಯೋಗವನ್ನು 1904ರಲ್ಲಿ ಪ್ರಾರಂಭಿಸಿದೆ; 1908ರಲ್ಲಿ ಒಬ್ಬ ಮಹಾರಾಷ್ಟ್ರ ಯೋಗಿಯಿಂದ ಪ್ರಮುಖವಾದ ಸಹಾಯವನ್ನು ಸ್ವೀಕರಿಸಿದೆ ಮತ್ತು ನನ್ನ ಸಾಧನೆಯ ಅಡಿಪಾಯಗಳನ್ನು ಅನ್ವೇಷಿಸಿಕೊಂಡೆ; ಆದರೆ ಆ ಸಮಯದಿಂದ ಶ್ರೀಮಾತೆಯವರು ಭಾರತಕ್ಕೆ ಬರುವವರೆಗೆ ನಾನು ಯಾರಿಂದಲೂ ಆಧ್ಯಾತ್ಮಿಕ ಸಹಾಯವನ್ನು ಪಡೆದುಕೊಳ್ಳಲಿಲ್ಲ. ಮೊದಲಿನ ಹಾಗೂ ನಂತರದ ನನ್ನ

ಸಾಧನೆಯು ಪುಸ್ತಕಗಳ ಮೇಲೆ ಆಧಾರಿತವಾಗಿರಲಿಲ್ಲ. ಆದರೆ ಒಳಗಿನಿಂದ ನನ್ನ ಮೇಲೆ ಕಿಕ್ಕಿರಿದ ನನ್ನ ಸ್ವಂತ ಅನುಭವಗಳ ಮೇಲೆ ಆಗಿದ್ದು. ಜೈಲಿನಲ್ಲಿ ನನ್ನೊಡನೆ ಗೀತೆ ಹಾಗೂ ಉಪನಿಷತ್ತುಗಳನ್ನು ಹೊಂದಿದ್ದೆ, ಗೀತೆಯ ಯೋಗವನ್ನು ಅಭ್ಯಸಿಸಿದೆ ಮತ್ತು ಉಪನಿಷತ್ತುಗಳ ಸಹಾಯದಿಂದ ಧ್ಯಾನಿಸಿದೆ; ಈ ಗ್ರಂಥಗಳಿಂದ ಮಾತ್ರ ನಾನು ಮಾರ್ಗದರ್ಶನವನ್ನು ಪಡೆದೆ; ಪಾಂಡಿಚೇರಿಯಲ್ಲಿ ಬಹಳ ನಂತರದಲ್ಲಿ ಮೊದಲಿಗೆ ಓದಲು ಪ್ರಾರಂಭಿಸಿದ ವೇದವು ನನ್ನ ಸಾಧನೆಗೆ ಯಾವುದೇ ಮಾರ್ಗದರ್ಶನಕ್ಕಿಂತ ಆಗಲೇ ನನಗಾಗಿದ್ದ ಅನುಭವಗಳನ್ನು ಖಚಿತಪಡಿಸಿತು.

### ಏಕಾಗ್ರತೆ ಮತ್ತು ಅನುಗ್ರಹ

... ಅಂದ ಹಾಗೆ, ಯಾವುದಾದರೊಂದು ಕೆಳಗೆ ಬರುವುದಕ್ಕಿಂತ ಮುಂಚೆ ಅನೇಕ ವರ್ಷಗಳವರೆಗೆ ದಿನವೊಂದಕ್ಕೆ ಸುಮಾರು ನಾಲ್ಕರಿಂದ ಐದು ಘಂಟೆಗಳ ನನ್ನ ಏಕಾಗ್ರತೆಯ ಬಗ್ಗೆ ಏನು ಈ ಕಥೆ? ಏಕಾಗ್ರತೆಯು ಪ್ರಯಾಸಕರ ಧ್ಯಾನವೆಂದುಕೊಂಡರೆ, ಅದರಿಂದ ಅಂಥಹ ಘಟನೆಯು ಎಂದಿಗೂ ಸಂಭವಿಸಲಿಲ್ಲ. ನಾನು ಮಾಡಿದ್ದೇನೆಂದರೆ, ಒಂದು ದಿನದಲ್ಲಿ ನಾಲ್ಕು ಅಥವಾ ಐದು ಘಂಟೆಗಳ ಪ್ರಾಣಾಯಾಮ – ಖಂಡಿತವಾಗಿಯೂ ಇದು ಬೇರೆಯ ವಿಷಯ. ಎಂತಹ ಹರಿಯುವಿಕೆಯ ಬಗ್ಗೆ ಮಾತನಾಡುತ್ತಿದ್ದಿ? ಕಾವ್ಯದ ಪ್ರವಹಿಸುವಿಕೆಯು ಕೆಳಗೆ ಬಂದಿದ್ದು ನಾನು ಪ್ರಾಣಾಯಾಮ ಮಾಡುವಾಗ, ಕೆಲವು ವರ್ಷಗಳ ನಂತರದಲ್ಲಿ ಅಲ್ಲ. ಇದು ಅನುಭವಗಳ ಪ್ರವಹಿಸುವಿಕೆಯಾಗಿದ್ದರೆ, ಆದರೆ ಅದು ನಾನು ಪ್ರಾಣಾಯಾಮವನ್ನು ಬಹಳ ಸಮಯದವರೆಗೆ ನಿಲ್ಲಿಸಿದ ನಂತರ ಹಾಗೂ ನಾನು ಏನನ್ನೂ ಮಾಡದಿದ್ದಾಗ ಮತ್ತು ಏನು ಮಾಡಬೇಕೆಂದು ಹಾಗೂ ಒಮ್ಮೆ ನನ್ನೆಲ್ಲ ಪ್ರಯತ್ನಗಳೂ ವಿಫಲವಾದ ನಂತರ ಯಾವ ಕಡೆಗೆ ತಿರುಗಿಸಬೇಕೆಂದು ಗೊತ್ತಿರದಿದ್ದಾಗ ಕೆಲವು ವರ್ಷಗಳ ನಂತರ ಬಂತು. ಅದು ಬಂದಿದ್ದು ವರ್ಷಗಳವರೆಗೆ ಮಾಡಿದ ಪ್ರಾಣಾಯಾಮ ಅಥವಾ ಏಕಾಗ್ರತೆಯ ಪರಿಣಾವಾಗಿ ಅಲ್ಲ. ಆದು ಬಂದದ್ದು ಹಾಸ್ಯಾಸ್ಪದವಾಗಿ ಒಂದು ಸರಳ ರೀತಿಯಲ್ಲಿ, ಒಬ್ಬ ತಾತ್ಕಾಲಿಕ ಗುರುವಿನ ಅನುಗ್ರಹದಿಂದ (ಆದರೆ ಅದು ಅಲ್ಲ, ಅದಕ್ಕವನು ತನ್ನಷ್ಟಕ್ಕೆ ದಿಘ್ಭ್ರಮೆಗೊಂಡಿದ್ದ) ಆಥವಾ ನಿತ್ಯ ಬ್ರಹ್ಮನಿಂದ ಮತ್ತು ನಂತರದಲ್ಲಿ ಮಹಾಕಾಳಿ ಹಾಗೂ ಕೃಷ್ಣನ ಅನುಗ್ರಹದಿಂದ. ಆದ್ದರಿಂದ ನನ್ನನ್ನು ದೇವರ ವಿರುದ್ಧ ಒಂದು ವಿವಾದದಲ್ಲಿ ತಿರುಗಿಸುವ ಪ್ರಯತ್ನ ಬೇಡ; ಆ ಪ್ರಯತ್ನವು ಸಂಪೂರ್ಣವಾಗಿ ನಿಷ್ಫಲವಾಗುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/237**

## ಆಶ್ರಮದ ಸ್ವರೂಪ ನಿರ್ಮಾಣ

ಮೊದಲಿಗೆ ಆಶ್ರಮವು ಅಲ್ಲಿರಲಿಲ್ಲ, ಕೆಲವು ಜನರು ಮಾತ್ರ ಶ್ರೀ ಅರವಿಂದರ ಸನಿಹದಲ್ಲಿರಲು ಮತ್ತು ಯೋಗವನ್ನು ಅಭ್ಯಾಸ ಮಾಡಲು ಬಂದರು. ಶ್ರೀಮಾತೆಯವರು ಜಪಾನನಿಂದ ಬಂದ ಕೆಲ ಸಮಯದ ನಂತರವೇ ಶ್ರೀಮಾತೆಯವರ ಅಥವಾ ಶ್ರೀ ಅರವಿಂದರ ಇಂಗಿತ ಅಥವಾ ಯೋಜನೆಗಳಿಗಿಂತ ಹೆಚ್ಚು ತಮ್ಮೆಲ್ಲ ಆಂತರಿಕ ಹಾಗೂ ಬಾಹ್ಯ ಜೀವನವನ್ನು ಶ್ರೀಮಾತೆಯವರಿಗೆ ಒಪ್ಪಿಸಲು ಬಯಸಿದ ಸಾಧಕರ ಸಂಕಲ್ಪದಿಂದ ಅದು ಆಶ್ರಮದ ಸ್ವರೂಪವನ್ನು ಹೊಂದಿತು. ಈ ಮಧ್ಯೆ, ಇಟಲಿ ಹಾಗೂ ಜಪಾನ್‌ಗಳಲ್ಲಿ ದೀರ್ಘ ವಾಸದ ನಂತರ, ಶ್ರೀಮಾತೆಯವರು ಪಾಂಡಿಚೇರಿಗೆ ಏಪ್ರಿಲ್ 24, 1920 ರಂದು ಹಿಂತಿರುಗಿದರು. ಆಗ ಅನುಯಾಯಿಗಳ ಸಂಖ್ಯೆಯು ತೀವ್ರಗತಿಯಲ್ಲಿ ನಿಜವಾಗಿ ಹೆಚ್ಚಾಗುವ ಚಟುವಟಿಕೆಯು ಕಾಣಿಸಿಕೊಂಡಿತು.

ಆಶ್ರಮವು ಬೆಳೆದಂತೆಲ್ಲ ಅದನ್ನು ಸಂಘಟಿಸುವ/ಸಂಯೋಜಿಸುವ ಹೊಣೆಯು ಶ್ರೀಮಾತೆಯವರ ಮೇಲೆ ಬಿತ್ತು; ಶ್ರೀ ಅರವಿಂದರು ಕೂಡಲೇ ಏಕಾಂತಕ್ಕೆ ನಿರ್ಗಮಿಸಿಕೊಂಡರು ಮತ್ತು ಆಶ್ರಮದ ಭೌತಿಕ ಹಾಗೂ ಆಧ್ಯಾತ್ಮಿಕ ಬದಲಾವಣೆಯು ಸಂಪೂರ್ಣವಾಗಿ ಶ್ರೀಮಾತೆಯವರಿಗೆ ವಹಿಸಲಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/103 – ಶ್ರೀ ಅರವಿಂದರು**

*ಶ್ರೀ ಅರವಿಂದರು ಸನ್ಯಾಸತ್ವವನ್ನು ಸ್ವೀಕರಿಸುವ ಅಥವಾ ಯಾವುದೇ ಪ್ರತಿಷ್ಠಿತ ಸನ್ಯಾಸಿಗಳ ಶ್ರೇಣಿಯಲ್ಲಿ ಸೇರುವ ಕನಸನ್ನು ಸಹ ಎಂದಿಗೂ ಕಂಡವರಲ್ಲ. ಸನ್ಯಾಸತ್ವವನ್ನು ಅವರ ಯೋಗದ ಭಾಗವನ್ನಾಗಿ ಅವರಿಂದ ಎಂದಿಗೂ ಸ್ವೀಕರಿಸಲ್ಪಡಲಿಲ್ಲವೆಂಬ ವಿಷಯವು ಪ್ರತಿಯೊಬ್ಬರಿಗೂ ಸರಿಯಾಗಿ ಗೊತ್ತಿರಲೇಬೇಕು; ಅವರು ಪಾಂಡಿಚೇರಿಯಲ್ಲಿ ಒಂದು ಆಶ್ರಮವನ್ನು ಸ್ಥಾಪಿದ್ದಾರೆ, ಆದರೆ ಅದರ ಸದಸ್ಯರು ಸನ್ಯಾಸಿಗಳಲ್ಲ, ಅವರು ಕಾವಿ ಉಡುಗೆಯನ್ನು ತೊಡುವುದಿಲ್ಲ ಅಥವಾ ಅವರು ಪೂರ್ಣ ಸನ್ಯಾಸತ್ವವನ್ನು ಆಚರಿಸುವುದಿಲ್ಲ, ಆದರೆ ಅವರು ಆದ್ಯಾತ್ಮಿಕ ಸಾಕ್ಷಾತ್ಕಾರವನ್ನು ಆಧರಿಸಿದ ಜೀವನ ಯೋಗದ ಸಾಧಕರು.*

***CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/94 – ಶ್ರೀ ಅರವಿಂದರು***

# ಶ್ರೀಮಾತೆಯವರ ಸಂಸ್ಮರಣೆಗಳು

– ಅನುವಾದ: ಪ್ರೊ. ವೀರಭದ್ರಪ್ಪ ಕೆ.

## ಶ್ರೀ ಅರವಿಂದರ ವಲಯ

ಶ್ರೀ ಅರವಿಂದರವರ ವಲಯದ ಬಗೆಗೆ ಜನರು ಹೇಳುವಂತೆ "ಯಾವಾಗ ಸುಪ್ರಮಾನಸ ಶಕ್ತಿ ಪ್ರಕಟವಾಗುತ್ತದೆಯೋ ನಮಗೆ ಬಹಳ ಚನ್ನಾಗಿ ತಿಳಿಯುತ್ತೆ. ಅದನ್ನು ನೋಡಬಹುದು" – ಅವಶ್ಯಕವಾಗಿ ಇಲ್ಲದಿದ್ದರೂ ಹೇಳುತ್ತಾರೆ. ಯಾರಿಗೆ ಹೆಚ್ಚಾಗಿ ಸಂವೇದಿಸಲಾಗುವುದಲ್ಲವೋ, ಬದಲಾಗಿ ಸ್ವಲ್ಪವೇ ಸಂವೇದನಾ–ಶೀಲರಾಗಿರುವ ವ್ಯಕ್ತಿಗಳು, ಈ ಜಾಗದಲ್ಲಿ ಸ್ವಲ್ಪ ಸಮಯದಲ್ಲಿ ಚಲಿಸಿದರೆ, ಇಲ್ಲಿಯೇ ಬಾಳಿದರೆ, ಬೇರೆ ಕಡೆಗಳಿಗಿಂತ ಈ ವಾತಾವರಣವು(ವಲಯವು) ಬೇರೆ ರೀತಿಯಾಗಿಯೇ ಇದೆಯೆಂದು ಅವರಿಗೆ ಅನ್ನಿಸಿರುವುದಿಲ್ಲಾ – ನಿಮ್ಮಲ್ಲಿ ಯಾರಿಗೆ ಈ ರೀತಿ ಸ್ಪಷ್ಟವಾಗಿ ಅನ್ನಿಸುವುದೋ, ಅವರು ಇದನ್ನು ಒಪ್ಪಿಕೊಳ್ಳದೇ ಇರಲಾರಿರಿ ಅಲ್ಲವೆ? ನೀವು ನಿಮ್ಮ ಹೃದಯದಲ್ಲಿ ಸಂವೇದಿಸುವಿರಿ, ನಿಮ್ಮ ಆಲೋಚನೆಯಲ್ಲಿ ಇದು ಎಂದೇ ಅನಿಸುವುದು, ಆದರೆ ಇದು ಒಂಥರಾ ಅಸ್ಪಷ್ಟ, ಹೌದಲ್ಲವೇ? ಆದರೆ ಇಂತಹ ನಿಖರವಾದ ಅರಿವು ....... ಜಪಾನ್‌ನಿಂದ ಇಲ್ಲಿಗೆ ಬಂದಾಗ ನನಗೆ ಏನಾಯ್ತು ಅಂಥಾ ಕೇಳಿರಿ: ಆಗ ನಾನು ದೋಣಿಯಲ್ಲಿದ್ದೆ, ಸಮುದ್ರದಲ್ಲಿದ್ದೆ, ಯಾವುದನ್ನು ನಿರೀಕ್ಷಣೆ ಮಾಡುತ್ತಿದ್ದಿಲ್ಲಾ (ನಾನು ಅಂತರಂಗದಲ್ಲಿ ಮಗ್ನಳಾಗಿದ್ದೆ, ಆದರೆ ಭೌತಿಕವಾಗಿ ದೋಣಿಯಲ್ಲಿದ್ದೆ) ಆಗ ಇದ್ದಕ್ಕಿದ್ದಂತೆ, ಆಕಸ್ಮಾತಾಗಿ, ಸುಮಾರು ಪಾಂಡಿಚೇರಿಯಿಂದ ಎರಡು ಸಮುದ್ರ ಮೈಲು ದೂರದಲ್ಲಿ, ಉತ್ಕೃಷ್ಟತೆ ಹೌದು ಉತ್ಕೃಷ್ಟತೆಯೊಂದು – ನಾನು ಇನ್ನು ಹೇಳಬೇಕೆಂದರೆ ಭೌತಿಕ ವಾತಾವರಣದ ಉತ್ಕೃಷ್ಟತೆ, ವಾಯುವಿನದ್ದು ಇಷ್ಟೊಂದು ಬದಲಾಯಿತೆಂದು ನನಗನ್ನಿಸಿತು. ನಾವು ಶ್ರೀ ಅರವಿಂದರ ಪ್ರಭೆಯೊಳಗೆ ಪ್ರವೇಶಿಸುತ್ತಿದ್ದೇವೆಂದು ಭಾಸವಾಯಿತು. ಅದೊಂದು ಭೌತಿಕ ಅನುಭವ ಮತ್ತು ನಾನು ನಿಮಗೆ ಭರವಸೆ ಕೊಡುತ್ತಿದ್ದೇನೆ, ಯಾರಿಗೆ ತಕ್ಕಮಟ್ಟಿಗೆ ಪ್ರಜ್ಞೆ ಜಾಗೃತವಾಗಿದೆಯೋ ಅವರೆಲ್ಲರೂ ಇದೆ ರೀತಿ ಸಂವೇದಿಸುತ್ತಾರೆ. ನನಗೆ ವಿರುದ್ಧವಾದ ಅನುಭವ ಕೂಡ ಆಗಿದೆ, ನಾನು ಬಹಳ ಬಹಳ ವರ್ಷಗಳ ನಂತರ, ಇಲ್ಲಿ ಮೊದಲನೇ ಸಲ ಕಾರಿನಲ್ಲಿ ಹೋಗಿದ್ದೆ. ಯಾವಾಗ ನಾನು ಸರೋವರದ ಆಚೆ ತಲುಪಿದೆನೆಯೋ, ಆಗ ಹಠಾತ್ತಾಗಿ ವಾತಾವರಣ

ಬದಲಾಗಿದ್ದನ್ನು ಸಂವೇದಿಸಿದೆ; ಸಮೃದ್ಧ, ಶಕ್ತಿ, ಪ್ರಕಾಶ ಮತ್ತು ಬಲ, ಅದೆಲ್ಲಾ ಕುಂದುತ್ತಿರುವಂತೆ, ಕುಂದುತ್ತಿರುವಂತೆ.... ಮತ್ತು ಆ ಮೇಲೆ ಏನೂ ಇಲ್ಲಾ. ಆಗ ನಾನು ಮಾನಸಿಕ ಮತ್ತು ಪ್ರಾಣಿಕ ಪ್ರಜೆಯಲ್ಲಿರಲಿಲ್ಲಾ, ನಾನು ಸಂಪೂರ್ಣ ಕೇವಲ ಸಂಪೂರ್ಣ ಭೌತಿಕ ಪ್ರಜ್ಞೆಯಲ್ಲಿದ್ದೆ ಒಳ್ಳೆಯದು, ಯಾರಿಗೆ ಭೌತಿಕ ಪ್ರಜ್ಞೆಯ ಸೂಕ್ಷ್ಮತೆ ಇರುತ್ತದೆಯೋ ಅವರು ದೃಢವಾಗಿ ಅರಿಯುತ್ತಾರೆ. ಮತ್ತು ನಾನು ನಿಮಗೆ ಈ ಮೂಲಕ ಭರವಸೆ ಕೊಡಬಲ್ಲೆ. ಯಾವ ಕ್ಷೇತ್ರವನ್ನು ನಾವು "ಆಶ್ರಮ" ಎಂದು ಕರೆಯತ್ತೇವೆಯೋ ಅಲ್ಲಿ ಶಕ್ತಿ ಘನೀಕೃತವಾಗಿದೆ, ಊರಲ್ಲಿ ಇದು ಕಡಿಮೆಯಿದೆ ಮತ್ತು ಹಳ್ಳಿಗಳಲ್ಲಿ ಮತ್ತೂ ಕಡಿಮೆಯಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/223–24**

**ಅವರ ಮಾತಿನ ಶಕ್ತಿ**

ನಾನು ಮೊದಲನೆ ಸಲ ಶ್ರೀ ಅರವಿಂದರನ್ನು ಪಾಂಡಿಚೇರಿಯಲ್ಲಿ ಭೆಟ್ಟಿಯಾಗಿದ್ದೆ. ನಾನು ಆಳವಾದ ಏಕಾಗ್ರತೆಯಲ್ಲಿದ್ದೆ, ಸುಪ್ರಮಾನಸದಲ್ಲಿ ವಿಷಯಗಳನ್ನು ನೋಡುತ್ತಿದ್ದೆ, ಅಲ್ಲೆಲ್ಲಾ ವಿಷಯಗಳಿದ್ದರೂ ಕೂಡ ಏಕೋ ಏನೋ ಪ್ರಕಟವಾಗು–ವಂತಿದ್ದಿಲ್ಲಾ. ನಾನು ಏನು ನೋಡಿದೆನೋ ಅವೆಲ್ಲಾ ಪ್ರಕಟವಾಗುವವೇ ಎಂದು ಶ್ರೀ ಅರವಿಂದರಲ್ಲಿ ಕೇಳಿದೆನು. ಅವರು ಸರಳವಾಗಿ ಹೇಳಿದರು "ಹೌದು" ಎಂದಾಕ್ಷಣವೇ ನಾನು ಸುಪ್ರಮಾನಸ ಭೂಮಿಯನ್ನು ಸ್ಪರ್ಶಿಸಿದ್ದನ್ನು ನಾನು ಕಂಡೆನು ಮತ್ತು ನನಗೆ ಅರಿವಾಗಲು ಪ್ರಾರಂಭವಾಯಿತು! ಇದು ಮೊದಲನೇ ಸಲ. ಶಕ್ತಿಯು ಏನು ನಿಜವೋ ಅದನ್ನು ಸತ್ಯವಾಗಿಸುವ ಘಟನೆಗೆ ಸಾಕ್ಷಿಯಾಗಿದ್ದೆ: ಇದೇ ರೀತಿಯ ಶಕ್ತಿ ನಿನ್ನಲ್ಲಿಯೂ ಸಹ ಸತ್ಯದ ಅರಿವನ್ನು ಮೂಡಿಸುತ್ತೆ. ಯಾವಾಗ ನೀನು ಸರ್ವ ವಿಧೇಯತೆಯಿಂದ ಬಂದು, ಹೇಳಬೇಕು. ಈ ಅಸತ್ಯವನ್ನು ನಾನು ತೊಡೆದು ಹಾಕಬೇಕೆಂದು ಬಯಸುತ್ತೇನೆ ಮತ್ತು ಉತ್ತರ ನಿಮಗೇನು ಸಿಗುತ್ತದೆಯೆಂದರೆ ಅದು "ಹೌದು" ಖಂಡಿತವಾಗಿಯೂ ದೊರೆಯುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/141–42**

## ಘನ ಶಾಂತಿ

ಭಯಂಕರ ಚಂಡಮಾರುತ ಬಂದ ರಾತ್ರಿ ನಿನಗೆ ನೆನಪಿದೆಯಲ್ಲವಾ, ಆವಾಗ ಬಹಳ ಪ್ರಚಂಡ ಶಬ್ಧ ಮತ್ತು ಮಳೆ ಹನಿಯ ನೀರು ಎಲ್ಲಕಡೆ ಸಿಡಿಯುತ್ತಿದ್ದವು. ನಾನೇನು ಆಲೋಚನೆ ಮಾಡಿದೆನೆಂದರೆ, ಶ್ರೀ ಅರವಿಂದರ ಕೊನೆಗೆ ಹೋಗಿ ಎಲ್ಲಾ ಕಿಟಕಿಗಳನ್ನು ಮುಚ್ಚುವುದಕ್ಕೆ ಸಹಾಯ ಮಾಡಬೇಕೆಂದು ಅಲ್ಲಿಗೆ ಹೋದೆ. ನಾನು ಕೇವಲ ಬಾಗಿಲಷ್ಟನ್ನೇ ತೆಗೆದೆ ಮತ್ತು ಅವರು ಶಾಂತವಾಗಿ ತಮ್ಮ ಮೇಜಿನ ಹತ್ತಿರ ಕುಳಿತು, ಬರೆಯುತ್ತಿದ್ದರು. ಅಲ್ಲಿ ಇಷ್ಟು ಘನವಾದ ಶಾಂತಿ ಇತ್ತೆಂದರೆ ಹೊರಗಡೆ ಚಂಡಮಾರುತದ ಉಗ್ರತೆಯನ್ನು ಕನಸಿನಲ್ಲೂ ಎಣಿಸಲು ಆಗಲಾರದಂಥದ್ದು! ಎಲ್ಲಾ ಕಿಟಕಿಗಳು ವಿಶಾಲವಾಗಿ ತೆಗೆದಿದ್ದವು, ಒಂದು ಮಳೆ ಹನಿ ಕೂಡ ಒಳಗೆ ಸಿಡಿಯುತ್ತಿರಲಿಲ್ಲಾ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/155**

## ಶ್ರೀ ಅರವಿಂದರ ರೂಮಿನಲ್ಲಿ ಧ್ಯಾನ

*ಓ ಶ್ರೀಮಾತೆಯವರೆ ಶ್ರೀ ಅರವಿಂದರ ರೂಮಿನಲ್ಲಿ ಕುಳಿತುಕೊಳ್ಳಲು ಮತ್ತು ಧ್ಯಾನ ಮಾಡಲು ಬಿಡಬೇಕೆಂದರೆ "ನಾವು ಅವರಿಗೆ ಬಹಳಷ್ಟನ್ನು ಮಾಡಿರಬೇಕು" ನೀವು ಹೇಳಿದ್ದಿರಿ. ಹಾಗೆಂದರೇನು ಶ್ರೀಮಾತೆ? ದೇವರಿಗಾಗಿ ಏನು ಮಾಡಲು ಸಾಧ್ಯ? ದೇವರಿಗಾಗಿ ಏನನ್ನಾದರೂ ಕೊಡುವುದು ಎಂದರೆ, ನಮ್ಮಲ್ಲಿದ್ದ ಸ್ವಲ್ಪ ಏನನ್ನಾದರು ಕೊಡಬೇಕೆಂದು, ಅಥವಾ ಏನನ್ನಾದರೂ ಮಾಡಬೇಕೆಂದು ಅಥವಾ ನಾವೇನಿದ್ದೇವೆಯೋ ಅದನ್ನು ಮಾತ್ರ ಕೊಡಬಲ್ಲೆವು.*

ಒಟ್ಟಿನಲ್ಲಿ ಹೇಳಬೇಕೆಂದರೆ, ಅವರಿಗೆ ಏನಾದರು ವಸ್ತುಗಳನ್ನು ಅಥವಾ ನೀವು ಏನು ಹೊಂದಿದ್ದಿರೋ ಅವುಗಳನ್ನು ಸಮರ್ಪಿಸಬೇಕು. ನಮ್ಮ ಭಾಗಶಃ ಕೆಲಸವನ್ನು ಸಮರ್ಪಣೆ ಮಾಡುವುದು ಅಥವಾ ನಮ್ಮ ಎಲ್ಲಾ ಚಟುವಟಿಕೆಗಳನ್ನು ಅಥವಾ ನಮ್ಮನ್ನು ನಾವು ಪೂರ್ಣವಾಗಿ ಅವರಿಗೆ ಕೊಟ್ಟುಕೊಳ್ಳುವುದು ಮತ್ತು ಯಾವುದೇ ಸಂಕೋಚವಿಲ್ಲದೆ ಇದನ್ನು ಒಪ್ಪಿಕೊಳ್ಳುವದು. ಇದರಿಂದ ಅವರು ನಮ್ಮ ಪ್ರಕೃತಿಯನ್ನು ವಶಕ್ಕೆ ಪಡೆದುಕೊಂಡು ಅದನ್ನು ಪರಿವರ್ತಿಸುತ್ತಾರೆ ಮತ್ತು

ಅದನ್ನು ದೈವೀಕರಣಗೊಳಿಸುತ್ತಾರೆ. ಆದರೆ ಬಹಳಷ್ಟು ಜನರು, ಏನನ್ನೂ ಕೊಡದೆ, ಯಾವಾಗಲು ತೆಗೆದುಕೊಳ್ಳಲು ಬಯಸುತ್ತಾರೆ. ಅಂಥಾ ಜನರು ಸ್ವಾರ್ಥಿಗಳು ಮತ್ತು ಶ್ರೀ ಅರವಿಂದರ ಕೋಣೆಯಲ್ಲಿ ಧ್ಯಾನ ಮಾಡಲು ಯೋಗ್ಯವಲ್ಲದವರು.

**17 ಆಗಸ್ಟ್ 1960**

**ಅವತಾರದ ಕಾರ್ಯಗಳು**

ಅವತಾರದ ಪ್ರಜ್ಞೆ ಎನ್ನುವುದು ಒಂದು ತರಹದ ಏಣಿಯಿದ್ದಂತೆ: ಒಂದೊಂದು ಯುಗದಲ್ಲಿ ಒಬ್ಬ ಸಮರ್ಥರು ಆ ಏಣಿಗೆ ಮತ್ತೊಂದು ಮೆಟ್ಟಿಲನ್ನು ಸೇರಿಸಿದಾಗ ಸಾಮಾನ್ಯ ಪ್ರಜ್ಞೆ ಇರುವವರಿಗೆ ಏರಲಾರದಂತಹ ಹಂತವನ್ನು ಸೃಷ್ಟಿಸುತ್ತಾರೆ. ಅಂತಹ ಅತ್ಯುನ್ನತವಾದ ಅಸ್ತಿತ್ವವನ್ನು ಭೌತಿಕ ಪ್ರಜ್ಞೆಯಿಂದ ಸಂಪೂರ್ಣವಾಗಿ ಹೊರಬಂದು ಪಡೆಯಬಹುದು; ಆದರೆ ವ್ಯಕ್ತಿಯು ಆ ಏಣಿಯನ್ನು ಉಳಿಸಿಕೊಳ್ಳುವುದಿಲ್ಲ, ಆದರೆ ಅತ್ಯುನ್ನತ ಸಾಧನೆಯೆಂದರೆ ವಿಶ್ವದ ಆ ಯುಗದಲ್ಲಿ ಏಣಿಗೆ ಮತ್ತೊಂದು ಮೆಟ್ಟಿಲನ್ನು ಸೇರಿಸುವುದಲ್ಲದೆ, ಭೌತಿಕದೊಂದಿಗೆ ಸ್ಪರ್ಶವನ್ನು ಕಳೆದುಕೊಳ್ಳದೆ, ಉನ್ನತವಾದ ಹಂತಕ್ಕೆ ತಲುಪುವ ಸಾಮರ್ಥ ಮತ್ತು ಉನ್ನತವನ್ನು ನಿಮ್ನ, ಸ್ಥರದೊಂದಿಗೆ ಬೇರೆಮಾಡಿ ಶೂನ್ಯವನ್ನು ಬೇರೆ ಬೇರೆ ಸ್ಥರದಲ್ಲಿ ಸೃಷ್ಟಿಮಾಡದೆ ಇರುವುದೇ ಅಗಿದೆ. ಮೇಲೆ ಮತ್ತು ಕೆಳಗೆ ಹೋಗುವುದು ಮತ್ತು ಮೇಲಿನದನ್ನು ಕೆಳಗಿನದೊಂದಿಗೆ ಬೆಸೆಯುವುದೆ ಪೂರ್ಣ ರಹಸ್ಯವಾದ ತಿಳುವಳಿಕೆ ಆಗಿದೆ, ಮತ್ತು ಅದು “ಅವತಾರ” ಮಾಡುವ ಕೆಲಸವಾಗಿದೆ ಪ್ರತಿಸಲವೂ – ಅವರು ಏಣಿಗೆ ಮತ್ತೊಂದು ಮೆಟ್ಟಿಲನ್ನು ಸೇರಿಸುತ್ತಾರೆ, ಅದೊಂದು ಭೂಮಿಯ ಮೇಲೆ ಹೊಸ ಸೃಷ್ಟಿಯಾಗುತ್ತದೆ.... ಶ್ರೀ ಅರವಿಂದರು ಸೇರಿಸಿದ ಈ ಹೊಸ ಮೆಟ್ಟಿಲನ್ನು ಸುಪ್ರಮಾನಸ ಎಂದು ಕರೆಯುತ್ತಾರೆ; ಆ ಪರಿಣಾಮದಿಂದ ಪ್ರಜ್ಞೆಯು ಸುಪ್ರಮಾನ ಜಗತ್ತಿನಲ್ಲಿ ಪ್ರವೇಶಿಸಲು ಸಾಧ್ಯವಾಗಿದೆ ಮತ್ತು ಆದಾಗ್ಯೂ ತನ್ನ ವೈಯ್ಯಕ್ತಿಕತೆಯ ಆಕಾರವನ್ನು ಹಿಡಿದುಕೊಂಡು; ಅದರ ವೈಯಕ್ತಿಕತೆಯನ್ನು ಮತ್ತು ಕೆಳಗೆ ತಂದು ಹೊಸ ಸೃಷ್ಟಿಯನ್ನು ಸೃಷ್ಟಿಸಲು ಇದ್ದರೂ ಸಹಿತ ಇದು ಸ್ಪಷ್ಟವಾಗಿ ಇದೇ ಕೊನೆಯಲ್ಲ, ಅಲ್ಲಿ ಇನ್ನೂ ಅನೇಕ ರೀತಿಯ ಸತ್ತೆಯ ಸ್ತರಗಳಿವೆ; ಆದರೆ ನಾವೀಗ ಸುಪ್ರಮಾನಸವನ್ನು ಕೆಳಗಿಳಿಸಲು

ಕಾರ್ಯಮಾಡಬೇಕಿದೆ. ಜಗತ್ತಿನಲ್ಲಿ ನಿಜವಾದ ದೈವೀ ಕ್ರಮಬದ್ಧತೆಯನ್ನು ತರಬೇಕಿದೆ. ಅದು ಅವಶ್ಯಕವಾಗಿ ಕ್ರಮಬದ್ಧತೆಯನ್ನು ಸೃಷ್ಟಿಸುವುದೇ ಆಗಿದೆ, ಎಲ್ಲವನ್ನು ನಿಜ ಕ್ರಮದಲ್ಲಿ ಇಡುವುದೇ ಆಗಿದೆ; ಮತ್ತು ಪ್ರಮುಖವಾದ ಚೈತನ್ಯ ಅಥವಾ ಶಕ್ತಿ, ಈಗ ಸದ್ಯದಲ್ಲಿ ಕ್ರಿಯಾಶೀಲವಾಗಿರುವ ಶಕ್ತಿ ಮಹಾಸರಸ್ವತಿ; ಸಂಪೂರ್ಣ ಸಂಘಟನೆಯ ದೇವತೆ. ನಿರಂತರತೆಯನ್ನು ಸಾಧಿಸಲು ಕೆಲಸ ಮಾಡಿದಾಗ, ಅದು ನಮಗೆ ಮೇಲೆ ಮತ್ತು ಕೆಳಗಡೆ ಮತ್ತು ಮೇಲಿದ್ದಿದ್ದನ್ನು ಕೆಳಗೆ ಭೌತಿಕದೊಳಗೆ ತರುವುದಕ್ಕೆ ಸಾಧ್ಯವಾಗುತ್ತದೆ, ಅದು ಪ್ರಜ್ಞೆಯ ಒಳಗೆ ಕೆಲಸ ಮಾಡುತ್ತದೆ. ಯಾರು ಈ ಅರ್ಥದಲ್ಲಿ ಕೆಲಸ ಮಾಡುತ್ತಾರೋ, ಅವರೇ ಅವತಾರಿ, ಅವರು ಜೈಲಿನಲ್ಲಿ ಬಂಧಿಯಾಗಿರಲಿ ಮತ್ತು ಯಾರನ್ನೂ ನೋಡದಿದ್ದರೂ ಮತ್ತು ಹೊರಗೆ ಬರದಿದ್ದರೂ, ಅವರು ಅಲ್ಲಿಗೂ ಕೆಲಸ ಮಾಡುತ್ತಾರೆ, ಏಕೆಂದರೆ ಆ ಕೆಲಸ ಪ್ರಜ್ಞೆಯೊಳಗೆ ಆ ಕೆಲಸ ಮಾಡುತ್ತದೆ, ಸುಪ್ರಮಾನಸ ಮತ್ತು ಭೌತಿಕ ಸತ್ಯತೆಯೊಂದಿಗಿನ ಬೆಸೆಯುವ ಕೆಲಸ. ಅವರನ್ನು ಯಾರೂ ಗುರುತಿಸಲಿಕ್ಕಿಲ್ಲ, ಪ್ರಜ್ಞಾಪೂರ್ವಕ ಒಂದುಗೂಡಿಸುವ ಶಕ್ತಿ ಬಾಹ್ಯದಲ್ಲಿ ತೋರಿಸುವ ಸಮರ್ಥ ಶಕ್ತಿ ಅವರಲ್ಲಿರಲಿಕ್ಕಿಲ್ಲ. ಒಂದುಸಲ, ಹೇಗಾದರೂ, ಸಂಯೋಜನೆಯಾದರೆ, ಅದು ಹೊಸ ಆಕಾರಗಳನ್ನು ಸೃಷ್ಟಿಸುವ ಮೂಲಕ ಜಗತ್ತಿನಲ್ಲಿ ಪರಿಣಾಮ ಬೀರುತ್ತದೆ. ಆದರ್ಶ ಪಟ್ಟಣದಿಂದ ಪ್ರಾರಂಭಗೊಂಡು ಮತ್ತು ನ್ಯೂನ್ಯತೆ ಇಲ್ಲದ ಜಗತ್ತಿನ ಸೃಷ್ಟಿಯಲ್ಲಿ ಪರ್ಯಾವಸನಗೊಳ್ಳುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/178–79 – ಶ್ರೀಮಾತೆ**

*ಶ್ರೀಮಾತೆ ಯಾವಾಗ ಯಾರಾದರೂ ಪೂರ್ವನಿರ್ಧಾರಿತ ಮಾರ್ಗದಲ್ಲಿದ್ದರೆ, ಎಲ್ಲಾ ಸನ್ನಿವೇಶಗಳು, ಮನಸ್ಸು ಮತ್ತು ಪ್ರಾಣದ ಮಾರ್ಗಾಂತರದ ಮೂಲಕ, ಒಂದಿಲ್ಲಾ ಒಂದು ರೀತಿಯಲ್ಲಿ ಅದಕ್ಕೆ (ಮಾರ್ಗಕ್ಕೆ) ದಾರಿ ತೋರಿಸುತ್ತವೆ. ಅವನೊಳಗಿನ ಅವನ ಸ್ವಯಂ ಅಂತರಾತ್ಮ ಮತ್ತು ಮೇಲಿನ ದೈವೀ ಶಕ್ತಿ ಮನಸ್ಸು ಮತ್ತು ಹೊರ ಸನ್ನಿವೇಶಗಳ. ಏರಿಳಿತಗಳನ್ನು ಗುರಿಯಕಡೆ ಉಪಯೋಗಿಸಿಕೊಳ್ಳುತ್ತವೆ.*

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/30–31 – ಶ್ರೀಮಾತೆ**

# ಶ್ರೀ ಅರವಿಂದರ ಯೋಗದ ಯೋಜನೆ

– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು

ಸಪ್ತ ಚತುಷ್ಟಯದಿಂದ ಆಯ್ದ ಕೆಲ ಭಾಗಗಳು
(ಪುನರ್ ಸಂಯೋಜಿತಗೊಳಿಸಿರುವಂತೆ)

**ಯೋಜನಾ**

**ಸಪ್ತ ಚತುಷ್ಟಯಗಳು**

**1. ಸಿದ್ಧಿ ಚತುಷ್ಟಯ**

ಶುದ್ಧಿ, ಮುಕ್ತಿ, ಭುಕ್ತಿ, ಸಿದ್ಧಿ.

ಶುದ್ಧಿ

ಪ್ರಾಣಿಕವು ವಾಸನೆಗಳಿಂದ, ಬಯಕೆಗಳಿಂದ ಮುಕ್ತವಾಗಬೇಕು – ಅಂದರೆ ಆಸಕ್ತಿ ಅಥವಾ ಅಂಟಿಕೊಂಡಿರುವುದು – ಈ ಭಾವನೆಗಳಿಂದ ಬಿಡುಗಡೆ ಹೊಂದುವುದು. ಉದಾ. ನಾನು ಅದನ್ನು ಬಯಸುತ್ತೇನೆ, ಅದಿಲ್ಲದೆ ನಾನಿರಲಾರೆ.

ಕಾಮನೆಗಳು, ಇಚ್ಛೆಗಳು: ಉದಾ. ನನಗದು ಬೇಕು. ರಾಗ, ದ್ವೇಷ, ಆದ್ಯತೆ, ಮನಸ್ಸಿನ ಕೆಲಸಗಳಿಂದ ಬಿಡುಗಡೆ, ಉದಾ. ನಾನು ಇದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತೇನೆ. ಇವುಗಳಿಗೆ ವಿರುದ್ಧವಾದವುಗಳೂ ಇವೆ, ನಿಸ್ಸಂಗತ್ವ, ಬಯಸದಿರುವುದು, ಹಂಬಲಿಸದಿರುವುದು, ಆದ್ಯತೆಗಳಿಲ್ಲದಿರುವುದು. ನಾವು ಇವುಗಳಿಂದ ಬಿಡುಗಡೆ ಹೊಂದಲೇಬೇಕು. ನಿಮಗಿದು ಸಾಧ್ಯವಾಯಿತೆಂದರೆ ಪರಿಪೂರ್ಣ ಸಮತ್ವ ಲಭಿಸುವುದು. ಆಗ ಸಹಜವಾಗಿ ಪರಿಪೂರ್ಣ ಶಾಂತಿ, ಪರಿಪೂರ್ಣ ಅಥವಾ ಶುದ್ಧ ಭೋಗ ಲಭಿಸುವುವು. ಶಾಂತಿ ಅನ್ನುವುದು ಆನಂದದಿಂದ ಅಭಾವ, ಯಾರಿಗೆ ಶಾಂತಿ ಲಭಿಸಿದೆಯೋ ಅವರು ನಿರ್ಗುಣ ಬ್ರಹ್ಮನಲ್ಲಿ ನೆಲೆಸಿರುತ್ತಾರೆ. ಶುದ್ಧ ಭೋಗವು ಆನಂದದ ಸಕಾರಾತ್ಮಕ ಸ್ಥಿತಿ. ಯಾರು ತ್ರಿಗುಣಾತೀತ ಆನಂತ ಬ್ರಹ್ಮ ಸ್ಥಿತಿಯಲ್ಲಿ ನೆಲೆಸಿರುವುರೋ ಅವರಿಗೆ ಅಂಥ ಶುದ್ಧ ಭೋಗ ದೊರೆಯುವುದು. ಪರಿಪೂರ್ಣ ಶಾಂತಿಯ ಆಧಾರಿತ ಶುದ್ಧ ಭೋಗವನ್ನು ಅವರು ಭೋಗಿಸುವುರು. ಇಚ್ಛಾಪೂರ್ತಿಯ ಮೂಲಕ ದೊರೆಯುವ ಭೋಗದಲ್ಲಿ ತೊಂದರೆ, ಅಸುರಕ್ಷಾಭಾವ, ಸೀಮಿತತೆ, ಸಂಕುಚಿತ ಭಾವ ಇರುವುದು. ಶುದ್ಧ ಭೋಗವು ಶಾಂತವಾಗಿರುವುದು, ಆತ್ಮ

ನಿರ್ಭರವಾಗಿರುವುದು, ಯಶಸ್ವಿ, ಮಿತಿ ಇಲ್ಲದಿರುವಿಕೆ, ವೈರಾಗ್ಯ, ಅಮರತ್ವ, ಆನಂದಗಳಿಂದ ತುಂಬಿರುವುದು. ಅದು ಹರ್ಷ ಅಲ್ಲ, ಸುಖ ಅಲ್ಲ, ಅದು ಆನಂದ. ಅದು ಅಮೃತ, ಅದು ದಿವ್ಯತೆ, ಅಮರತ್ವ, ಅದು ಭಗವಂತನೊಡನೆ ಏಕೀಭವಿಸುವಿಕೆ, ಆಗ (ಆತ್ಮನಿಗೆ) ಕರ್ಮ ಮಾಡಬೇಕಾದ ಅಗತ್ಯ ಇರುವುದಿಲ್ಲ, ಬದಲಾಗಿ ಭಗವಂತನು ಪ್ರಸಾದಿಸಿರುವುದನ್ನು ಆನಂದದಿಂದ ಸ್ವೀಕರಿಸುವ ಸಿದ್ಧತೆ ಇರುವುದು.

*

## 2. ಬ್ರಹ್ಮ ಚತುಷ್ಟಯ

ಸರ್ವಂ, ಆನಂತಂ, ಜ್ಞಾನಂ, ಆನಂದಂ ಬ್ರಹ್ಮ.

ಇಡೀ ವಿಶ್ವದಲ್ಲಿ ಒಂದೇ ತತ್ವವನ್ನು ಕಂಡಾಗ ಸರ್ವಂ ಬ್ರಹ್ಮ ಸ್ಥಿತಿ ಲಭಿಸುವುದು. ಆನಂತ ಶಕ್ತಿ ಅಥವಾ ಗುಣವೇ ಎಲ್ಲದರಲ್ಲೂ ಕಂಡಾಗ ಆನಂತಂ ಬ್ರಹ್ಮ ಸಾಕ್ಷಾತ್ಕಾರವಾಗುವುದು.

ಎಲ್ಲ ಅರಿವೂ ಉಳ್ಳ ಪ್ರಜ್ಞೆಯು ಎಲ್ಲದರಲ್ಲೂ ಇದೆ ಎಂಬುದು ಅನುಭವವಾದಾಗ ಜ್ಞಾನಂ ಬ್ರಹ್ಮ ಸಾಕ್ಷಾತ್ಕಾರವಾಗುವುದು.

ಸರ್ವವ್ಯಾಪಿಯಾದ ಪ್ರಜ್ಞೆ ಅಥವಾ ಚೈತನ್ಯದಲ್ಲಿ ಆನಂದ ಇದೆ, ಅದು ಸರ್ವತ್ರ ವ್ಯಾಪಿಸಿದೆ ಎಂಬ ಅನುಭವವೇ ಆನಂದಂ ಬ್ರಹ್ಮ ಸ್ಥಿತಿಯ ಸಾಕ್ಷಾತ್ಕಾರ.

*

## 3. ಕರ್ಮ ಚತುಷ್ಟಯ

ಕೃಷ್ಣ, ಕಾಳಿ, ಕರ್ಮ, ಕಾಮ –

ಕೃಷ್ಣನು ಜಗತ್ತಿನಲ್ಲಿ ಆನಂದವನ್ನು ಅನುಭವಿಸುವ ಈಶ್ವರನು.

ಕಾಳಿಯು ಈಶ್ವರನ ಇಚ್ಛೆ ಅಥವಾ ಸಂಕಲ್ಪದಂತೆ ಜಗದ್ವ್ಯಾಪಾರವನ್ನು ನಡೆಸುವವಳು.

ಕರ್ಮ ಅಂದರೆ ದಿವ್ಯಕಾರ್ಯ.

ಕಾಮ ಅಂದರೆ ದಿವ್ಯ ಭೋಗ.

*

**4. ಶಾಂತಿ ಚತುಷ್ಟಯ**

ಸಮತೆ, ಶಾಂತಿ, ಸುಖ, ಹಾಸ್ಯ.

ಸಮತ್ವ. ಆಂತರಿಕ ಶಾಂತಿಯ ಆಧಾರವೇ ಸಮತ್ವವು. ಅಂದರೆ ಬಾಹ್ಯದಲ್ಲಿ ಏನೇ ತೋರಲಿ, ಸುಖ ಇರಲಿ ಅಸುಖ ಇರಲಿ, ದುರಾದೃಷ್ಟ ಇರಲಿ ಅದೃಷ್ಟ ಇರಲಿ, ನೋವಿರಲಿ ನಲಿವಿರಲಿ, ಗೌರವ ಇರಲಿ ಅಗೌರವ ಇರಲಿ, ಹೊಗಳಿಕೆ ಇರಲಿ ತೆಗಳಿಕೆ ಇರಲಿ, ಸ್ನೇಹ ಇರಲಿ ಶತ್ರುತ್ವ ಇರಲಿ, ಪಾಪಿ ಅಥವಾ ಸಂತ ಅಥವಾ ಭೌತಿಕವಾಗಿ ಉಷ್ಣ ಅಥವಾ ಶೀತ ಏನೇ ಇರಲಿ, ಹೀಗೆ ಮೇಲೆ ತೋರಿಕೆಯಲ್ಲಿ ಏನೇ ಇರಲಿ ಎಲ್ಲವನ್ನು ಸಮಾನ ಮನಸ್ಸಿನಿಂದ, ಶಾಂತದಿಂದ ಸ್ವೀಕರಿಸುವ ಸಾಮರ್ಥ್ಯವೇ ಸಮತ್ವವು. ಸಮತ್ವವು ಎರಡು ವಿಧವಾಗಿರುತ್ತದೆ, – ಸಕ್ರಿಯ ಮತ್ತು ತಟಸ್ಥ. ಬಾಹ್ಯ ಜಗತ್ತಿನ ಚಲನೆಗಳನ್ನು ಸ್ವೀಕರಿಸುವಲ್ಲಿ ಸಮತ್ವ ಹಾಗೂ ಅವುಗಳಿಗೆ ಪ್ರತಿಕ್ರಿಯಿಸುವಲ್ಲಿ ಸಮತ್ವ.

*

**ನತಿ:** ಭಗವಂತನ ಸಂಕಲ್ಪಕ್ಕೆ ಆತ್ಮ ಮಣಿಯುವುದೇ ನತಿ. ಎಲ್ಲದರ ಸ್ಪರ್ಶದಲ್ಲೂ ಭಗವಂತನ ಸ್ಪರ್ಶವನ್ನೇ ಅನುಭವಿಸುವುದು, ಎಲ್ಲದರಲ್ಲೂ ಭಗವಂತನ ಲೀಲೆಯನ್ನೇ ಕಾಣುವುದು. ನತಿ ಅನ್ನುವುದು ತಿತಿಕ್ಷಾ ಜೊತೆಗೆ, ದುಃಖದ ಭಾವದ ಜೊತೆಗೆ ಬರುವುದುಂಟು, ಆದರೆ ಅದನ್ನು ಭಗವಂತನ ಇಚ್ಛೆ ಎಂದು ಸ್ವೀಕರಿಸುವುದು. ಸುಖ–ದುಃಖಗಳನ್ನು ಭಗವಂತನ ಕಾರ್ಯ ಯೋಜನೆಯಲ್ಲಿ ಸಮಾನ ಎಂದು ಸ್ವೀಕರಿಸುವುದು, ಎಲ್ಲವೂ ಭಗವಂತನ, ಶ್ರೀಕೃಷ್ಣನ ಲೀಲೆ, ಆದ್ದರಿಂದ ಆನಂದಮಯವಾಗಿದೆ ಎಂದು ಸ್ವೀಕರಿಸುವುದು. ಈ ಕೊನೆಯ ಸ್ಥಿತಿಯು ಪೂರ್ಣಯೋಗಿಯ ಸ್ಥಿತಿಯು – ಏಕೆಂದರೆ ಸತತವಾಗಿ ಆನಂದದಿಂದ ಭಗವಂತನಿಗೆ ನತ – ನಮಸ್ಕಾರ ಮಾಡುವುದರಿಂದ ನಾವು ದುಃಖ ನೋವು ಮುಂತಾದವುಗಳನ್ನು ಸಂಪೂರ್ಣವಾಗಿ ಇಲ್ಲವಾಗಿಸಿ ಬಿಡುತ್ತೇವೆ, ದ್ವಂದ್ವಗಳಿಂದ ಮುಕ್ತರಾಗುತ್ತೇವೆ, ಅತ್ಯಂತ ಸಣ್ಣ, ಕ್ಷುಲ್ಲಕವೆನಿಸುವ, ಸಂಪೂರ್ಣ ಅಸಂಗತ. ವಿರುದ್ಧವೆಂದು ತೋರುವ ಜೀವನದ ಸಂಗತಿಗಳಲ್ಲಿ, ಈ ಮಾನವ ಶರೀರದಲ್ಲಿ ಅನುಭವಿಸುವ ಎಲ್ಲದರಲ್ಲಿಯೂ ಬ್ರಹ್ಮಾನಂದವನ್ನೇ ಕಾಣುತ್ತೇವೆ. ಹೆದರಿಕೆ ಹಾಗೂ ಯಾತನೆಯಿಂದ ಸಂಪೂರ್ಣ ಮುಕ್ತರಾಗುತ್ತೇವೆ. ಆನಂದಂ ಬ್ರಾಹ್ಮಣೋ ವಿದ್ವಾನ್‌ನ ಬಿಭೇತಿ ಕುತಶ್ಚನ ನಾವು ತಿತೀಕ್ಷೆ, ಉದಾಸೀನತೆಗಳಿಂದ ಆರಂಭ ಮಾಡಿದರೂ ಕೊನೆಗೆ ಈ ಆನಂದದಲ್ಲಿಯೇ

ಸಮತ್ವದ ಸಿದ್ಧಿಯನ್ನು ಪಡೆಯಬೇಕು. ಯೋಗಿಯಾದವನು ಗೆಲವು, ಸೋಲು, ಯಶ–ಅಪಯಶ, ಸುಖ ದುಃಖ, ಹೊಗಳಿಕೆ. ತೆಗಳಿಕೆಗಳನ್ನು ಸಮಾನವಾಗಿ ತೆಗೆದುಕೊಳ್ಳುತ್ತಾನೆ. ಸಮ ಆನಂದದಿಂದ ಸ್ವೀಕರಿಸುತ್ತಾನೆ, ಮೊದಲು ಬುದ್ಧಿ ಯೋಗದಿಂದ ತನ್ನ ಮಾನಸಿಕ ಮತ್ತು ಸಂವೇದನಾತ್ಮಕ ಪ್ರತಿಕ್ರಿಯೆಗಳ ಮೂಲಕ, ತನ್ನ ಅನುಭವದ ನಿಜ ಸ್ವಭಾವವನ್ನು ಕುರಿತು ಆಳವಾಗಿ ವಿಚಾರ ಮಾಡುವುದರ ಮೂಲಕ, ರಹಸ್ಯವಾಗಿ ಆನಂದಮಯವಾಗಿರುವ ತನ್ನ ಆತ್ಮವನ್ನು ಕುರಿತು ವಿಚಾರ ಮಾಡುವುದರ ಮೂಲಕ ಎಲ್ಲವನ್ನೂ ಏಕೋಭಾವದಿಂದ, ಸಮತೆಯಿಂದ ಕಾಣುತ್ತಾನೆ. ಎಲ್ಲ ಸಾಮಾನ್ಯ ಅನುಭವಗಳ ಮೌಲ್ಯ ಬದಲಾಗಿ ಬಿಡುತ್ತದೆ, ಅಮಂಗಳವು ಮಂಗಳಕರವಾಗಿ ತೋರುತ್ತದೆ, ಸೋಲು–ಅಪಜಯಗಳು ಭಗವಂತನ ತತ್ಕ್ಷಣದ ಉದ್ದೇಶದ ಪೂರ್ತಿ, ಅಂತಿಮ ಗೆಲುವಿನ ಒಂದು ಹೆಜ್ಜೆ. ದುಃಖ ಮತ್ತು ಯಾತನೆಗಳು ಸಂತೋಷದ ರಹಸ್ಯ ಹಾಗೂ ವಿಕೃತ ರೂಪಗಳಾಗಿ ತೋರುತ್ತವೆ. ಭೌತಿಕ ಶರೀರದ ಯಾತನೆಯನ್ನು ತಾಳಿಕೊಳ್ಳುವುದು ಮಾನವನಿಗೆ ಕಠಿಣ, ಆದರೆ ಕೊನೆಗೆ ಅದು ಕೂಡ ಒಂದು ಅನುಭವವಾಗಿ ಬದಲಾಗುವುದು. ಭೌತಿಕ ಆನಂದವಾಗಿ ನಿಲ್ಲುವುದು. ಆದರೆ ಇದು ಕೊನೆಯ ಸ್ಥಿತಿ, ಭೌತಿಕದಲ್ಲಿ ಬಂಧಿತನಾಗಿರುವ, ಮನಸ್ಸಿಗೆ ಅಧೀನವಾಗಿರುವ, ಮಾನವನು ಇವುಗಳಿಂದ ಹೊರಬಂದು, ಮನಸ್ಸನ್ನು ಗೆದ್ದಾಗ ಹಾಗೂ ಕೊನೆಗೆ ಭೌತಿಕ ಶರೀರದ ಎಲ್ಲ ಭಾಗಗಳಲ್ಲಿ ಆನಂದಮಯ ಪುರುಷನ ಸಾಕ್ಷಾತ್ಕಾರವಾದಾಗ ಆಗುವ ಸ್ಥಿತಿ.

*

**5. ಶಕ್ತಿ ಚತುಷ್ಟಯ**

ವೀರ್ಯಶಕ್ತಿ, ಚಂಡೀಭಾವ, ಶ್ರದ್ಧೆ.

***ವೀರ್ಯ: ಚಾತುರ್ವರ್ಣ್ಯ***

ವೀರ್ಯ ಅಂದರೆ ಮೂಲಭೂತ ಸ್ವಭಾವ ಶಕ್ತಿ. ಅಥವಾ ಚಾತುರ್ವರ್ಣ್ಯದಲ್ಲಿ ದೈವೀ ಸ್ವಭಾವ ವ್ಯಕ್ತವಾಗುವ ಚತುರ್ವಿಧ ರೀತಿ. ಬ್ರಾಹ್ಮಣ್ಯದಲ್ಲಿ–ಬ್ರಹ್ಮಿ ಶಕ್ತಿ, ಬ್ರಹ್ಮ ತೇಜಸ್ಸು ಕ್ಷೇತ್ರದಲ್ಲಿ ಕ್ಷಾತ್ರ ಶಕ್ತಿ, ಕ್ಷಾತ್ರ ತೇಜಸ್ಸು, ವೈಶ್ಯ ಸ್ವಭಾವದಲ್ಲಿ ಶಕ್ತಿ ಮತ್ತು ತೇಜಸ್ಸು, ಶೂದ್ರ ಸ್ವಭಾವದಲ್ಲಿ ಶಕ್ತಿ ಮತ್ತು ತೇಜಸ್ಸು. ಋಷಿ ಮುನಿಗಳು ಚಾತುರ್ವರ್ಣ್ಯವನ್ನು ಸಾಮಾಜಿಕ ವಿಭಜನೆಗಾಗಿ ಮಾತ್ರ ಮಾಡಿರಲಿಲ್ಲ; ಭಗವಂತನು

ಮೂಲಭೂತ ಸ್ವಭಾವದಲ್ಲಿ ಪ್ರಕಟವಾಗುವುದನ್ನು ಗುರುತಿಸಲು ಮಾಡಿದ್ದರು; ನಮ್ಮ ಶಾರೀರಕ, ಸಾಮಾಜಿಕ ವ್ಯವಸ್ಥೆಗಳು ಮಾನವ ಜೀವನವನ್ನು ಒಂದು ಸಂಕೇತದಡಿಯಲ್ಲಿ ತರುವ ಪ್ರಯತ್ನವಾಗಿದೆ. ಇದೊಂದು ಗೊಂದಲಮಯ ಪ್ರಯತ್ನ, ಪ್ರಕಟವಾಗುವ ದೈವೀ ಪ್ರಜ್ಞೆಯನ್ನು ನಿರೂಪಿಸುವ ವಿಕೃತ ಪ್ರಯತ್ನ ಅಥವಾ ಅಣಕು ಅಂತಲೂ ಹೇಳಬಹುದು. ಪ್ರತಿ ವ್ಯಕ್ತಿಯಲ್ಲೂ ನಾಲ್ಕು ಧರ್ಮಗಳಿವೆ, ಆದರೆ ಯಾವುದಾದರೊಂದು ಹೆಚ್ಚು ಪ್ರಬಲವಾಗಿರುತ್ತದೆ, ಯಾವುದರ ಪ್ರಾಬಲ್ಯದಲ್ಲಿ ಅವನು ಜನಿಸಿರುತ್ತಾನೋ ಅದು ಅವನ ಧರ್ಮ, ಜಾತಿ, ಕಾರ್ಯ ವೈಖರಿಗಳನ್ನು ನಿರೂಪಿಸುತ್ತದೆ. ಉಳಿದವುಗಳು ಪ್ರಬಲವಾಗಿರುವ ಗುಣಕ್ಕೆ ಅಧೀನವಾಗಿ, ಅಥವಾ ಪೂರಕವಾಗಿರುತ್ತವೆ. ಯಾವ ಬ್ರಾಹ್ಮಣನೇ ಆದರೂ ಕ್ಷೇತ್ರ ತೇಜವಿಲ್ಲದೇ, ವೈಶ್ಯಶಕ್ತಿ ಹಾಗೂ ಶೂದ್ರಶಕ್ತಿ ಇಲ್ಲದೇ ಪೂರ್ಣ ಬ್ರಾಹ್ಮಣನಾಗಲಾರ, ಆದರೆ ಅವೆಲ್ಲವೂ ಅವನ ಮುಖ್ಯ ಗುಣವಾದ ಬ್ರಾಹ್ಮಣ್ಯವನ್ನು ಸಾರ್ಥಕಗೊಳಿಸಲು ಯತ್ನಿಸಬೇಕು ಭಗವಂತನು ನಾಲ್ಕು ಪ್ರಜಾಪತಿ ಅಥವಾ ಮನು ಆಗಿ ಪ್ರಕಟನಾಗುತ್ತಾನೆ. (ಚತ್ವಾರೋ ಮನವ – ಗೀತಾ) ಪ್ರತಿ ಮನುಷ್ಯನೋ ಈ ನಾಲ್ಕರಲ್ಲಿನ ಒಂದಂಶದಿಂದಲೇ ಉದ್ಭವಿಸುತ್ತಾನೆ. ಮೊದಲನೆಯದು (ಬ್ರಾಹ್ಮಣ್ಯ) ವಿವೇಕ, ಜ್ಞಾನ, ವೈಶಾಲ್ಯ, ಎರಡನೆಯದು (ಕ್ಷಾತ್ರ) ಮುಂದಾಳುತ್ವ, ಶಕ್ತಿ, ಬಲ, ಮೂರನೆಯದು (ವೈಶ್ಯ) ಜಾಣತನ ಮತ್ತು ಉಪಭೋಗ, ನಾಲ್ಕನೆಯದು ಕೆಲಸ ಮತ್ತು ಸೇವೆ, ಈ ಗುಣಗಳಿಂದ ಕೂಡಿವೆ. ಪರಿಪೂರ್ಣನಾದ ವ್ಯಕ್ತಿಯು ಈ ನಾಲ್ಕೂ ಗುಣಗಳನ್ನು ತನ್ನಲ್ಲಿ ಬೆಳಸಿಕೊಳ್ಳುತ್ತಾನೆ, ಏಕಕಾಲಕ್ಕೆ ವಿವೇಕ, ವೈಶಾಲ್ಯಗಳ ದೇವತೆ, ನಾಯಕತ್ವ ಮತ್ತು ಅಧಿಕಾರ ಬಲದ ದೇವತೆ, ಜಾಣತನ ಮತ್ತು ಉಪಭೋಗಗಳ ದೇವತೆ, ಮತ್ತು ಕೆಲಸ ಮತ್ತು ಸೇವೆಯ ದೇವತೆಗಳು ಅವನಲ್ಲಿರುತ್ತಾರೆ. ಅವುಗಳ ಪೈಕಿ ಓರ್ವ ದೇವತೆ ಮಾತ್ರ ಮುಂದೆ ನಿಂತು, ಉಳಿದವರು ಹಿಂದಿನಿಂದ ಕೆಲಸ ಮಾಡುತ್ತಾರೆ.

*

ಶೂದ್ರನೆಂದರೆ ನಿಮ್ನ ಜಗತ್ತಿನಲ್ಲಿ, ಅದರ ಪ್ರಕೃತಿಯಲ್ಲಿ ಇಳಿದು ಬಂದ ಭಗವಂತ. ಭಗವಂತನ ಲೀಲೆಯನ್ನು ಭೌತಿಕದಲ್ಲಿ, ಭೌತಿಕ ಜಗದಲ್ಲಿ ಪ್ರಕಟಪಡಿಸುವ ವ್ಯಕ್ತಿ ಅವನು. ಈ ದೃಷ್ಟಿಯಿಂದ, ನಾಲ್ಕರಲ್ಲಿ ಅವನ ಶಕ್ತಿಯೇ ದೊಡ್ಡದು, ಏಕೆಂದರೆ ಅವನು ನೇರವಾಗಿ ಆತ್ಮ ಸಮರ್ಪಣೆಯ ಕಡೆಗೆ ಹೋಗುತ್ತಾನೆ. ಆದರೆ ಶೂದ್ರನು ಜ್ಞಾನ, ಅಧಿಕಾರ. ಬಲ, ಚಾಣಾಕ್ಷತನ ಇವುಗಳಿಂದ ದೂರವಾಗಿದ್ದಾನೆ, ತಮೋ

ಗುಣದಲ್ಲಿ ಸಂಪೂರ್ಣ ಲೀನನಾಗಿದ್ದಾನೆ. ಅವನು ತನ್ನಲ್ಲಿ ಬ್ರಾಹಣ್ಯವನ್ನು, ಕ್ಷತ್ರ ತೇಜ ಮತ್ತು ವೈಶ್ಯತ್ವವನ್ನು ಮರಳಿ ಪಡೆಯಬೇಕಾಗಿದೆ. ಅವುಗಳನ್ನು ಭಗವಂತನ ಸೇವೆಗೆ ಮೀಸಲಿರಿಸಬೇಕಾಗಿದೆ. ಮಾನವನ ಹಾಗೂ ಇತರ ಜೀವಿಗಳ ಸೇವೆಯಲ್ಲಿ ತೊಡಗಿಸಬೇಕಾಗಿದೆ. ಅವನಲ್ಲಿ ಇರುವ ಕಾಮ ತತ್ವವು ಕೇವಲ ಭೌತಿಕ ಸುರಕ್ಷಿತತೆ, ಸ್ವಾರ್ಥಕ್ಕೆ ಸೀಮಿತವಾಗಿರದೇ, ಭೌತಿಕದಲ್ಲಿ ತತ್ವವು ದಾಸ್ಯಲಿಪ್ಸಾ ಹಾಗೂ ಆತ್ಮ ಸಮರ್ಪಣ ಮೂಲಕ ಭಗವಂತನಿಗೆ, ಮಾನವನಲ್ಲಿರುವ ಭಗವಂತನಿಗೆ ಭಗವಂತನಿಗಾಗಿ ನಿಃಸ್ವಾರ್ಥ ಸೇವೆ, ಮಾನವನಲ್ಲಿರುವ ಭಗವಂತನ ಸೇವೆಯಲ್ಲಿ ಸಾರ್ಥಕತೆ ಕಂಡುಕೊಳ್ಳಬೇಕು. ವೈಶ್ಯನು ದ್ವಾಪರ, ಕ್ಷತ್ರಿಯನು, ತ್ರೇತಾ, ಬ್ರಾಹ್ಮಣನು ಸತ್ಯಯುಗದ ಪ್ರಮುಖ ಆತ್ಮವಾಗಿರುವಂತೆ, ಶೂದ್ರನು ಕಲಿಯುಗದ ಪ್ರಮುಖ ಆತ್ಮವಾಗಿದ್ದಾನೆ.

*

ಭಗವಂತನ ಪ್ರೇಮ ಮತ್ತು ವಿವೇಕದಲ್ಲಿ ನಮಗೆ ನಂಬಿಕೆ ಇರಬೇಕು. ಅವನು ನಮ್ಮ ಮೂಲಕ ಕೆಲಸ ಮಾಡುತ್ತಾನೆ, ನಮಗೆ ಯೋಗದ ಸಿದ್ಧಿಯನ್ನು ಪ್ರಸಾದಿಸುತ್ತಾನೆ, ನಮ್ಮ ಜೀವನದ ಎಲ್ಲವನ್ನೂ ಅವನೇ ನಡೆಸುತ್ತಾನೆ, ಎಷ್ಟೇ ಕೆಡ್ಡದಾಗಿ ಕಂಡರೂ ಎಲ್ಲವನ್ನೂ ನಮ್ಮ ಒಳಿತಿಗಾಗಿ, ಕಲ್ಯಾಣಕ್ಕಾಗಿ ಮಾಡುತ್ತಾನೆ ಎಂಬ ನಂಬಿಕೆ ಇರಬೇಕು. ಅವನು ಪ್ರಕಟಮಾಡಿದ ಶಕ್ತಿಯಲ್ಲಿ ನಮಗೆ ವಿಶ್ವಾಸ ಇರಬೇಕು, ಈ ಆಧಾರದಲ್ಲಿ ಆ ಶಕ್ತಿ ವರ್ಧಿಸುತ್ತದೆ, ಕಾರ್ಯ ಮಾಡುತ್ತದೆ, ದೈವೀ ಜ್ಞಾನ–ಶಕ್ತಿ, ಆನಂದಗಳನ್ನು ಯೋಗದಲ್ಲಿ ಹಾಗೂ ನಮ್ಮ ನಿಜ ಜೀವನದಲ್ಲಿ ಸಾಕಾರಗೊಳಿಸುತ್ತದೆ ಎಂಬ ದೃಢ ವಿಶ್ವಾಸ ಬೇಕು. ಶ್ರದ್ಧೆ ಇಲ್ಲದಿದ್ದರೆ ಶಕ್ತಿ ಇಲ್ಲ; ಅಪರಿಪೂರ್ಣ ಶ್ರದ್ಧೆ ಅಂದರೆ ಅಪರಿಪೂರ್ಣ ಶಕ್ತಿ. ಈ ಅಪರಿಪೂರ್ಣತೆಯು ನಂಬಿಕೆಯ ಶಕ್ತಿಯಲ್ಲಿರಬಹುದು ಅಥವಾ ಅದರ ಸಾಕ್ಷಾತ್ಕಾರದಲ್ಲಿರಬಹುದು. ಮೊದಲು ವಿಶ್ವಾಸದ, ನಂಬಿಕೆಯ ಪೂರ್ಣಶಕ್ತಿ ಇರಲೇಬೇಕು, ಏಕೆಂದರೆ ಆರಂಭದಲ್ಲಿಯೇ ನಮಗೆ ಪೂರ್ಣ ಸಾಕ್ಷಾತ್ಕಾರ ಆಗುವುದಿಲ್ಲ. ನಾವು ಏನೇ ತಪ್ಪು ಮಾಡಲಿ, ಎಡವಲಿ, ಬೀಳಲಿ ನಮ್ಮ ನಂಬಿಕೆಯ ಶಕ್ತಿ ನಮ್ಮನ್ನು ರಕ್ಷಿಸುವುದು. ನಮಗೆ ಕಾಣದಿರುವಾಗ, ಭಗವಂತನು ಬೆಳಕು, ಜ್ಞಾನವನ್ನು ಹಿಡಿದಿಟ್ಟುಕೊಂಡಿದ್ದಾನೆ ಎಂದು ತಿಳಿಯಬೇಕು.

ಗೆಲುವಿನ ಹೆಜ್ಜೆಯಾಗಿ ಸೋಲನ್ನು ಹೇರುವಂತೆ, ತಪ್ಪನ್ನು ಕೂಡ ಜ್ಞಾನದ ಹೆಜ್ಜೆಯನ್ನಾಗಿ ನಮ್ಮ ಮೇಲೆ ಆ ಭಗವಂತ ಹೇರುತ್ತಾನೆ.

**6. ವಿಜ್ಞಾನ ಚತುಷ್ಟಯ**

ಜ್ಞಾನ, ತ್ರಿಕಾಲ ದೃಷ್ಟಿ, ಅಷ್ಟ ಸಿದ್ಧಿ, ಸಮಾಧಿ.

ಜ್ಞಾನ (ವಿಜ್ಞಾನ): ಅಂತರ್ಬೋಧೆ ಮತ್ತು ವಿವೇಕ. ಅಂತರ್ಬೋಧೆಯು ಸತ್ಯವನ್ನು ಬೇರ್ಪಡಿಸುವ, ಹಾಗೇಯೇ ಅದು ಸತ್ಯ ಏಕೆ ಎಂಬುದನ್ನು ಕೂಡ ತರ್ಕಬದ್ಧವಾಗಿ ನಿರೂಪಿಸುವ ಶಕ್ತಿಯುಳ್ಳದ್ದು. ವಿವೇಕವು ಅವರ್ಶ್ಯವಿರುವ ಮಿತಿಯನ್ನು, ವ್ಯತ್ಯಾಸವನ್ನು ನಿರೂಪಿಸುವ ಹಾಗೂ ಬೌದ್ಧಿಕ ತಪ್ಪು ಒಳ ನುಸುಳದಂತೆ ಅಥವಾ ಸಂಪೂರ್ಣ ಸತ್ಯದ ಬದಲಾಗಿ ಅಪರಿಪೂರ್ಣ ಸತ್ಯವನ್ನೇ ಸ್ವೀಕರಿಸುವ ತಪ್ಪು ಮಾಡದಂತೆ ಎಚ್ಚರಿಸುವ ಶಕ್ತಿಯುಳ್ಳದ್ದು.

ಮಾನವನ ಪ್ರಗತಿಯ ದೃಷ್ಟಿಯಿಂದ ಈ ಯುಗದಲ್ಲಂತೂ ವಿವೇಕದ ಮಹತ್ವ ತುಂಬಾ ಇದೆ. ಸದ್ಯದ ಕಾಲದಲ್ಲಂತೂ ಮಹಾಪುರುಷರೆನಿಸಿಕೊಳ್ಳುವ ಎಲ್ಲರಲ್ಲೂ ವಿಜ್ಞಾನದ ಶಕ್ತಿಯು, ಅವರವರ ಸಾಮರ್ಥ್ಯ, ಸ್ಥಳ, ಸ್ವಭಾವ, ಧರ್ಮಗಳಿಗಿಂತ ಹೆಚ್ಚಾಗಿ ಕೆಲಸ ಮಾಡುವ ಬದಲು ವಿವೇಕವೇ ಆ ಕೆಲಸ ಮಾಡುತ್ತದೆ. ಅದು ವಿವೇಕದ ಸಹಾಯಕನಂತೆ, ಕೆಲ ಸಲ ಮಾರ್ಗದರ್ಶಕನಂತೆ ಕೆಲಸ ಮಾಡುತ್ತದೆ. ನೇರವಾಗಿ ನಮಗೆ ಅಂತರ್ಬೋಧೆ ಬಂದಾಗ, ವಿವೇಕ, ಸ್ಮೃತಿ, ಕಲ್ಪನೆ, ತರ್ಕ ಇವೆಲ್ಲ ಅದನ್ನು ಹಿಡಿದು ಅದನ್ನು ಮಿಶ್ರಿತ ಸತ್ಯ ಅಥವಾ ತಪ್ಪಿನಿಂದ ಕೂಡಿಡುವಂಥದು ಎಂದು ಬಿಂಬಿಸಿ, ವ್ಯಕ್ತಿಯ ಸ್ವಭಾವ, ನಿರ್ಣಯ ಮುಂತಾದವುಗಳನ್ನು ಪರಿಶುದ್ಧಗೊಳಿಸಿ ಅಂತರ್ಬೋಧೆಯ ಸತ್ಯವನ್ನು ಸ್ವಭಾವ, ಸ್ತರಕ್ಕೆ ಎತ್ತರಿಸುವ ಬದಲು ಅಂತರ್ಬೋಧೆಯ ಸತ್ಯವನ್ನು ಸ್ವಭಾವ, ಸಂಸ್ಕಾರ ಮತ್ತು ಆದ್ಯತೆಗಳ ಮಟ್ಟಕ್ಕೆ ಇಳಿಸಿಬಿಡುತ್ತವೆ. ಅವುಗಳ ಬೆಳಕು ವಿವೇಕದ ಬೆಳಗಿಂತ ಪ್ರಖರವಾಗಿರುತ್ತದೆ. ಆದರೆ ವಿವೇಕವು ಚೆಲ್ಲುವ ನೆರಳು ಅಜ್ಞಾನದ ಮಂಜಿಗಿಂತ ಹೆಚ್ಚು ದಟ್ಟವಾಗಿರುತ್ತದೆ. ಆದ್ದರಿಂದ ಯಾರು ತಿಳಿಯದೇ ಈ ಶಕ್ತಿಗಳನ್ನು ಉಪಯೋಗಿಸುತ್ತಾರೋ ಅಂಥವರು ಸಾಮಾನ್ಯರು ಸಾಮಾನ್ಯ ವಿವೇಕವನ್ನು ಬಳಸಿ ನಡೆಯುವವರಿಗಿಂತ ಹೆಚ್ಚು ಎಡುವುತ್ತಾರೆ. ಈ ಶಕ್ತಿಗಳು ನಮ್ಮೊಳಗೆ ಕೆಲಸ ಮಾಡಲು ಆರಂಭ ಮಾಡಿದರೆ, ನಾವು ಧೀರರಾಗಿರಬೇಕು, ಸ್ಥಿರರಾಗಿರಬೇಕು, ಭಾವಾವೇಶಗಳಿಗೆ ಒಳಗಾಗಬಾರದು. ನಮ್ಮ ವಿಚಾರಗಳನ್ನು ಮತ್ತು ಅಂತರ್ಬೋದಗಳನ್ನು ವಿವೇಕದ ಕೈಯಲ್ಲಿ ನೀಡಬೇಕು, ಅವುಗಳನ್ನು ಸರಿಯಾಗಿ ಹೊಂದಿಸಲು, ಬುದ್ಧಿ ಮತ್ತು ವಿಜ್ಞಾನಮಯ ಅಂಶಗಳಿಂದ ಬೇರ್ಪಡಿಸಲು, ಅವುಗಳಲ್ಲಿರುವ ತಪ್ಪು ಗ್ರಹಿಕೆಗಳನ್ನು, ಮಿತಿಗಳನ್ನು ಗುರುತಿಸಲು

ಅದಕ್ಕೆ ಅವಕಾಶ ನೀಡಬೇಕು. ಹಾಗೂ ಅವೆಲ್ಲವುಗಳ ಸರಿಯಾದ ಬಳಕೆ, ಅವುಗಳ ಸರಿಯಾದ ಇತಿಮಿತಿಗಳನ್ನು ನಿರ್ಧರಿಸಲು, ಉಪನಿಷತ್ತುಗಳು ಹೇಳುವಂತೆ 'ವ್ಯೂಹ'ವನ್ನು ರಚಿಸಲು ಬಿಟ್ಟುಕೊಡಬೇಕು. ಜ್ಞಾನ ಸೂರ್ಯನ ಕಿರಣಗಳನ್ನು ವ್ಯವಸ್ಥಿತಗೊಳಿಸಲು ಆಸ್ಪದ ನೀಡಬೇಕು. ಜ್ಞಾನವು ಗಡಿಬಿಡಿಯ ಮನಸ್ಸಿಗೆ ಲಭಿಸುವುದು, ಧೀರರಿಗೆ ಮಾತ್ರ ಸಿದ್ಧಿಸುವುದು. ಪಟ್ಟಾಗಿ ಕುಳಿತು ಅದನ್ನೆಲ್ಲ ಪೇರಿಸಿ, ವ್ಯವಸ್ಥಿತ–ಗೊಳಿಸುವವರಿಗಷ್ಟೇ ದೊರೆಯುವುದು.

*

ಭೌತಿಕ ಶರೀರವು ಈ ವಿಶ್ವದಲ್ಲಿ ಪ್ರತಿಷ್ಠಾ ಎನಿಸಿಕೊಳ್ಳುತ್ತದೆ. ಭೂಮಿಯ ಮೇಲೆ ದೈವೀ ಲೀಲೆಯನ್ನು ಸಂಪನ್ನಗೊಳಿಸಲು ಅದು ಅವಶ್ಯವಾಗಿದೆ. ಧಾರಣಾ ಸಾಮರ್ಥ್ಯ, ಆನಂದ, ಜ್ಞಾನಗಳು ಮನದಲ್ಲಿಳಿದು ಪ್ರಾಣದಲ್ಲಿ ಶರೀರದಲ್ಲಿ ಇಳಿದು ಬರುವಾಗ ಅವಶ್ಯವಾಗಿ ಬೇಕು. ಶರೀರವು ಅಯೋಗ್ಯವಾಗಿದ್ದರೆ, ಇವೆಲ್ಲವನ್ನೂ ಗ್ರಹಿಸುವ ಸಾಮರ್ಥ್ಯ ನಮ್ಮ ಅಸ್ತಿತ್ವದ ವ್ಯವಸ್ಥೆಯಲ್ಲಿ ಇಲ್ಲದೆ ಹೋದರೆ, ಅತ್ಯಂತ ತೀವ್ರ ಸ್ಥಿತಿಗಳಲ್ಲಿ ಭೌತಿಕ ಮಿದುಳು ತೀರ ಅಸ್ವಸ್ಥವಾಗಿ, ಗೊಂದಲಕ್ಕೊಳಗಾಗಿ ಹೆಚ್ಚಾಗಲೂಬಹುದು. ಆದರ ಇದು ತೀರ ವಿಪರೀತ ಸ್ಥಿತಿಗಳಲ್ಲಿ ಮಾತ್ರ, ಶರೀರವು ಪೂರ್ತಿ ಅಯೋಗ್ಯವಾಗಿದ್ದರೆ, ಆಧಾರವು ಅಪರಿಶುದ್ಧವಾಗಿದ್ದರೆ ಅಥವಾ ಅಸುರ ಶಕ್ತಿಯು ತನ್ನ ಮೇಲೆ ದಾಳಿ ಮಾಡಿ ತನ್ನ ಇಚ್ಛೆಗಳಿಗೆ ಕಾಳಿಯನ್ನು ಕೆಳಗಿಳಿದು ಬರುವಾಗ ಹೀಗೆ ಆಗುವುದುಂಟು. ಸಾಮಾನ್ಯವಾಗಿ, ಶರೀರದ ಅಸಾಮರ್ಥ್ಯ, ಮಿದುಳಿನ ನಿಶ್ಶಕ್ತತೆ, ನರಮಂಡಲದ ದೌರ್ಬಲ್ಯವು ಪ್ರಗತಿಯನ್ನು ನಿಧಾನಗತಿ ಗೊಳಿಸುವುದು. ಕೆಲ ಸಲ ಅಸ್ತವ್ಯಸ್ತತೆ, ನರ ಸಂಬಂಧಿತ ವ್ಯಾಧಿಗಳು, ಸಿದ್ಧಿಗಳ ಅಸಂಬದ್ಧ ಬಳಕೆ, ಅವು ಬಂದು ಹಾಗೆಯೇ ಹೋಗಿಬಿಡುವುದು, ಎಲ್ಲ ಕೆಲಸ ಕೆಟ್ಟು ಹೋಗಿಬಿಡುವುದು ಇಂಥವು ಘಟಿಸಬಹುದು. ಧಾರಣಾ ಸಾಮರ್ಥ್ಯ ಮನಸ್ಸಿನ ಶುದ್ಧೀಕರಣ, ಪ್ರಾಣ ಮತ್ತು ಶರೀರಗಳ ಶುದ್ಧೀಕರಣದಿಂದ ಸಿದ್ಧಿಸುವುದು. ಪೂರ್ಣ ಸಿದ್ಧಿಯು ಪೂರ್ಣ ಶುದ್ಧಿಯ ಮೇಲೆ ಅವಲಂಭಿತವಾಗಿರುತ್ತದೆ.

**7. ಶರೀರ ಚತುಷ್ಟಯ**

ಆರೋಗ್ಯ, ಉತ್ತಾಪನ, ಸೌಂದರ್ಯ, ವಿವಿಧಾನಂದಗಳು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 10/11–12 – ಶ್ರೀ ಅರವಿಂದರು**

*ಆಧ್ಯಾತ್ಮಿಕ ಸುಸಂಧಿಯನ್ನು ಈಗಲ್ಲದಿದ್ದರೆ ಮತ್ತೊಮ್ಮೆ ಇನ್ನಾವಾಗಲೋ ಆಗಲಿ ಎಂದು ಲಘುವಾಗಿ ಪರಿಗಣಿಸಿ ಕಳೆದುಕೊಳ್ಳಬಾರದು – ಮತ್ತೊಮ್ಮೆ ಇಂಥ ಸುಸಂಧಿ ಸಿಕ್ಕಿತೆಂದು ಖಚಿತವಾಗಿ ಹೇಳಲಾಗದು. ಇಂಥ ಸಂಗತಿಗಳು ಅಂಥ ಸ್ಥಳಗಳಲ್ಲಿ (ಗಾಯದ) ಕಲೆಯನ್ನುಳಿಸಿ ಹೋಗುತ್ತವೆ. ಮತ್ತು ಅಂಥ ಕಲೆಗಳಿರುವಲ್ಲಿ ಮತ್ತೊಮ್ಮೆ ಅದೇ ಪುನರ್ಘಟಿಸುವ ಸಂಭವ ಇರುತ್ತದೆ.*

***CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 10/31 – ಶ್ರೀ ಅರವಿಂದರು***

# ನವೀನ ಯೋಗ ಮತ್ತು ಉದ್ದೇಶಗಳು

– ಅನುವಾದ: ಪುಟ್ಟು ಕುಲಕರ್ಣಿ

## ಯೋಗವನ್ನು ದೈವತ್ವದ ಸಲುವಾಗಿಯೇ ಆಚರಿಸಲ್ಪಡಬೇಕು

ನಾವೀಗ ಅನುಷ್ಠಾನಿಸುತ್ತಿರುವ ಯೋಗವು ಕೇವಲ ನಮ್ಮ ಸಲುವಾಗಿಯೇ ಮಾತ್ರ ಇರುವದಿಲ್ಲ. ಅದು ದೈವತ್ವದ ಸಲುವಾಗಿ ಇರುತ್ತದೆ. ಈ ಜಗತ್ತಿನಲ್ಲಿ ದಿವ್ಯತ್ವದ ಸಲುವಾಗಿಯೇ ಕ್ರಿಯೆಗೆ ತೊಡಗುವ ಗುರಿಯನ್ನು ಹೊಂದಿದೆ. ಅದರಲ್ಲೂ ಆಧ್ಯಾತ್ಮಿಕ ರೂಪಾಂತರಣಕ್ಕಾಗಿ ಹಾಗೂ ದಿವ್ಯ – (ಸ್ವ)ಭಾವವನ್ನು ಅವತರಣ–ಗೊಳಿಸಿಕೊಳ್ಳುವದರ ಸಲುವಾಗಿ ಜೊತೆಗೆ ಮಾನಸಿಕವಾಗಿ, ಪ್ರಾಣಿಕವಾಗಿ ಮತ್ತು ಭೌತಿಕ ಸ್ವರೂಪದಲ್ಲಿ ದಿವ್ಯ ಜೀವನವನ್ನು ತರುವದರ ಸಲುವಾಗಿ ಇರುವದಲ್ಲದೇ, ಜೊತೆಗೆ ಇವೆಲ್ಲವನ್ನೂ ಒಳಗೊಂಡ ಮಾನವೀಯತೆಯನ್ನು ರೂಪಿಸುವ ಸಲುವಾಗಿ ಇರುತ್ತದೆ. ಇಲ್ಲಿ ವೈಯಕ್ತಿಕ ಹಂತದಲ್ಲಿ ಮುಕ್ತಿಯನ್ನು ಸಾಧಿಸುವ ಉದ್ದೇಶವಿರುವದಿಲ್ಲ. ಮುಕ್ತಿಯು ಯೋಗದ ಒಂದು ಮುಖ್ಯವಾದ ಅಂಶವಾಗಿದ್ದರೂ ಸಹಿತ, ಅಂತಹ ಉದ್ದೇಶವನ್ನು ಇಲ್ಲಿ ಹೊಂದಿಲ್ಲ. ಆದರೆ ಮಾನವ ಕುಲದ ರೂಪಾಂತರಣ ಹಾಗೂ ಮುಕ್ತತೆಯನ್ನು ಸಾಧಿಸುವದ್ದಾಗಿದೆ. ಹಾಗೆಂದು ಇದು ವೈಯಕ್ತಿಕ ಸಂತೃಪ್ತಿಯ ಆನಂದವೂ ಅಲ್ಲ; ಆದರೆ ಆ ದಿವ್ಯ–ಆನಂದವನ್ನು (ಪರಮಾನಂದವನ್ನು) ಅವತರಣಗೊಳಿಸುವ ಕ್ರಿಯೆಯಾಗಿದೆ – ಯೇಸುಕ್ರಿಸ್ತನ 'ಸ್ವರ್ಗದ ರಾಜಧಾನಿ' ಯಾಗಿರಬಹುದು, ಇಲ್ಲವೇ ನಮ್ಮದೇ 'ಸತ್ಯಯುಗ'ವನ್ನು ಈ ಭೂಮಿಯ ಮೇಲೆ ಸ್ಥಾಪಿಸುವದಾಗಿದೆ.

ಮೋಕ್ಷದ ವಿಷಯದಲ್ಲಿ ನಮಗೆ ಯಾವುದೇ ವೈಯಕ್ತಿಕ ಅಭಿಲಾಷೆಯೂ ಇಲ್ಲ. ಏಕೆಂದರೆ, ಆತ್ಮವು ನಿತ್ಯಮುಕ್ತವೇ ಆಗಿದ್ದು, ಅಲ್ಲಿ ಬಂಧನವೆನ್ನುವದೇ ಒಂದು ಭ್ರಮೆಯಾಗಿರುತ್ತದೆ. ಆದರೆ ನಾವು ಬಂಧನದಲ್ಲಿರುವ ರೀತಿಯಲ್ಲಿಯೇ ಕಾರ್ಯಪ್ರವೃತ್ತರಾಗುತ್ತೇವೆ. ನಿಜವಾಗಿಯೂ ನಾವು ಮುಕ್ತರಾಗಬಹುದು; ನಮಗೆ ಅವನೇ ಪರಮೋಚ್ಚ ಆತ್ಮ(ಪರಮಾತ್ಮ)ನಾಗಿದ್ದು, ಅವನೇ ಈ ಜಗನ್ನಾಟಕದ ಸೂತ್ರಧಾರನೂ ಆಗಿದ್ದಾನೆ. ಈ ಆಟದ ನಿಯಂತೃವೂ ಅವನೇ ಆಗಿದ್ದಾನೆ. ಅವನ ಕೃಪೆ ಇಲ್ಲದೇ ಮತ್ತು ಅವನ ಸಮ್ಮತಿಯೂ ಇಲ್ಲದೇ ಯಾವುದೇ ಆತ್ಮವೂ ಈ ಆಟದಿಂದ ಬಿಡುಗಡೆ ಹೊಂದಲು ಸಾಧ್ಯವಿಲ್ಲ. ಅಜ್ಞಾನದಿಂದ ತುಂಬಿರುವ ಈ ಮನಸ್ಸಿನಲ್ಲಿಯೂ ಸಹಿತ ಒಮ್ಮೊಮ್ಮೆ ನಮಗೆ ಆ ದೇವನ ಅಭಿಲಾಷೆಯು ಇರುತ್ತದೆ. ಈ ದ್ವಿಧಾ ಪ್ರವೃತ್ತಿಯೂ ಸಹಿತ ಅವನಿಂದಲೇ ರೂಪಿತಗೊಂಡಿರುವ ಅಭಿಲಾಷೆಯಾಗಿರುತ್ತದೆ. ಸುಖ ಮತ್ತು ದುಃಖ, ತೋಷ ಮತ್ತು ಯಾತನೆ, ಪುಣ್ಯ ಮತ್ತು ಪಾಪ, ಮನೋರಂಜನೆ ಮತ್ತು ಭಜನೆಗಳೆಲ್ಲವೂ ಸಹಿತ, ಸುದೀರ್ಘವಾದ ಅವಧಿಯಲ್ಲಿ (ಯುಗಯುಗಗಳ ಅವಧಿಯಲ್ಲಿ) ಹಲವಾರು ದೇಶಗಳಲ್ಲಿ ರೂಪುಗೊಂಡಿದೆ. ಅಲ್ಲೆಲ್ಲವೂ ಯೋಗದ ಬಗೆಗೆ ಏನನ್ನೂ ಯೋಚಿಸದಿದ್ದರೂ ಸಹಿತ ಶತ ಶತಮಾನಗಳ ಕಾಲ ಈ ನಾಟಕವನ್ನು "ಅವನು" ಮುಕ್ತ ವಾತಾವರಣದಲ್ಲಿಯೇ ಆಡಿಸುತ್ತ ಬಂದಿದ್ದಾನೆ.

ಇಲ್ಲಿ ಯಾವುದೇ ದುಷ್ಟತನವಿಲ್ಲ. ಅವಗಣನೆಗೊಳಿಸಬಹುದಾದ ಯಾವುದೇ ಸಂಗತಿಯೂ ಇಲ್ಲಿ ಇಲ್ಲ. ಇದರಿಂದ ನಾವು ಕುಂಠಿತಗೊಳ್ಳುವ ಅಥವಾ ಕುಸಿದು ಹೋಗುವಂತಹ ಯಾವ ಘಟನೆಯೂ ಇಲ್ಲಿ ಇಲ್ಲ – ಏಕೆಂದರೆ, ಎಲ್ಲವೂ ಆ ದೇವನಿಂದಲೇ ಘಟಿಸುತ್ತಿರುವ ಲೀಲೆಗಳಾಗಿವೆ. ಪ್ರಜ್ಞಾವಂತನಾದ ವ್ಯಕ್ತಿ ಮಾತ್ರ, ಈ ಸತ್ಯವನ್ನು ಗುರುತಿಸಬಲ್ಲ. ಅದೇ ರೀತಿಯಲ್ಲಿ ಆ ದೇವನ ಲೀಲೆಯಂತೆಯೇ ಕರ್ತವ್ಯ ಮಾಡಬಲ್ಲ. ಅದರಲ್ಲೂ ಈ ಆಟವನ್ನು ನಿಯಂತ್ರಿಸಲು ಇಲ್ಲವೇ ಬದಲಿಸಲು ಸೂಕ್ತವಾದ ವಿಧಾನಗಳನ್ನು ಅವನು ದೇವನ ಅನುಜ್ಞೆಯನ್ನು ಕಾಯುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/71**

**ಇದೋ ಇಲ್ಲಿದೆ ಅನುಜ್ಞೆ**

ಇದೋ ಇಲ್ಲಿದೆ ನೋಡಿ ಆ ದೇವನ ಅನುಜ್ಞೆ, ದೇವನು ಯಾವಾಗಲೂ (ಪ್ರ) ದೇಶವನ್ನು ಆಯ್ಕೆ ಮಾಡಿಕೊಳ್ಳುವ ವಿಷಯದಲ್ಲಿ, ಆ ಆಯ್ಕೆಯ

ವಿಷಯವನ್ನು ಅವನು ತನ್ನಲ್ಲಿಯೇ ಇಟ್ಟುಕೊಂಡಿರುತ್ತಾನೆ. ಎಲ್ಲ ಅಪಾಯಗಳ ಮಧ್ಯೆಯೂ ಹಾಗೂ ಎಲ್ಲ ಅವಕಾಶಗಳ ಮಧ್ಯೆ ಈ ಪರಮೋಚ್ಚ ಜ್ಞಾನವು ಇಂತಹ ಅವಕಾಶವನ್ನು ಪಡೆಯಬಲ್ಲದು. ಜೊತೆಜೊತೆಗೆ ಅಲ್ಲಿ ಎದುರಾಗುವ ಅಪಾಯಗಳನ್ನೂ ಸಹಿತ ಸಮರ್ಥವಾಗಿಯೇ ಎದುರಿಸಬಲ್ಲದು. ಇದರ ಆಯ್ಕೆಯನ್ನೂ ಸಹಿತ ದೇವನು ತನ್ನ ಬಳಿಯಲ್ಲಿಯೇ ಇಟ್ಟುಕೊಂಡಿದ್ದಾನೆ. ಕೆಲವೇ ಕೆಲವರಿಂದ ಅಥವಾ ಹಲವರಿಂದ, ಸತತವಾಗಿ ಸಂರಕ್ಷಿಸಲ್ಪಡುತ್ತಿರುವ ಹಾಗೂ ವರ್ತಮಾನಕ್ಕೂ ಇದು ಬೇಕಾಗಿರುವದರಿಂದ, ಕನಿಷ್ಠ ಪಕ್ಷ ಈಗಾಗಲೇ ರೂಪಿತಗೊಂಡಿರುವ ಚತುರ್ಯುಗಗಳ ಸಲುವಾಗಿಯಾದರೂ, ಈ ಉಚ್ಚ ಜ್ಞಾನದ ವ್ಯವಸ್ಥೆಯ ಆಯ್ಕೆ ಮಾಡಿಕೊಂಡಿರುವ ದೇಶವೆಂದರೆ ಭಾರತ ಮಾತ್ರ.

ಒಂದು ವೇಳೆ ಅಜ್ಞಾನದ ಬದುಕಿನ ಪೂರ್ಣ ಸಂತೋಷವನ್ನು ಅನುಭವಿಸಲು ಅವನು ಆಯ್ಕೆ ಮಾಡಿಕೊಂಡಲ್ಲಿ, ಆಗ ದ್ವಂದ್ವಗಳ ಮಧ್ಯದಲ್ಲಿಯೇ, ದುಃಖ–ದುಮ್ಮಾನಗಳ ನಡುವೆ ಕಣ್ಣೀರಿನಲ್ಲಿಯೇ, ಸ್ವಾರ್ಥದಲ್ಲಿ ಮತ್ತು ಅಶಕ್ತತೆಯಲ್ಲಿ, ತಾಮಸಿಕ ಮತ್ತು ರಾಜಸಿಕ ತೃಪ್ತಿಗಳಲ್ಲಿ .... ಒಟ್ಟಿನಲ್ಲಿ ಸಂಕ್ಷಿಪ್ತಗೊಳಿಸಿ ಹೇಳುವದಾದಲ್ಲಿ ಕಾಳಿಯ ಲೀಲೆಗಳಲ್ಲಿ ಅವನು ಭಾರತದಲ್ಲಿಯೇ ಜ್ಞಾನವನ್ನು ಕುಂಠಿತಗೊಳಿಸುತ್ತಾನೆ. ಈ ಮೂಲಕ ಅವಳನ್ನು ಅಶಕ್ತಗೊಳಿಸಿ, ಕೆಡವಿ ಅವಳನ್ನೂ ಅವನತಿಗೊಳಿಸುತ್ತಾನೆ. ಈ ಮೂಲಕವಾಗಿಯೇ ಅವಳು ತನ್ನಲ್ಲಿ ತಾನೇ ಸ್ವಯಂ ನಿರ್ಧರಿಸಿಕೊಂಡು, ನಿವೃತ್ತಿ ಹೊಂದುವಂತೆ ಮಾಡುತ್ತಾನೆ. ಅದೂ ಅಲ್ಲದೇ ಈ ರೀತಿಯ ಅವಳ ಯಾವುದೇ ಹಸ್ತಕ್ಷೇಪಗಳು ಅಲ್ಲಿ ಬಾರದಂತೆ, ಅವನು ತನ್ನ ಲೀಲೆಗಳನ್ನು ಅನುಷ್ಠಾನಿಸುತ್ತಾನೆ.

ಯಾವಾಗ ಅವನು ಈ ಹುದುಲಿನಿಂದ(ಕೆಸರಿನಿಂದ) ಮೇಲೇಳಲು ಹಂಬಲಿ–ಸುತ್ತಾನೆಯೋ, ಹಾಗೂ ನರನಲ್ಲಿ ನಾರಾಯಣನಾಗಿಯೇ ರೂಪಾಂತರಗೊಳ್ಳುವ ಮೂಲಕ ಸಾಮರ್ಥ್ಯಶೀಲನಾಗಿ, ಪ್ರಜ್ಞಾವಂತನಾಗಿ ಹಾಗೂ ತೋಷಪೂರ್ಣ ವ್ಯಕ್ತಿತ್ವವನ್ನು ಹೊಂದಿದ ರೂಪಾಂತರವಾಗುತ್ತಾನೆ. ಈ ಮೂಲಕ ಅವನು ಮತ್ತೆ ಭಾರತದಾದ್ಯಂತ ಈ ಉಚ್ಚ ಜ್ಞಾನವನ್ನು ಧಾರೆಗೊಳಿಸುತ್ತಾನೆ. ಅದರ ಜೊತೆಗೆ ಅವಳನ್ನು ಉದಿತಗೊಳಿಸಿ, ಮೇಲೆತ್ತಿ, ಆ ಮೂಲಕ ಅವಳೂ ಸಹಿತ ಈ ಎಲ್ಲ ಸಂದರ್ಭಗಳಲ್ಲಿಯೂ ಸಾಮರ್ಥ್ಯವನ್ನು ತುಂಬುವಂತೆ, ಜ್ಞಾನವನ್ನು ನೀಡುವಂತೆ ಜೊತೆಜೊತೆಗೆ ಆನಂದವನ್ನೂ ತುಂಬುವಂತೆ ಮಾಡುತ್ತಾನೆ.

ಯಾವಾಗ ಜ್ಞಾನದ ಸಂಪರ್ಕದಲ್ಲಿಯೇ ಇಂತಹ ಸಂಚಲನಗಳು ಪ್ರಾರಂಭಗೊಳ್ಳುತ್ತವೆಯೋ, ಆ ಸಂದರ್ಭಗಳಲ್ಲಿಯೇ ಭಾರತದ ಯೋಗಿಗಳು ತಮ್ಮ ಈ ಬಾಹ್ಯ(ಲೌಕಿಕ) ಸಂಪರ್ಕದಿಂದ ದೂರ ಮಾಡಿಕೊಂಡು ಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಅದು ಅವರು ಮುಕ್ತಿಯನ್ನು ಪಡೆಯುವ ಸಲುವಾಗಿ ಅಥವಾ ಪರಮಾನಂದವನ್ನು ಹೊಂದುವದರ ಸಲುವಾಗಿ ಅಥವಾ ಕೆಲವೇ ಕೆಲವು ಶಿಷ್ಯರನ್ನು ಪಡೆದುಕೊಂಡು ಅವರೂ ಆ ಮುಕ್ತಿಯ ಅನುಭವವನ್ನು ಪಡೆಯುವಂತೆ ಮಾಡುವಲ್ಲಿ ತೊಡಗಿಸಿಕೊಳ್ಳುತ್ತಾರೆ. ಆದರೆ ಯಾವಾಗ ಈ ಚಲನೆಯು ಮತ್ತೂ ಮತ್ತೂ ವಿಸ್ತಾರವಾಗುತ್ತ ಸಾಗುತ್ತದೆಯೋ, ಇದರ ಜೊತೆಜೊತೆಗೆ ಭಾರತದ ಆತ್ಮವೂ ಸಹಿತ ವಿಸ್ತಾರಗೊಳ್ಳುತ್ತದೆ. ಆ ಹಂತದಲ್ಲೂ ಸಹಿತ ಅದು ತನ್ನ ಹಂಬಲವನ್ನು ಮುಂದುವರೆಸಿಕೊಂಡೇ ಸಾಗುತ್ತದೆ. ಅದೇ ಅಭೀಪ್ಸೆಯನ್ನು ಹೊಂದಿರುತ್ತದೆ. ಆಗ ಇಡೀ ಜಗತ್ತಿಗಾಗಿ ಕಾರ್ಯ ನಿರ್ವಹಿಸುತ್ತದೆ. ಹೀಗಾಗಿ ಯೋಗಿಗಳು ಎಂದರೆ – ರಾಜರ್ಷಿ ಜನಕ, ಅಜಾತಶತ್ರು, ಕಾರ್ತ್ಯವೀರ್ಯರಂತಹ ವ್ಯಕ್ತಿಗಳೆಲ್ಲರೂ ಈ ಹಂತದ ಯೋಗಿಗಳೇ ಆಗಿದ್ದಾರೆ. ಈ ಮೂಲಕ ಜಗತ್ತಿನ ಸಿಂಹಾಸನದ ಮೇಲೆ ಆಸೀನರಾಗಿ ರಾಷ್ಟ್ರ–ರಾಷ್ಟ್ರಗಳ ನಿರ್ವಹಣೆ ಮಾಡುತ್ತಾನೆ.

*

**ಪುಣ್ಯಯೋಗ**

ಪ್ರಚಲಿತದ ಅವಧಿಯಲ್ಲಿ ಮಾನವನ ಸ್ವಭಾವ ಹಾಗೂ ವಸ್ತು–ವಿಷಯಗಳ ಸ್ವಭಾವದಲ್ಲಿ ವಿರೋಧಾಭಾಸದ ಗತಿ ಕಾಣುತ್ತಿದೆ. ಅದರಲ್ಲೂ ಈ ಸ್ಥಿತಿಯ ಪ್ರತಿಫಲನಗಳಿಂದಾಗಿ ಆಗಮಿಸುವ ಸೌಷಮ್ಯದ ವಿಷಯದಲ್ಲಿಯೂ ಸಹಿತ ಮತಭೇದವಿದೆ. ಮಾನವನ ಹೃದಯ, ಕ್ರಿಯೆಗಳು ಮತ್ತು ಮನಸ್ಸು ಎಲ್ಲವೂ ಎಲ್ಲವೂ ಸಂಪೂರ್ಣವಾಗಿ–ಕಡ್ಡಾಯವಾಗಿ–ಬದಲಾವಣೆಗೊಳ್ಳಬೇಕಿದೆ. ಆದರೆ ಈ ಬದಲಾವಣೆಗಳು ಆಂತರಂಗಿಕವಾಗಿಯೇ ಘಟಿಸಬೇಕೆ ವಿನಾ ಬಾಹ್ಯದಲ್ಲಿ ಮಾತ್ರ ಅಲ್ಲವೇ ಅಲ್ಲ. ಒಂದು ವೇಳೆ ಹಾಗಾದಲ್ಲಿ ಅದು ಕೇವಲ ತೋರಿಕೆ ಬದಲಾವಣೆ ಮಾತ್ರ ಆಗಿರುತ್ತದೆ. ಇಲ್ಲಿ ರಾಜಕೀಯವಾಗಲಿ ಅಥವಾ ಸಾಮಾಜಿಕ ಸಂಸ್ಥೆಗಳ ಮೂಲಕ ಆಗುವಂತಿಲ್ಲ. ಅದು ವರ್ಣ–ಜಾತಿ ಮತ್ತು ತತ್ತ್ವಜ್ಞಾನದಿಂದಲೂ ಆಗಬೇಕಿಲ್ಲ. ಅದು ನಮ್ಮಲ್ಲಿಯೇ–ಅಂತರಂಗದಲ್ಲಿಯೇ –

ದೇವನನ್ನು ಸಾಕ್ಷಾತ್ಕರಿಸಿಕೊಳ್ಳುವ ಮೂಲಕವೇ ಜಾಗ್ರತಗೊಳ್ಳಬೇಕಿದೆ. ಈ ಮೂಲಕವೇ ಜಗತ್ತನ್ನೂ ಮತ್ತು ನಮ್ಮ ಜೀವನವನ್ನೂ ಪುನರ್–ರೂಪಿಸುವ ಸಲುವಾಗಿ ಅಚ್ಚೊತ್ತುವ ಮೂಲಕವೇ ಸಾಕ್ಷಾತ್ಕಾರಗೊಳಿಸಕೊಳ್ಳಬೇಕಿದೆ.

ಇದೆಲ್ಲವೂ **ಪುಣ್ಯಯೋಗದಿಂದ** ಮಾತ್ರವೇ ಸಾಧ್ಯವಾಗುತ್ತದೆ. ಪುಣ್ಯಯೋಗವೆಂದರೆ, ಅದು ಒಂದು ನಿಗದಿತವಾದ ಉದ್ದೇಶಕ್ಕಾಗಿ ಸಮರ್ಪಣೆಗೊಂಡಿರುತ್ತದೆ. ಒಂದು ವೇಳೆ ಅದು ಮುಕ್ತಿ ಅಥವಾ ಆನಂದದ ಉದ್ದೇಶವನ್ನು ಹೊಂದಿದ್ದರೂ ಅದಕ್ಕಿಂತ ನಮ್ಮಲ್ಲಿ ನಾವೇ ಜೊತೆಜೊತೆಗೆ ಎಲ್ಲರಲ್ಲಿಯೂ ಆ ದೈವೀ ಗುಣದ ಮಾನವೀಯತೆಯನ್ನು ಪರಿಪೂರ್ಣ ಹಂತಕ್ಕೆ ಪರಿವರ್ತಿಸುವ ಉದ್ದೇಶ ಹೊಂದಿರುತ್ತದೆ. ಇಲ್ಲಿ ಹಠಯೋಗವಾಗಲೀ ಅಥವಾ ರಾಜಯೋಗವಾಗಲೀ ಈ ಉದ್ದೇಶವನ್ನು ಸಾಫಲ್ಯಗೊಳಿಸಲಾರವು, ಅಥವಾ ಅವುಗಳ ಪ್ರಯತ್ನವು ಸಾಕಾಗಲಾರದು. ಅದಕ್ಕಿಂತಲೂ ಮಿಗಿಲಾಗಿ 'ತ್ರಿಮಾರ್ಗವೂ' ಸಹಿತ ಇಲ್ಲಿ ಸಾಧ್ಯವಾಗುವದಿಲ್ಲ. ನಾವು ಇವೆಲ್ಲವುಗಳಿಗಿಂತ ಉನ್ನತವಾಗಿರುವ "ಆತ್ಮಯೋಗ"ಕ್ಕೆ ತಾಣವಾಗಬೇಕಿದೆ.

*

**ಸತ್ವಗುಣದ ಅಪಾಯ**

ಯಾವಾಗ ಸಾತ್ವಿಕ ಸ್ವಭಾವದ ಸಾಧಕನು ತನ್ನದೇ 'ಕಾರಣ'ಗಳಿಂದಾಗಿ (ದರ್ಶನದಿಂದಾಗಿ) ಕೇವಲ ಏಕಮುಖೀ ನಿರ್ಧಾರಗಳಿಗೆ ಅಥವಾ ಪ್ರತಿಪಾದನೆಗೆ ಅಂಟಿಕೊಳ್ಳುತ್ತಾನೆಯೋ, ಅದರಲ್ಲೂ ಪೂರ್ವ ನಿರ್ಧರಿತಗೊಂಡಂತೆ ನಿರ್ದಿಷ್ಟ–ಗೊಳಿಸಲ್ಪಟ್ಟ ಯೋಗದ ಸಿದ್ಧಿಗೆ ಬಂಧಗೊಂಡಿರುತ್ತಾನೆಯೋ, ಅಥವಾ ಯೋಗದ ಮೂಲಕ ಪಡೆದುಕೊಂಡಿರುವ ದೇವನ ಸಂಪರ್ಕದಿಂದ ಲಭಿಸಿರುವ ಆನಂದವೂ ಲಭ್ಯವಾಗಿ, ಸದಾ ಅದೇ ಅವಸ್ಥೆಗೇ ಕಾತುರನಾಗಿರುತ್ತಾನೆಯೋ, ಆಗ ಅವನು 'ಅದಕ್ಕೇ' ಅಂಟಿಕೊಂಡು ಮಮಕಾರವನ್ನು ಹೊಂದಿದವನಾಗಿರುವದಲ್ಲದೇ, ಇದಕ್ಕಿಂತ ಬೇರೆ ಏನೇನೂ ಇಲ್ಲವೇ ಇಲ್ಲ ಎನ್ನುವ ಹಂತವನ್ನು ತಲುಪಿರುತ್ತಾನೆ.

ಇಲ್ಲಿ ಮುಖ್ಯವಾಗಿ ಗಮನಿಸಲೇಬೇಕಾದ ಸಂಗತಿ ಎಂದರೆ ಯೋಗವೆನ್ನುವದು ಕೇವಲ ನಿನ್ನ ಸಲುವಾಗಿ (ಓರ್ವನ ಸಲುವಾಗಿ) ಮಾತ್ರ ಎಂದು ರೂಪಿತಗೊಂಡಿಲ್ಲ. ಅಥವಾ ನಿಗದಿತಗೊಂಡ ವಸ್ತು–ವಿಷಯಕ್ಕಾಗಿಯೇ ಎಂದೂ ಇರುವದಿಲ್ಲ. ಹಾಗೆಂದು ಇವು ಆ ಸಿದ್ಧಿಯ ಉದ್ದೇಶವೂ ಆಗಿರುವದಿಲ್ಲ. ಆದ್ದರಿಂದ ನೀವು

ಯೋಗವನ್ನು ಪ್ರಾರಂಭಗೊಳಿಸುವ ಮುನ್ನವೇ, ಅದೂ ನೀವು ದೇವರನ್ನು ಪಡೆದುಕೊಳ್ಳುವದಕ್ಕಾಗಿಯೇ ಹೊಂದಿರುವ ಹಕ್ಕಿನ ಕುರಿತೇ ಆಗಿದ್ದಲ್ಲಿ, ಆಗ ಆ ದೇವನು ನಿಮಗೆ ಏನನ್ನು ನೀಡುತ್ತಾನೆಯೋ ಅದನ್ನು ಪ್ರಾಂಜಲವಾಗಿ ಸ್ವೀಕರಿಸುತ್ತಿರಬೇಕು. ಅದನ್ನು ಮುಕ್ತಮನೋಭಾವದಲ್ಲಿಯೇ ಸ್ವೀಕರಿಸಬೇಕು. ಅದು ಆನಂದವೂ ಆಗಿರಬಹುದು. ಸ್ವಾರ್ಥರಹಿತ ಆತ್ಮವೊಂದು ಮಾತ್ರವೇ ಮತ್ತೂ ಮತ್ತೂ ಪ್ರಗತಿ ಹೊಂದಿ ದೇವರ ಅಸ್ತಿತ್ವವನ್ನು ಕಾಣುತ್ತದೆ. ಅಲ್ಲಿ ಅದು “ದೇವರ ಇಚ್ಛೆಯೂ' ಆಗಿರುತ್ತದೆ. ಆದರೆ ನೀವು ಈ ಔನ್ನತ್ಯದಲ್ಲಿಯೂ ಸಹಿತ 'ಸಾತ್ವಿಕ ಅಹಂಕಾರಕ್ಕೆ' ಸಿಲುಕಿಕೊಳ್ಳಬಾರದು. ಮುಮುಕ್ಷತ್ವದ ಕುರಿತು ಸೂಕ್ಷ್ಮಾತಿ ಸೂಕ್ಷ್ಮವಾದ ಅಜ್ಞಾನವೂ ಇರಬಾರದು. ಅದಕ್ಕಾಗಿ ಊತ್ವ(ಅಹೇತುತ್ವ, ಅಲೋಲುತ್ವ, ಅಪ್ರಭುತ್ವ, ಅಸಾಧುತ್ವ, ಆಶುತ್ವ, ಅತಿನಿರ್ವಾಸುತ್ವ, ಅನುತ್ವ, ಅವಸ್ತುತ್ವ, ಬಹುತ್ವ, ಬಂಧುತ್ವ, ಭೀರುತ್ವ, ಭೂತ್ವ, ಚಾರುತ್ವ, ದಯಾಳುತ್ವ, ಧೇನುತ್ವ, ಆಗುರುಲಘುತ್ವ...) ಗಳಿಂದ, ಮುಕ್ತಿಯ ಹಂಬಲದಿಂದ, ಮತ್ತು ಪೂರ್ಣ ಆಂದವನ್ನು ತೋಷವನ್ನು ಸಹಿತ ಮಮಕಾರರಹಿತವಾಗಿಯೇ ಸ್ವೀಕರಿಸಬೇಕು. ಆಗ ಮಾತ್ರ ಭಗವದ್ಗೀತೆಯು ಹೇಳಿರುವ “ಪರಿಪೂರ್ಣ ಮಾನವ” ಅಥವಾ 'ಸಿದ್ಧ' ಹಂತಕ್ಕೆ ನೀನು ತಲುಪಲು ಸಾಧ್ಯವಾಗುತ್ತದೆ.

*

ಕೇವಲ ಏಕಮುಖೀ ಪ್ರತಿಪಾದನೆಯನ್ನು ಮಾಡುತ್ತಿರುವ ಎಲ್ಲ ತತ್ತ್ವಜ್ಞಾನಗಳೂ ಯಾವಾಗಲೂ ಸತ್ಯದ ಒಂದು ಪಾರ್ಶ್ವವನ್ನು ಮಾತ್ರವೇ ತೋರಿಸುತ್ತವೆ. ಈ ಜಗತ್ತು, ಇದು ದೇವರಿಂದ ಸೃಷ್ಟಿಸಲ್ಪಟ್ಟಿದೆ. ಇದು ತರ್ಕಕ್ಕೆ ಹೊಂದಿಕೊಂಡಂತೆ ಇರುವ ಕಠಿಣಾತಿಕಠಿಣದಿಂದ ಕೂಡಿರುವ ರಚನೆಯಾಗಿಲ್ಲ. ಆದರೆ ಇದೊಂದು ಶೃತಿಬದ್ಧ, ಸಂಗೀತಮಯದ ಫಲಿತವಾಗಿದ್ದು, ಹತ್ತಾರು ವೈವಿಧ್ಯಮಯತೆಯನ್ನು ಹೊಂದಿರುವ ಸೌಷಮ್ಯದ ಅನಂತತೆಯಾಗಿದೆ. ಜೊತೆಗೆ ಇದು ಅವನದೇ ಅಸ್ತಿತ್ವವೂ ಆಗಿದೆ. ನಿರಾಕಾರವಾಗಿ, ಮುಕ್ತವಾಗಿ ಇದ್ದುದರಿಂದ ಇದನ್ನು ತರ್ಕದಿಂದ ವ್ಯಾಖ್ಯಾನಿಸಲು ಸಾಧ್ಯವಾಗುವದಿಲ್ಲ.

*

**ಗಮ್ಯ (ಗುರಿ)**

ಈ ಎಲ್ಲ ವಿಷಯಗಳ ಹಿನ್ನಲೆಯಲ್ಲಿ ಊಹಿಸಲ್ಪಡುವದರಿಂದ ಜೀವನದ ಗಮ್ಯವು ನಿರ್ಧರಿಸಲ್ಪಡುವದಿಲ್ಲ. ಆದರೆ ಇದು ಇವೆಲ್ಲವುಗಳ ಮೂಲಕ

ಅನುಭವವನ್ನು ಕಂಡಿರಿಸಿಕೊಳ್ಳುವ ಹಂತವಾಗಿದೆ. ದೇವರ ಆ ಮೂರ್ತಿಯಂತೆಯೇ ರೂಪುಗೊಳ್ಳಲು ಇರುವ "ಕರೆ" ಇದಾಗಿದೆ. ಅವನ ಸಂಗಡವೇ ನೆಲೆಸುವದೂ ಇದಾಗಿದೆ. ಅವನೊಡನೆ ಸಹವರ್ತಿಯಗಿ ಅವನಲ್ಲಿಯೇ ಒಂದಾಗುವದೂ ಇದೇ ಆಗಿದೆ. ಈ ಮೂಲಕ 'ಅವನ' ಆ ದೇವ ಸಂತೋಷಕ್ಕೆ ನಾವು ಸಂಪರ್ಕ–ಸೇತುವಾಗಬೇಕಿದೆ. ಮತ್ತೆ ಸಾಮರ್ಥ್ಯಗೊಳ್ಳಬೇಕಿದೆ. ಅವನ ಕಾರ್ಯಗಳಿಗಾಗಿಯೇ ರೂಪಿತಗೊಂಡಿರುವ ಉಪಕರಣದಂತೆ ನಾವು ರೂಪಣೆಗೊಳ್ಳಬೇಕಾಗಿದೆ. ಯಾವುದು ಅಶುಭವಿದೆಯೋ ಅದೆಲ್ಲವನ್ನೂ ಪವಿತ್ರಗೊಳಿಸುತ್ತ, ಪರಿಶುದ್ಧಗೊಳಿಸುವ ಮೂಲಕ, ಅವನ ಸ್ಪರ್ಶದಿಂದಲೇ ಆತ್ಮಗತವಾಗಿ ರೂಪಾಂತರಗೊಳ್ಳುವ ಮೂಲಕ, ನಾವು ಈ ಜಗತ್ತಿನಲ್ಲಿ ಡೈನಮೋದಂತೆ (ಶಕ್ತಿ ಉತ್ಪನ್ನ ಯಂತ್ರ) ಕರ್ತವ್ಯ ನಿರ್ವಹಿಸಬೇಕಾಗಿದೆ. ಈ ಮೂಲಕ ಆ ದೈವೀ ವಿದ್ಯುತ್ತನ್ನು ಉತ್ಪಾದಿಸುವ ಮೂಲಕ, ಆ ರೋಮಾಂಚಮಯ ಹಾಗೂ ಪ್ರದೀಪ್ತತೆಯಿಂದ ಕೂಡಿರುವ ಕಿರಣಗಳನ್ನು ಜನ ಸಮುದಾಯಕ್ಕೆ ಒದಗಿಸಬೇಕಾಗಿದೆ. ಈ ರೀತಿ ಒದಗಿಸಿಕೊಡುವ ಮೂಲಕ, ಎಲ್ಲೆಲ್ಲಿ ಈ ರೀತಿಯಾಗಿ ನಮ್ಮೆಲ್ಲರ ಪೈಕಿ ಯಾರೇ ಆಗಲಿ ಈ ರೀತಿ ಇದ್ದರೂ ಸಹಿತ, ಇದನ್ನೇ ಅನುಸರಿಸಿ ನೂರಾರು ಜನರು ಆ ಪೂರ್ಣ ಪ್ರಕಾಶದಲ್ಲಿ ಬರುತ್ತಾರೆ. ಅವನ ಬಲದಲ್ಲಿ ನೆಲೆಸುತ್ತಾರೆ. ದೈವತ್ವದಲ್ಲಿಯೇ ಪೂರ್ಣವಾಗಿದ್ದು ಆನಂದದಲ್ಲಿ ಸದಾ ಇದು ಇರುತ್ತದೆ. ಚರ್ಚಗಳಾಗಲೀ, ಆದೇಶಗಳಾಗಲೀ (ಉಪದೇಶಗಳಾಗಲಿ), ಧರ್ಮಶಾಸ್ತ್ರಗಳಾಗಲೀ, ತತ್ತ್ವಜ್ಞಾನ–ಗಳಾಗಲೀ, ಎಲ್ಲವೂ ಮಾನವ ಕುಲವನ್ನು ರಕ್ಷಿಸಲು ವಿಫಲವಾಗಿರುವದೇಕೆಂದರೆ, ಅವುಗಳೆಲ್ಲವೂ ತಮ್ಮಷ್ಟಕ್ಕೆ ತಾವೇ ಸಂಪೂರ್ಣ ಕರ್ಮಾನುಷ್ಠಾನಕ್ಕೆ ಸೀಮಿತಗೊಳಿಸಿಕೊಂಡಿವೆ. ಅದರಲ್ಲೂ ಬೌದ್ಧಿಕ ಪಂಥಗಳು, ಸಿದ್ಧಾಂತಗಳು, ರೀತಿ–ರಿವಾಜುಗಳು, ಸಂಸ್ಥೆಗಳು, ಆಚಾರಶುದ್ಧಿ ಹಾಗೂ ದರ್ಶನದ ವಿಷಯಗಳೆಲ್ಲವೂ ಮಾನವ ಸಮುದಾಯವನ್ನು ರಕ್ಷಿಸಬಲ್ಲವು ಎಂದುಕೊಂಡು ಅದನ್ನು ಸಾಧಿಸುತ್ತಲೇ ಬಂದು, ಅತ್ಯಂತ ಅವಶ್ಯವಿದ್ದ ವಿಷಯವನ್ನೇ ಕಡೆಗಣಿಸಿದವು. ಆ ಶಕ್ತಿ ಹಾಗೂ ಆತ್ಮದ ಪರಿಶುದ್ಧತೆಯೇ ಇಲ್ಲಿ ಮರೆತಿರುವ ಮಹತ್ವದ ವಿಷಯವಾಗಿದೆ.

ಹೀಗಾಗಿ ಅತ್ಯಂತ ಅವಶ್ಯವಾಗಿರುವ ಒಂದು ವಿಷಯಕ್ಕೆ ನಾವು ಮರಳಲೇಬೇಕಾಗಿದೆ. ಇಲ್ಲಿ ಕ್ರಿಸ್ತನ ಗಾಸ್ಪೆಲ್ (ಸುವಾರ್ತೆ) ಯನ್ನು, ಮಹಮ್ಮದ ಪೈಗಂಬರರ ಬೋಧನೆಗಳನ್ನು, ಪರಿಪೂರ್ಣ ಸಮರ್ಪಣೆಯನ್ನು (ದಾಸನಾಗುವದನ್ನು), ಚೈತನ್ಯನ ಬೋಧೆಯಾಗಿರುವ ಮಾನವನಲ್ಲಿ ಆ ದೇವರ

ಪವಿತ್ರ ಪ್ರೇಮವನ್ನು ತೋಷವನ್ನು, ಶ್ರೀ ರಾಮಕೃಷ್ಣರ ಸರ್ವಧರ್ಮಗಳ ಸಮನ್ವಯತೆಯನ್ನು, ಒಟ್ಟಿನಲ್ಲಿ ಇವೆಲ್ಲವನ್ನೂ ಒಟ್ಟಾಗಿಸಿ, ಒಂದು ಸ್ವಸಾಮರ್ಥ್ಯ–ಪೂರ್ಣವಾಗಿರುವ ಶಕ್ತಿಧಾರೆಯನ್ನು ನದಿಯಂತೆ ಪ್ರವಹಿಸಬೇಕಿದೆ, ಅದೂ ಪಾಪಮೋಚನೆಗಾಗಿ ಪರಿಶುದ್ಧಗೊಳಿಸುವ ಸಲುವಾಗಿ ಉದ್ಧಾರಗೊಳಿಸುತ್ತಿರುವ ಗಂಗೆಯಂತೆ, ಈ ಲೌಕಿಕಭಾವದಲ್ಲಿಯೇ ಸಾವಿನ ನೆಲೆಯಲ್ಲಿಯೇ ಜೀವನವನ್ನು ಹೊಂದಿರುವ ಈ ಭವಪ್ರಪಂಚದ ಮಾನವರನ್ನು ರಕ್ಷಿಸಲು ಭಗೀರಥನು ಹೇಗೆ ಗಂಗೆಯನ್ನು ಅವತರಣಗೊಳಿಸಿದನೋ, ಹಾಗೂ ಧಾರಾಕಾರವಾಗಿ ಅದು ಪ್ರವಹಿಸುವಂತೆ ಮಾಡಿದನೋ, ಆ ಮೂಲಕ ತನ್ನ ಪೂರ್ವಜರ ಚಿತಾಭಸ್ಮವನ್ನು ಪವಿತ್ರಗೊಳಿಸಿಕೊಂಡು ಆತ್ಮಗಳನ್ನು ಪುನರುಜ್ಜೀವನಗೊಳಿಸಿಕೊಂಡನೋ, ಅಂದರೆ ಸತ್ಯಯುಗದಲ್ಲಿ ನಡೆದ ಈ ಮನುಕುಲದ ಉದ್ಧಾರದ ಕ್ರಿಯೆಯನ್ನು ಈ ಜಗತ್ತಿಗೆ ಮತ್ತೆ ಮರಳಿ ತರಬೇಕಾಗಿದೆ. ಈ ಎಲ್ಲ ಉದ್ದೇಶಗಳೂ ಅವನ ಲೀಲೆ ಮಾತ್ರವಾಗಿರದೇ ಅಥವಾ ಯೋಗ ಮಾತ್ರವೇ ಆಗಿರುವದಿಲ್ಲ. ಅವತಾರಗಳು ಅವತರಿಸಿ ಬಂದುದು ಮಾನವ ಕುಲವನ್ನು ಮತ್ತೆ ಊರ್ಧ್ವದೆಡೆ ಸಾಗುವಂತೆ ಮಾಡುವದಕ್ಕಾಗಿಯೇ ಆಗಿದೆ. ಅಷ್ಟೇ ಅಲ್ಲದೇ ಮಾನವನನ್ನು ಮತ್ತೂ ಮತ್ತೂ ಊರ್ಧ್ವದೆಡೆಗೆ ಆರೋಹಣಗೈಯುವಂತೆ, ಆ ಔನ್ನತ್ಯದಲ್ಲಿ ಪೂರ್ಣಗೊಳ್ಳುವ ಮೂಲಕ, ಅದೇ ಔನ್ನತ್ಯದ ಪರಿಪೂರ್ಣತೆಯಲ್ಲಿಯೇ ಮಾನವೀಯತೆಯನ್ನು ರೂಪಿಸುವದಾಗಿದೆ. ಇದೆಲ್ಲವೂ ಉತ್ತರೋತ್ತರವಾಗಿರುವ ಆ ದಿವ್ಯಾತ್ಮನ ಕಡೆಗೆ ಕರೆದುಕೊಂಡು ಹೋಗುವದಾಗಿದೆ. ಸ್ವರ್ಗದ ಸರ್ವ ಅಂಶಗಳನ್ನೂ ಅಲ್ಲಿ ರೂಪುಗೊಳಿಸುವಂತೆ ಮಾಡಬೇಕಾಗಿದೆ. ಜೊತೆಗೆ ಅದು ಈ ಭೂಮಿಯ ಮೇಲೆ ಅವತರಣಗೊಳ್ಳುವ ಮೂಲಕ ಇಡೀ ಭೂಮಂಡಲವೇ ಸ್ವರ್ಗಸದೃಶವಾಗಿಬೇಕಿದೆ. ನಮ್ಮ ಎಲ್ಲ ಕಾರ್ಯಗಳೂ ಇವೆಲ್ಲ ಸಂಗತಿಗಳನ್ನು ಒಳಗೊಂಡು, ಎಲ್ಲಾ ಸಂದರ್ಭದಲ್ಲಿಯೂ ಸಚ್ಚಿದಾನಂದದಲ್ಲಿ ಸಮರ್ಥನೀಯವಾಗಿಯೇ, ಲೌಕಿಕ ಪ್ರಪಂಚದಲ್ಲಿಯೂ ಸಹಿತ ಫಲಪ್ರದವಾಗಿರುವಂತೆ ರೂಪುಗೊಳಿಸುವದಾಗಿದೆ.

ಅನುಷ್ಠಾನಿಸುತ್ತಿರುವ ಕೆಲಸವು ಎಷ್ಟೇ ಅಲ್ಪವಾಗಿದ್ದರೂ ಸಹಿತ, ಅವನು ಒಂದು ವೇಳೆ ತನ್ನ ಕರ್ತವ್ಯದಲ್ಲಿ ಯಶಸ್ವಿಯಾಗಿದ್ದಲ್ಲಿ, ಅದರಲ್ಲೂ ಮೋಕ್ಷದಂತಹ ಅಥವಾ ಕೆಲವು ವ್ಯಕ್ತಿಗಳ ಮೋಕ್ಷದ ವಿಷಯದಲ್ಲಿ ಯಶಸ್ವಿಯಾಗಿದ್ದಲ್ಲಿ, ಆಗ ಅದರ ಮಹತ್ವವು ಅನಂತಾನಂತವಾಗಿಯೇ ಇರುತ್ತದೆ. ಒಂದಾನೊಂದು ವೇಳೆ ಅವನು ಕರ್ತವ್ಯದಲ್ಲಿ ವಿಫಲನಾದಲ್ಲಿ, ಅಥವಾ ಅಂತಹ ಸಂದರ್ಭವಿರುವಲ್ಲಿ,

ಇಲ್ಲವೇ ಹಲವಾರು ಕಾರಣಗಳಿಂದಾಗಿ ಆಂಶಿಕ ಫಲಪ್ರಾಪ್ತಿಯಾಗುವಂತಿದ್ದಲ್ಲಿ, ಅದೂ ಸಹಿತ ಸೀಮಿತ ಅವಧಿಗೆ ಆಗಿದ್ದರೂ, ಅವನು ಇಡೀ ಮಾನವ ಕುಲಕ್ಕೇ ಶಾಂತಿಯನ್ನು, ಸಂತೋಷವನ್ನು, ಪಾವಿತ್ರತೆಯನ್ನು ತರುವ ಸಲುವಾಗಿ ಪೂರ್ಣತೆಯನ್ನು ಬಯಸಿ ಕರ್ತವ್ಯ ನಿರ್ವಹಿಸಿದ್ದಲ್ಲಿ ಮತ್ತು ಅಂತಹ ಜೀವನವನ್ನು ಜೀವಿಸಿದ್ದಲ್ಲಿ ಇದು ಅನಂತವಾಗಿಯೇ ರೂಪುಗೊಳ್ಳುತ್ತದೆ.

*

**ನಿಗದಿತ ಪಥ**

"ಸನತ್ಸುಜಾತೀಯ" ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟಿರುವಂತೆ, ಈ ಸಿದ್ಧಿಗಾಗಿ "ನಾಲ್ಕು ವಿಷಯಗಳು" ಅವಶ್ಯವಾಗಿವೆ. 1) ಶಾಸ್ತ್ರ 2) ಉತ್ಸಾಹ 3) ಗುರು 4) ಕಾಲ. ಇದರಲ್ಲಿ ಶಾಸ್ತ್ರವು ಪಥದ ಬಗೆಗೆ ಉಪದೇಶಿಸುತ್ತದೆ. ಉತ್ಸಾಹವು ಅದನ್ನು ಅನುಸರಿಸಲು ಪ್ರೇರೇಪಿಸುತ್ತದೆ. ಅದಕ್ಕೆ ಗುರು ಮತ್ತು ಕಾಲದ ಸಹಕಾರವು ಇರುತ್ತದೆ.

ನಾನು ನಿಗದಿಗೊಳಿಸುತ್ತಿರುವ ಹಾಗೆ, ನಿಮ್ಮ ಮುಂದಿರುವ ಪಥ(ಮಾರ್ಗ)ವೆಂದರೆ, ಈ ಉತ್ಸಾಹಕ್ಕೆ ಅವಶ್ಯವಿರುವ ಅನುಮತಿ ಮತ್ತು ನಿತ್ಯ ಸ್ಮರಣೆ. ದೇವರೇ ಇಲ್ಲಿ ಗುರುವಾಗಿದ್ದಾನೆ. ಹೀಗಾಗಿ ಇಲ್ಲಿ ಉಳಿದಿರುವ ವಿಷಯವೆಂದರೆ, 'ಕಾಲ' ಅಥವಾ 'ಸಮಯ' ಮಾತ್ರವಾಗಿದೆ.

ದೇವರು ತಾನೇ ತಾನಾಗಿಯೇ ಗುರುವೂ ಆಗಿರುವದರಿಂದ – ಅದು ನಿಮಗೆ ಜ್ಞಾನಪ್ರಾಪ್ತಿಯಾದಾಗ ಅರಿವಿಗೆ ಬರುತ್ತದೆ. ನಿಮ್ಮ ಅಂತರಂಗದಲ್ಲಾಗಲೀ ಅಥವಾ ನೀವಿಲ್ಲದೆಯೂ ಸಹಿತ ಸುತ್ತಲೂ ಘಟಿಸುತ್ತಿರುವ ಚಿಕ್ಕಚಿಕ್ಕ ಘಟನೆಗಳೆಲ್ಲವೂ ಎಷ್ಟು ಸೂಕ್ಷ್ಮವಾಗಿ ಸಂಯೋಜಿಸಲ್ಪಟ್ಟಿವೆ ಹಾಗೂ ಅನುಷ್ಠಾನಗೊಳಿಸಲ್ಪಡುತ್ತವೆ ಎನ್ನುವದನ್ನು ತಿಳಿಸುತ್ತಾನೆ. ಅದೂ ಈ ಅನಂತಾನಂತ ಜ್ಞಾನದಿಂದಲೇ ಕೂಡಿದ್ದು ಅದರಿಂದಲೇ ರೂಪಿತಗೊಂಡಿರುತ್ತದೆ. ಜೊತೆಗೆ ಈ ನೈಸರ್ಗಿಕವಾಗಿರುವ ಯೋಗದ (ವಿಕಸನದ) ಪ್ರಕ್ರಿಯೆಯನ್ನು ಮುಂದುವರೆಸಿಕೊಂಡು ಸಾಗುತ್ತದೆ. ಆಂತರ್ಯದ ಹಾಗೂ ಬಾಹ್ಯ ಘಟನೆಗಳು ಹೇಗೆ ವ್ಯವಸ್ಥೆಗೊಳಿಸಲ್ಪಟ್ಟಿರುವ ಹಾಗೆಯೇ ಸಂಯೋಜಿತವಾಗಿಯೇ ಸಂಚಲನಗೊಂಡು ಕಾರ್ಯ ನಿರ್ವಹಿಸುವದಕ್ಕಾಗಿ ರೂಪಿಸಲ್ಪಟ್ಟಿವೆ ಎನ್ನುವದು ಅರಿವಿಗೆ ಬರುತ್ತದೆ.

ಸರ್ವಶಕ್ತವಾಗಿರುವ ಪ್ರೇಮ ಮತ್ತು ಜ್ಞಾನವು ನಿಮ್ಮ ಕರ್ತವ್ಯದ ಮೂಲಕವೇ ನಿಮ್ಮನ್ನು ಊರ್ಧ್ವಮುಖಿಯನ್ನಾಗಿಸುತ್ತವೆ. ಹೀಗಾಗಿ ಎಂದಿಗೂ ಕಾಲದ ದೀರ್ಘಾತಿದೀರ್ಘ ಅವಧಿಯ ಬಗೆಗೆ ಗೊಂದಲಕ್ಕೆ ಸಿಲುಕಬೇಡಿ, ಒಂದು ವೇಳೆ ಅದು ಅತ್ಯಂತ ಸುದೀರ್ಘವೆಂದು ಕಂಡುಬಂದರೂ, ಆಗಾಗ ಅಪೂರ್ಣತೆಗಳು ಮತ್ತು ಪ್ರತಿರೋಧಗಳು ಎದುರಾದರೂ ಸಹಿತ, ಅಪ್ರಮತ್ತರಾಗಿಯೇ ಇರಲು, ಧೀರರಾಗಿಯೇ ಇರಬೇಕು. ಅದಕ್ಕಾಗಿ ಉತ್ಸಾಹವನ್ನು ಹೊಂದಿರಬೇಕು. ಮಿಕ್ಕಿದೆಲ್ಲವನ್ನೂ ಆ ದೇವನ ಸುಪರ್ದಿಗೆ ವಹಿಸಿಬಿಡಿ. ಇದಕ್ಕೆ ಕಾಲದ ಅವಶ್ಯಕತೆ ಇದೆ. ಇದು ನಿಮ್ಮಿಂದಲೇ ನಿಮ್ಮಂತರಂಗದಲ್ಲಿಯೇ ಘಟಿಸಲಿರುವ ಪ್ರಚಂಡ ಕಾರ್ಯವಾಗಲಿದೆ. ಇಡೀ ಮಾನವ ಸ್ವಭಾವವನ್ನೇ ದೇವತಾಸ್ವರೂಪವಾಗಿ ಪರಿವರ್ತಿಸುವ ಮಹತ್ಕಾರ್ಯವೇ ಇದಾಗಿದೆ. ಹಲವು ಶತಮಾನಗಳ ಕಾಲದಿಂದ ದಟ್ಟೈಸಿ ನಿಂತಿರುವ ವಿಕಸನವನ್ನು ಕೇವಲ ಕೆಲವೇ ಕೆಲವು ಅವಧಿಯಲ್ಲಿ ರೂಪಿಸಿ ಅನುಷ್ಠಾನಿಸುವ ಕಾಲ ಇದಾಗಿದೆ. ಇದು ಕೆಲವೇ ಕೆಲವು ವರ್ಷಗಳಲ್ಲಿ ರೂಪಿಸುವದಾಗಿರುತ್ತದೆ. ಹೀಗಾಗಿ ನೀವು ಕಾಲದ ವಿಷಯದಲ್ಲಿ ಯಾವುದೇ ದ್ವೇಷ ಭಾವನೆಯನ್ನು ಹೊಂದಿರಬಾರದು. ಯಾವುದೇ ಬೆಲೆ ತೆತ್ತಾದರೂ ಸರಿಯೇ, ತಕ್ಷಣದಲ್ಲಿಯೇ ಪರಿಹಾರ ದೊರಕಿಸಿ ಕೊಡಬಲ್ಲ ಹಲವಾರು ಮಾರ್ಗಗಳೂ ಇಲ್ಲಿವೆ.

ಮೂಲ ಉದ್ದೇಶವನ್ನು ರೂಪಿಸುವದಕ್ಕಾಗಿ, ಅದಕ್ಕಾಗಿ ನಿರ್ದಿಷ್ಟಪಡಿಸಿದ "ಕ್ರಿಯೆ"ಯೊಂದನ್ನು ರೂಪಿಸಿಕೊಂಡು, ಅದಕ್ಕಾಗಿಯೇ ಕಾರ್ಯತತ್ಪರರಾಗಿರುವಂತೆ, ಮತ್ತು ಅದಕ್ಕಾಗಿ ಏನೋ ಮಹತ್ವದ ವಿಷಯವೊಂದನ್ನು ಮಾಡುತ್ತಿದ್ದೇನೆ ಎನ್ನುವ ಅಹಂಭಾವವನ್ನು ನಿನ್ನಲ್ಲಿ ತಾಳಲಾರದೇ ಇಲ್ಲಿ ಕಾರ್ಯ ನಿರ್ವಹಿಸಬೇಕು. ಪ್ರತಿದಿನವೂ ಹೆಚ್ಚು ಹೆಚ್ಚು ಪ್ರಾಣಾಯಾಮಗಳನ್ನು ನಾವಿಂದು ಕಾಣುತ್ತೇವೆ, ಅತೀ ದೀರ್ಘ ಸಮಯದವರೆಗೆ ಹಾಕುವ ಆಸನಗಳು, ಜಪಗಳ ಪುನರಾವರ್ತನೆಗಳು... ಏನೇನೆಲ್ಲಾ ಇದ್ದರೂ, ಒಂದು ನಿರ್ದಿಷ್ಟಪಡಿಸಿದ ಪ್ರಗತಿಯು ಮಾತ್ರ ಗುರುತಿಸಲ್ಪಡುತ್ತದೆ. ಯಾವಾಗ ನೀವು ಈ ಪಥವನ್ನು ಒಮ್ಮೆ ಆಯ್ಕೆ ಮಾಡಿಕೊಳ್ಳುವಿರೋ, ನೀವು ಅದನ್ನು ಸದಾ ಮುಂದುವರೆಸಿಕೊಂಡೇ ಹೋಗಬೇಕಾಗುತ್ತದೆ. ಅವೆಲ್ಲವೂ ಮಾನವನ ಸ್ವಭಾವದವುಗಳೇ ಆಗಿರುತ್ತವೆ. ಆದರೆ ಮುಖ್ಯವಾಗಿ ಆ ಅನಂತಾನಂತವಾದ ಶಕ್ತಿಯನ್ನು ಕಾರ್ಯದ ಸಂಪರ್ಕದಿಂದ ದೂರವೇ ಉಳಿದಿರುತ್ತವೆ. ಏಕೆಂದರೆ ಈ ಅನಂತಾನಂತ

ಶಕ್ತಿಯು ಮಾನವನ ಮನಸ್ಸಿನಲ್ಲಿಯೇ ಮೌನವಾಗಿ, ಪ್ರಶಾಂತವಾಗಿ ಸಂಚಲಿಸುತ್ತಿರುತ್ತದೆ. ಕೆಲವೊಮ್ಮೊಮ್ಮೆ ಆ ಗುರಿಯ ಎಡೆಗೆ ಅಗ್ರಾಹ್ಯವಾಗಿಯೇ ಪ್ರಗತಿ ಸಾಧಿಸುತ್ತಾ, ಒಮ್ಮೊಮ್ಮೆ ಕೊಂಚ ವಿರಮಿಸಿದಂತೆ ಕಂಡುಬಂದರೂ ಸಹಿತ, ಸಶಕ್ತವಾಗಿಯೇ ಹಾಗೂ ವಿಜಯಪ್ರಾಪ್ತಿಗಾಗಿಯೇ, ಫಲಿತಾಂಶವನ್ನು ಬಹಿರಂಗಗೊಳಿಸಿ ಪ್ರತ್ಯಕ್ಷಗೊಳಿಸಲ್ಪಡುತ್ತದೆ. ಅದು ಭವ್ಯವಾದ ಮಹತ್ತರವಾದ ವಿಷಯವಾಗಿಯೇ ಘಟಿಸಲ್ಪಟ್ಟಿರುತ್ತದೆ.

ಇನ್ನು ಕೃತ್ರಿಮವಾಗಿ ರೂಪಿಸಲ್ಪಟ್ಟಿರುವ ಪಥಗಳು ಎಂದರೆ, ತುಂಡರಿಸಲ್ಪಟ್ಟ ಅಥವಾ ಒಡೆದುಹೋದ ಕಾಳುವೆ ರೀತಿಯಲ್ಲಿ ಇರುತ್ತವೆ. ಇವು ಮಾನವನ ಬುದ್ಧಿಮತ್ತೆಯಿಂದ ನಿರ್ಮಿತಗೊಂಡಿರುತ್ತವೆ. ನೀನು ಇಲ್ಲಿ ಸುರಕ್ಷಿತವಾಗಿ, ಸುಲಭವಾಗಿ ಖಚಿತವಾಗಿಯೂ ಚಲಿಸಬಹುದಾದ ಪರಿಗಣನೆಯಲ್ಲಿ ಇರುತ್ತದೆ. ಆದರೆ ಇಲ್ಲಿ ನಿಗಿದಗೊಳಿಸಲ್ಪಟ್ಟ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಮಾತ್ರವೇ ಚಲಿಸಬಹುದಾಗಿದೆ.

ಆದರೆ ನಾವು ಉದ್ದೇಶಿಸಿರುವ ಪಥವು ಯಾವುದೇ ಗುರುತು ಮೂಡಿರದ, ವಿಶಾಲವಾದ ಹಾಗೂ ದಾರಿಯೇ ಇಲ್ಲದ ಸ್ಥಿತಿಯಲ್ಲಿ ಇರುವ ಆರ್ಣವ (ಸಮುದ್ರದಂತೆ) ದಲ್ಲಿ ಸಾಗುವ ಪಯಣವಿದ್ದಂತೆ ಇದೆ. ನೀನು ಈ ಪಯಣದಲ್ಲಿ ಯಾವ ದಿಕ್ಕಿನಿಂದ ಬೇಕಾದರೂ ಯಾವ ದಿಕ್ಕೆನೆಡೆಗೂ ಪಯಣಿಸಬಹುದು. ಜಗತ್ತಿನ ಯಾವ ಭಾಗಕ್ಕಾದರೂ ಚಲಿಸಬಹುದು. ಅದಕ್ಕಾಗಿಯೇ ರೂಪಿಸಲ್ಪಟ್ಟು ಅನನಂತತೆಯಿಂದ ಲಭ್ಯವಾಗಿರುವ ಈ ಮುಕ್ತ ಅವಕಾಶವನ್ನು ನಾವು ಅನುಭವಿಸಬಹುದು. ಹೀಗಾಗಿ ಇಲ್ಲಿನ ಪಯಣಕ್ಕೆ ಒಂದು ಹಡಗಿನ ಅವಶ್ಯಕತೆ ಇದೆ. ಅದಕ್ಕೊಂದು ಅವಶ್ಯವಿರುವ ಚುಕ್ಕಾಣಿ ಹಾಗೂ ಒಂದು ದಿಕ್ಸೂಚಿ (ಕಂಪಾಸ್), ಪ್ರೇರಣಾ ಶಕ್ತಿ ಮತ್ತು ಓರ್ವ ನಿಪುಣ ಕಪ್ತಾನನ ಅವಶ್ಯಕತೆ ಇದೆ.

ಬ್ರಹ್ಮ ವಿದ್ಯೆಯೇ ನಿನ್ನ ಹಡಗು; ವಿಶ್ವಾಸವೇ ಅದರ ಚುಕ್ಕಾಣಿ; ಆತ್ಮಸಮರ್ಪಣೆಯೇ ಅದರ ದಿಕ್ಸೂಚಿ; ಇನ್ನುಳಿದವುಗಳೆಂದರೆ ಪ್ರೇರಣಾ ಶಕ್ತಿ, ಅದು 'ಅವಳೇ' ಆಗಿದ್ದಾಳೆ. ಇವಳೇ ಎಲ್ಲವನ್ನೂ ನಿರ್ವಹಿಸುತ್ತಿದ್ದು, ಆಥವಾ ಆ ದೇವರ ಆಧೀನದಲ್ಲಿರುವ ಲೋಕಗಳನ್ನು ನಿರ್ದೇಶಿಸುವ ಅಥವಾ ಧ್ವಂಸಗೊಳಿಸುವ ಕಾರ್ಯ ಮಾಡುತ್ತಾಳೆ. ಹೀಗಾಗಿ ದೇವರೇ ನಿನ್ನ ಹಡಗಿನ ಕಪ್ತಾನನಾಗಿದ್ದಾನೆ. ಆದರೆ ಅವನು ಅವನದೇ ಆದ ಕರ್ತವ್ಯದ ವಿಧಾನವನ್ನು

ಹೊಂದಿದ್ದಾನೆ. ಪ್ರತಿಯೊಂದಕ್ಕೂ ಅವನೇ ನಿರ್ಧರಿಸಿದ ಕಾಲಮಿತಿ ಇರುತ್ತದೆ. ಅವನ ಪಥ ಯಾವುದು ಎನ್ನುವದನ್ನು ಮತ್ತು ಅವನ ಕಾಲ (ಸಮಯ) ಕ್ಕಾಗಿ ಕಾಯಲೇಬೇಕಾಗುತ್ತದೆ.

*

**ಏಕಾಗ್ರತೆಯ ಸಾಧನೆ**

ಮನೋಭಿಲಾಷೆಯಾಗಿರುವದನ್ನು ಆಧ್ಯಾತ್ಮಿಕ ಅನುಭಾವವನ್ನಾಗಿಸಿ–ಕೊಳ್ಳುವದು ಹೇಗೆ ಎಂದು ಹಾಗೂ ಅದಕ್ಕೆ ಯಾವ ಶಿಸ್ತಿನ ವಿಧಾನದಲ್ಲಿ ಸಾಧನೆ ಮಾಡಬೇಕು ಎನ್ನುವದನ್ನು ನೀವು ಕೇಳುತ್ತಿದ್ದೀರಿ ತಾನೇ? ಇಲ್ಲಿ ಪ್ರಪ್ರಥಮವಾಗಿ ಅವಶ್ಯಕತೆ ಇರುವದೇನೆಂದರೆ – "ಏಕಾಗ್ರತೆಯನ್ನು ಸಾಧಿಸುವದು" ಅಥವಾ "ಏಕಾಗ್ರತೆಯ ಅಭ್ಯಾಸ". ಅದೂ ನಿಮ್ಮ ಪ್ರಜ್ಞೆಯನ್ನು (ಚೈತನ್ಯವನ್ನು) ನಿಮ್ಮಲ್ಲಿಯೇ ಕಾಣುವಂತೆ ಏಕಾಗ್ರತೆಯನ್ನು ಸಾಧಿಸಬೇಕು. ಬಹುತೇಕವಾಗಿ, ಸಾಮಾನ್ಯ ವ್ಯಕ್ತಿಯೋರ್ವನ ಮನಸ್ಸು ಮೇಲ್–ಸ್ತರದಲ್ಲಿಯೇ ಇರುವ ಚಟುವಟಿಕೆಗಳಲ್ಲಿ ಮಗ್ನವಾಗಿರುತ್ತದೆ. ಆದರೆ ಅದು "ನೈಜ ಸ್ಥಿತಿಯನ್ನು" ಕವಚದಲ್ಲಿ ಹುದುಗಿಸಿಕೊಂಡಿರುವ ಹಂತವಾಗಿರುತ್ತದೆ. ಅದೇ ಸಮಯಕ್ಕೆ ಇನ್ನೊಂದು ಹಂತವೆಂದರೆ, ಹೊರಾವರಣದ ಆರ್ಭಟದಲ್ಲಿಯೂ ಇರುತ್ತದೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಈ ಹೊರಾವರಣದ ಅಂತರಂಗದಲ್ಲಿಯೇ ಗೂಢವಾಗಿರುವ ಚೈತನ್ಯವು ಇರುವ ಬಗೆಗೆ ಮತ್ತು ಅದರ ನೈಜಸ್ಥಿತಿಯ ಬಗೆಗೆ, ಅದರ ಸುವಿಶಾಲ ವ್ಯಾಪ್ತತೆಯ ಬಗೆಗೆ, ಸ್ವಭಾವಾಂತರ್ಗತವಾಗಿರುವ ಆ ನಿಗೂಢ ಸತ್ಯದ ಬಗೆಗೆ ಮತ್ತು ಅದು 'ಸ್ವ'ತ್ವವನ್ನು ತಿಳಿಸಿಕೊಡುತ್ತಿರುವ ಬಗೆಗೆ, ತಿಳಿದುಕೊಳ್ಳುವದೂ ಅಲ್ಲದೇ ಹಾಗೂ ಈ 'ಸ್ವ'ತ್ವದಿಂದಲೂ ಬಿಡುಗಡೆ ಹೊಂದಿ ಮುಕ್ತಿಯನ್ನು ಪಡೆಯುವದರ ಬಗೆಗೆ ಅರಿವು ಮೂಡಿಸಿಕೊಂಡಲ್ಲಿ, ಈ ಮನಸ್ಸಿನ ಹೊರಾವರಣದ ಬಗೆಗೆ ಶಾಂತವಾಗಿದ್ದುಕೊಂಡು, ಆ ಏಕಾಗ್ರತೆಯ ಬಗೆಗೆ ಜೀವಿಸುವಂತಾಗಬೇಕು.

ಬರೀ ಹೊರಾವರಣದ ಹಂತದ ಆಚೆ ಇರುವ ಈ ನೈಜ ಚೈತನ್ಯದ ಜೊತೆಗೆ ಮತ್ತೆ ಎರಡು ಪ್ರಮುಖ ಸ್ಥಾನಗಳು (ಕೇಂದ್ರಗಳು) ಇರುತ್ತವೆ. ಅವುಗಳಲ್ಲಿ ಮೊದಲನೆಯದು **ಹೃದಯ**. ಇದು ಎದೆಯ ಮಧ್ಯಭಾಗದಲ್ಲಿ ಸ್ಥಿತವಿರುವ **ಹೃತ್ಕೇಂದ್ರವಾಗಿದೆ**. ಎರಡನೆಯದು **ಶಿರೋಭಾಗದಲ್ಲಿ** (ತಲೆಯ ಭಾಗದಲ್ಲಿ) ದೆ.

ಈ ಏಕಗ್ರತೆಯು ಹೃದಯದ ಆಂತರ್ಯದಲ್ಲಿಯೇ ಉದಿಸುತ್ತದೆ. ಇದೇ ಮುಂದುವರೆದು ಆಂತರಂಗಿಕವಾಗಿ ತೆರೆತೆರೆದುಕೊಳ್ಳುವದರ ಮೂಲಕ ಮತ್ತೂ ಮತ್ತೂ ಆಳವಾಗಿ, ಸಾಂದ್ರಗೊಂಡು ಚಲಿಸುತ್ತದೆ. ಈ ಮೂಲಕವೇ ಅದು ವಿಕಸನಗೊಂಡು ಆತ್ಮವಾಗಿ ಚೈತ್ಯ ಪುರುಷ (ಚೈತ್ಯಾತ್ಮ) ನಂತಾಗುತ್ತದೆ. ಆದರೂ ಈ ಹಂತದಲ್ಲಿರುವ ಅಂಶಗಳೆಲ್ಲವೂ ವೈಯಕ್ತಿಕ ದೈವೀ ಅಂಶಗಳಾಗಿರುತ್ತವೆ.

ಈ ಚೈತನ್ಯವು ಕವಚವನ್ನು ತೊರೆಯುದರ ಮೂಲಕ ಮುಂಚೂಣಿಗೆ ಬಂದು, ಈ ಸ್ವಭಾವವನ್ನು ನಿಯಮಿತಗೊಳಿಸುತ್ತದೆ. ಸ್ವಭಾವವನ್ನು ಕ್ರಿಯಾಪ್ರವೃತ್ತಿಗೆ ತೊಡಗುವಂತೆ ಮಾಡುತ್ತದೆ. ಅದರ ಎಲ್ಲ ಅಂಶಗಳೂ ಸದಾ ಋತದ ಕಡೆಗೇ ಚಲಿಸುವಂತೆ ಮಾರ್ಗದರ್ಶನ ನೀಡುತ್ತದೆ. ದಿವ್ಯತ್ವದ ಕಡೆಗೆ ಸಾಗುವಂತೆ ಮಾಡುತ್ತದೆ. ಅಲ್ಲಿ ಅಲ್ಲಿ ಆ ಊರ್ಧ್ವದಲ್ಲಿ ಇರುವ ಎಲ್ಲವೂ ಇಲ್ಲಿಯೇ ಅವತರಣಗೊಳ್ಳಲು ಕರೆ ಕೊಡುವಂತೆ ಪ್ರಾರ್ಥಿಸುವಂತೆ ಮಾಡುತ್ತದೆ. ಜೊತೆಗೆ ಇದು ಅಧಿಷ್ಠಾನದ (ಅಸ್ತಿತ್ವದ) ಪ್ರಜ್ಞೆಯನ್ನೂ ರೂಪಿಸುತ್ತದೆ. ಆ ಪರಮೋಚ್ಚದ ಬಗೆಗೆ ನಿಷ್ಠಾಪೂರ್ಣ ಸಮರ್ಪಣೆಯನ್ನು ರೂಪಿಸುತ್ತದೆ. ಅಲ್ಲಿ ಆ ಮಹದ್–ಶಕ್ತಿಯ ಅವತರಣವಾಗಲು ನಮ್ಮಿಂದ ಬರುವ ಕರೆಯನ್ನೇ (ಪ್ರಾರ್ಥನೆಯನ್ನೇ) ಕಾಯುತ್ತಿರುತ್ತದೆ.

ಹೃತ್ಕೇಂದ್ರದಲ್ಲಿ ಏಕಾಗ್ರತೆಯನ್ನು ಸಾಧಿಸುವ ಹಂತದಲ್ಲಿ, ಆ ದಿವ್ಯಕ್ಕೆ ತನ್ನನ್ನು ತಾನೇ ಸಂಪೂರ್ಣವಾಗಿ ಅರ್ಪಿಸಿಕೊಂಡು, ಆಂತರಂಗಿಕವಾಗಿಯೇ ತೆರೆತೆರೆದುಕೊಳ್ಳುವ ಅಭೀಪ್ಸೆಯನ್ನು ಹೊಂದಿ, ಹೃದಯದಲ್ಲಿ ಅದು ಅಸ್ತಿತ್ವಗೊಳ್ಳುವದೇ ಅದರ ಪ್ರಪ್ರಥಮ ಸಂಗತಿಯಾಗಿದೆ. ಇದೆಲ್ಲವೂ ನಿಖರವಾಗಿಯೂ ಘಟಿಸಲೇಬೇಕು.ಇದೇ ಸ್ವಾಭಾವಿಕವಾಗಿರುವ ಪ್ರಾರಂಭದ ಬಿಂದುವಾಗಿದೆ. ಒಮ್ಮೆ ಇದು ಫಲಿತಾಂಶವಾಗಿ ಅನುಷ್ಠಾನಿಸಲು ಸಾಧ್ಯವಾದಲ್ಲಿ, ಮತ್ತು ಇದು ಆಧ್ಯಾತ್ಮಿಕ ಪಥವನ್ನು ನಿರ್ಮಿಸುವಲ್ಲಿ ಅತ್ಯಂತ ಸರಳ ಹಾಗೂ ಸುಲಭ ಜೊತೆಜೊತೆಗೆ ಸುರಕ್ಷತೆಯನ್ನೂ ಒದಗಿಸುತ್ತದೆ. ಇನ್ನುಳಿದ ಎಲ್ಲ ಪಥಗಳಿಗಿಂತಲೂ ಇದು ಅತ್ಯಂತ ಸುಲಭದ ಮಾರ್ಗವಾಗಿದೆ, ಹೀಗಾಗಿ ಸೂಕ್ತವೂ ಆಗಿದೆ.

ಇನ್ನು ಏಕಾಗ್ರತೆಯ ಎರಡನೇ ಹಂತವೆಂದರೆ, ಶೀರೋಭಾಗದಲ್ಲಿರುವ **'ಮನೋಕೇಂದ್ರ'**. ಇದು ಮನಸ್ಸಿನ ಹೊರಾವರಣದ ಹಂತದಲ್ಲಿ ಪ್ರಶಾಂತತೆಯನ್ನು

ರೂಪಿಸಿಕೊಳ್ಳಲು ಸಮರ್ಥವಾದಲ್ಲಿ, ಆಗ ಅದೂ ಸಹಿತ ಅಂತರಂಗಿಕವಾಗಿ ತನ್ನನ್ನೂ ತೆರೆದುಕೊಂಡು, ಬೃಹದ್ ಆಗುತ್ತ, ವ್ಯಾಪ್ತಗೊಳ್ಳುತ್ತ, ಘನಗೊಳ್ಳುತ್ತ ಮತ್ತು ಆಳವಾಗುತ್ತಲೇ ಆಧ್ಯಾತ್ಮಿಕ ಅನುಭವಗಳನ್ನು ಹಾಗೂ ಆಧ್ಯಾತ್ಮಿಕ ಜ್ಞಾನವನ್ನೂ ಸ್ವೀಕರಿಸಲು ಸಮರ್ಥವಾಗುತ್ತದೆ. ಆದರೆ ಒಮ್ಮೆ ಈ ಹಂತದಲ್ಲಿ (ಕೇಂದ್ರದಲ್ಲಿ) ಏಕಾಗ್ರತೆಯನ್ನು ಸಾಧಿಸುವಲ್ಲಿ, ಪ್ರಶಾಂತವಾಗಿರುವ ಚೈತನ್ಯವನ್ನು ಊರ್ಧ್ವಮುಖಿಯಾಗಿಸುವಲ್ಲಿ, ಅದನ್ನು ಮನಸ್ಸಿಗಿಂತಲೂ ಮೇಲೆ ಮೇಲೆ ಸಾಗುವಂತೆ ಏಕಾಗ್ರತೆಯನ್ನು ರೂಢಿಸಿಕೊಳ್ಳಬೇಕು. ಕೆಲವು ಸಮಯದ ನಂತರದಲ್ಲಿ, ಅಂದರೆ ಯಾವಾಗ ಚೈತನ್ಯವು ಊರ್ಧ್ವಮುಖೀ ಪ್ರಗತಿಯನ್ನು ಸಾಧಿಸಿದೆ ಎನ್ನುವ ಅನುಭವವು ದೊರೆಯುತ್ತದೆಯೋ, ಮತ್ತು ಇದು ಅಂತಿಮವಾಗಿ ಈ ದೇಹದಲ್ಲಿ ದೀರ್ಘಕಾಲದಿಂದಲೂ ಜೋಡಣೆಯಾಗಿಯೇ ಇರುವ ಆ ಮುಚ್ಚಳದಿಂದ ಮತ್ತು ಅದರ ಆಚೆ ತದುತ್ತರದಲ್ಲಿ ಉದಿಸುತ್ತದೆಯೋ, ಆಗ ಶಿರಸ್ಸಿನ (ತಲೆಯ) ಮೇಲ್ಭಾಗದಲ್ಲಿ) ಮೇಲೆ ಅನಂತತೆಯಲ್ಲಿ ಮುಕ್ತಿಯನ್ನು ತಲುಪುವ ಹಂತಕ್ಕೆ ಏರಿರುತ್ತದೆ.

ಇಲ್ಲಿಂದಲೇ ನಮಗೆ ವಿಶ್ವಾತ್ಮ, ದಿವ್ಯ ಪ್ರಶಾಂತತೆ, ಪ್ರಕಾಶ, ಶಕ್ತಿ, ಜ್ಞಾನ ಹಾಗೂ ಅನಂತಗಳು ಲಭ್ಯವಾಗುತ್ತವೆ. ಇಲ್ಲಿ ಪ್ರವೇಶ ಪಡೆಯುದರ ಮೂಲಕ ಮತ್ತು ಅದೇ ರೂಪಕ್ಕೆ ಪರಿವರ್ತನಗೊಳ್ಳುವದರಿಂದ ಹಾಗೂ ಈ ಎಲ್ಲವೂ ಸ್ವಭಾವವಾಗಿ ಅವತರಣಗೊಳ್ಳುವದನ್ನು ಅನುಭ(ಭಾ)ವಿಸುತ್ತಾನೆ. ಮನಸ್ಸು ಸದಾ ಅಕ್ಷೋಭದ (ತಲ್ಲಣರಹಿತ ಪ್ರಶಾಂತತೆಯ) ಸ್ಥಿತಿಯಲ್ಲಿಯೇ ಇರುವದರ ಅಭೀಪ್ಸೆಯನ್ನು ಮನಸ್ಸಿನಾಳದಲ್ಲಿಯೇ ಹೊಂದಿ, ಈ ಶಿರೋಭಾಗದ ಕೇಂದ್ರದಲ್ಲಿ ಏಕಗ್ರತೆಯನ್ನು ಸಾಧಿಸಿದಲ್ಲಿ, ಮತ್ತು 'ಸ್ವ'ತ್ವದ ಸಾಕ್ಷಾತ್ಕಾರವನ್ನು ಮಾಡಿಕೊಂಡು, ಆ ದೈವವನ್ನೂ ಸಾಕ್ಷಾತ್ಕರಿಸಿಕೊಳ್ಳುವದು ಎರಡನೇ ಹಂತದ ವಿಧಾನವಾಗಿದೆ.

ಆದರೂ, ಇಲ್ಲಿ ಅತ್ಯಂತ ಮುಖ್ಯವಾಗಿರುವ ಸಂಗತಿ ಎಂದರೆ, ಈ ಶಿರೋಭಾಗದ ಏಕಾಗ್ರತೆಯನ್ನು ಸಾಧಿಸುವದು, ಅದು ಆ ಊರ್ಧ್ವದೆಡೆಯಲ್ಲಿ ಮಧ್ಯದಲ್ಲಿರುವ ಕೇಂದ್ರವನ್ನು ಜಾಗ್ರತಗೊಳಿಸುವ ಸಲುವಾಗಿ ಸಿದ್ಧಗೊಳಿಸಲಿಕ್ಕೆ ಮಾತ್ರ ಎನ್ನುವದನ್ನು ನೆನಪಿನಲ್ಲಿಡಬೇಕಾಗಿದೆ. ಇಲ್ಲವಾದಲ್ಲಿ, ಅವನ ಮನಸ್ಸಿನಲ್ಲಿಯೇ ಅವನು ಮುಚ್ಚಲ್ಪಟ್ಟು, ಕಳೆದೂ ಹೋಗಬಹುದು. ಇಲ್ಲಿ ಸತ್ಯದ ಪ್ರತಿಬಿಂಬಗಳನ್ನು ಮಾತ್ರವೇ ಸಾಧಿಸಲು ಶಕ್ಯವಾಗುತ್ತದೆಯೇ ವಿನಾ ಸತ್ಯವನ್ನಂತೂ ಅಲ್ಲ. ಇವೆಲ್ಲದರ ಗಮ್ಯವಾಗಿರುವ ಅಮರ್ತ್ಯಸ್ಥಿತಿಯ

ಆಧ್ಯಾತ್ಮಿಕದಲ್ಲಿ ಪ್ರಕಾಶಗೊಂಡು ಪೂರ್ಣಗೊಳ್ಳುವ ಬದಲು, ಅದರ ಪ್ರತಿಬಿಂಬಗಳಲ್ಲಿಯೇ ವಾಸಿಸುವಂತಾಗುತ್ತದೆ ಅಷ್ಟೇ.

ಕೆಲವೊಂದು ಕಾರಣಗಳಿಂದ ಕೆಲವರಿಗೆ ಈ ಮಾನಸಿಕ ಏಕಾಗ್ರತೆಯು ಅತಿ ಸುಲಭವೆಂದು ತೋರಿದರೆ, ಮತ್ತೆ ಕೆಲವರಿಗೆ ಹೃತ್ಕೇಂದ್ರದ ಏಕಾಗ್ರತೆಯೇ ಸುಲಭವಾಗಿರುತ್ತದೆ. ಅದರಲ್ಲೂ ಕೆಲವರು ಇವೆರಡನ್ನೂ ಪರ್ಯಾಯವಾಗಿ ಅನುಷ್ಠಾನಿಸಿಕೊಂಡು ಪ್ರಗತಿಯನ್ನು ಸಾಧಿಸುತ್ತಾರೆ.

ಆದರೆ ಹೃತ್ಕೇಂದ್ರದಿಂದಲೇ ಏಕಾಗ್ರತೆಯನ್ನು ಸಾಧಿಸುವದು ಹಾಗೂ ಇದನ್ನು ಯಾರಾದರೂ ಅನುಷ್ಠಾಣಿಸುವದು ಸದ್ಯದ ಅತ್ಯಾವಶ್ಯಕವಾದ ಸಂಗತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/9**

**ಸಾಧನೆಯ ಮತ್ತೊಂದು ಆಯಾಮ**

ಸಾಧನೆಯ ಮತ್ತೊಂದು ಆಯಾಮವು ಈ ಸ್ವಭಾವದ ಚಟುವಟಿಕೆಗಳ ಕುರಿತಾಗಿ ತಿಳಿಸುತ್ತದೆ. ಅದು ಭೌತಿಕ–ಜೀವಿಯ (ಅನ್ನಮಯ ಸತ್ತೆ) ಜೀವಾತ್ಮ ಅಥವಾ ಪ್ರಾಣದ ಬಗೆಗೆ ಇರುವ ವಿಷಯವನ್ನು ಒಳಗೊಂಡಿದೆ. ಇಲ್ಲಿ ಆಂತರಂಗಿಕವಾಗಿ ಸ್ವಭಾವಕ್ಕನುಗುಣವಾಗಿ ಮನಸ್ಸನ್ನು ಸಮ್ಮತಿಸಿಕೊಂಡು ಸಾಗುವ ತತ್ತ್ವವಿರುತ್ತದೆ. ಹೀಗಾಗಿ ಇಲ್ಲಿ ಯಾರೂ ಸಹಿತ ವಿವಾದಾಸ್ಪದವಾಗಿರುವಂತೆ ಎರಡು ಭಾಗಗಳಲ್ಲಿ ವಿಭಜನೆ ಹೊಂದುವದಿಲ್ಲ. ಇದಕ್ಕಾಗಿಯೇ ಕೆಲವು ಸಾಧನಾ ಕ್ರಮಗಳು ಇಲ್ಲಿ ರೂಪಿಸಲ್ಪಡುವ ಸಾಧ್ಯಾಸಾಧ್ಯತೆಯ ಪ್ರಕ್ರಿಯೆಗಳಾಗಿವೆ.

ಅವುಗಳಲ್ಲಿ ಒಂದು, ಎಲ್ಲವನ್ನೂ ಆ ದಿವ್ಯತೆಗೆ ಸಮರ್ಪಿಸಿಕೊಳ್ಳುವದು ಮತ್ತು ಆ ಮೂಲಕ ಆಂತರ್ಯದಲ್ಲಿ ಮಾರ್ಗದರ್ಶನ ಲಭ್ಯವಾಗುವಂತೆ ಪ್ರಾರ್ಥಿಸುವದರ ಜೊತೆಗೆ, ಅವನದೇ ಸ್ವಭಾವವನ್ನು ಮತ್ತೂ ಮತ್ತೂ ಉನ್ನತವಾಗಿರುವ ಶಕ್ತಿಯ ಹಂತಕ್ಕೆ ಆರೋಹಣೆಗೊಳ್ಳುವದಾಗಿದೆ.

ಒಂದು ವೇಳೆ ಆಂತರಂಗಿಕವಾಗಿಯೇ ಅಲ್ಲಿ ಆತ್ಮವು ವಿಕಸಿತವಾಗುತ್ತದೆ ಎಂದಾದಲ್ಲಿ ಆಗ ಈ ಚೈತ್ಯ ಪುರುಷನು (ಚೈತ್ಯಾತ್ಮವು) ಮುಂಚೂಣಿಗೆ ಬರುತ್ತಾನೆ. ಹೀಗಾದ ನಂತರದಲ್ಲಿ ಆತ್ಮಿಕವಾಗಿಯೇ ಭೇದಭಾವದಿಂದ ರೂಪಣೆಗೊಳ್ಳುವ ಯಾವುದೇ ತೊಂದರೆಯೂ ಎದುರಾಗುವದಿಲ್ಲ. ಇದೊಂದು

ನಿಶ್ಚಿತವಾದ ಸಂದೇಶವಾಗಿದ್ದು, ಅಂತಿಮವಾಗಿ ಅದು ನಿಯಾಮನಗೊಳಿಸಲ್ಪಡುವ ಮೂಲಕ ಪ್ರಕಟಗೊಳ್ಳುತ್ತದೆ. ಶಾಂತವಾಗಿ, ಸಮಾಧಾನ ಚಿತ್ತದಲ್ಲಿ, ಅಪರಿಪೂರ್ಣತೆಯನ್ನು ತೊಡೆದು ಹಾಕಿರುತ್ತದೆ. ಅಲ್ಲಿ ಸೂಕ್ತವಾದ ಮಾನಸಿಕ ಹಾಗೂ ಪ್ರಾಣಿಕ ಸಂಚಲನಗಳನ್ನು ರೂಪಿಸುತ್ತದೆ. ಭೌತಿಕ ಪ್ರಜ್ಞೆಯನ್ನೂ ಸಹಿತ ಪುನರ್–ಸಂಯೋಜನೆಗೊಳಿಸುತ್ತದೆ.

ಮನಸ್ಸಿನ ಸಂಚಲನವು ಇನ್ನೊಂದು ಆಯಾಮವಾಗಿದೆ. ಚೈತ್ಯಾತ್ಮದಿಂದಲೂ ಮುಕ್ತವಾಗಿ, ಆ ಹಂತದ ಎಲ್ಲ ಚಟುವಟಿಕೆಗಳೂ ಸಂಪ್ರದಾಯದ ಅಭ್ಯಾಸ ಬಲದಲ್ಲಿ ರೂಪುಗೊಂಡಿರುವ ಪ್ರಕೃತಿಜನ್ಯವಾಗಿರುತ್ತವೆ. ವೈಯಕ್ತಿಕ ಹಂತದಲ್ಲಿ ನಮ್ಮ ಮೇಲೆ ಹೇರಲ್ಪಟ್ಟಿರುತ್ತದೆ. ಅದಕ್ಕಿಂತ ಹೆಚ್ಚಾಗಿ ಇದು ಗತಿ ಇತಿಹಾಸದ ಕಾರ್ಯಫಲದಂತೆ ಇರುತ್ತದೆ. ಹೀಗಾಗಿ ಇದು ನಮ್ಮ ನೈಜ ಆತ್ಮದ ಭಾವದಂತೆ ಇರುವದಿಲ್ಲ. ಈ ವಿಷಯದಲ್ಲಿ, ಯಾರಾದರೂ ಸಫಲತೆಯನ್ನು ಆಂಶಿಕಾಗಿಯಾದರೂ ಗಳಿಸುವಲ್ಲಿ ವಿಜಯಿಯಾದಲ್ಲಿ, ಆಗ ಆ ವ್ಯಕ್ತಿಯು ಮಮಕಾರರಹಿತನಾಗಿರುತ್ತಾನೆ; ಅವನು ಮನಸ್ಸನ್ನು ಮತ್ತು ಚಟುವಟಿಕೆಗಳನ್ನು ಕೇವಲ 'ಸ್ವ'ತ್ವವನ್ನು ಕಾಣಲು ಬಳಸದೇ, ತನ್ನಂತರಂಗದ ಅದರಲ್ಲೂ ಅಂತರಾತ್ಮದ ಬಗೆಗೆ ಅವನಲ್ಲಿಯೇ ಇರುವ ಈ ಅಂತರಾತ್ಮದ ಬಗೆಗೆ ಅರಿವನ್ನು ಹೊಂದಿ ಆಂತರ್ಯದ ಪ್ರಾಣವನ್ನು ಆಂತರ್ಯದ ಭೌತಿಕ 'ಸಂರಚನೆಯನ್ನು, ಅನಂತ–ಮೌನ–ಶಾಂತವಾದ, ಬಂಧಮುಕ್ತವಾದ, ಯಾವುದಕ್ಕೂ ಅಂಟಿಕೊಳ್ಳದ ನಿರ್ಮಮಕಾರದಲ್ಲಿ ಇರುತ್ತಾನೆ. ಅಂದರೆ ಆತ್ಮದ ನೈಜಸ್ವರೂಪದ ಪ್ರತಿಫಲನವೇ ಅಲ್ಲಿರುವದನ್ನು ಕಾಣುತ್ತಾನೆ. ಅದೂ ನೇರಾನೇರವಾಗಿ ತಾನು ಅದರ ಪ್ರತಿನಿಧಿಯಾಗಿರುವದನ್ನು ಅನುಭಾವಿಸುತ್ತಾನೆ.

ಈ ಹಂತದಿಂದ ಆಂತರ್ಯದಲ್ಲಿರುವ ಈ ಪ್ರಶಾಂತ ಪ್ರಾಣವು (ಜೀವವು) ಯಾವುದನ್ನು ತಿರಸ್ಕರಿಸಬಹುದೋ ಅದೆಲ್ಲವನ್ನೂ ತಿರಸ್ಕರಿಸುತ್ತ, ಯಾವುದನ್ನು ಸ್ವೀಕರಿಸಬಹುದೋ ಅದೆಲ್ಲವನ್ನೂ ಸ್ವೀಕರಿಸುತ್ತ ಮತ್ತೆ ರೂಪಾಂತರಣಕ್ಕೆ ಅವಶ್ಯವಿದ್ದುದನ್ನು ಸ್ವೀಕರಿಸುತ್ತಲೇ ಸಾಗುತ್ತಾನೆ. ಅಂದರೆ ಅತಿ ಮುಖ್ಯವಾಗಿ ಆಂತರ್ಯದ "ಇಚ್ಛೆಯನ್ನು" – ಪರಿಪೂರ್ಣತೆಗೆ ಸಾಗುವ ಇಚ್ಛೆಯನ್ನು – ಅದಕ್ಕಾಗಿ ಆ ದಿವ್ಯ ಶಕ್ತಿಗೆ ಪ್ರಾರ್ಥಿಸುತ್ತ (ಕರೆ ಕೊಡುತ್ತ) ತನ್ನ ಪ್ರತಿ ಹೆಜ್ಜೆಯಲ್ಲಿಯೂ, ಅವಶ್ಯವಿರುವ ಈ ಪ್ರಕೃತಿಯ ಬದಲಾವಣೆಯನ್ನು ಘಟಿಸುವಂತೆ ಕರೆ ಸಲ್ಲಿಸುತ್ತಾನೆ. ಇದೂ ಸಹಿತ ಮನಸ್ಸನ್ನು, ಜೀವನವನ್ನು

ಹಾಗೂ ದೇಹವನ್ನು ಆಂತರ್ಯದಲ್ಲಿರುವ ಚೈತ್ಯಾತ್ಮವಾಗಿ ಪರಿವರ್ತಿಸಬಹುದು. ಈ ಮೂಲಕ ಮಾರ್ಗದರ್ಶಕ ಪ್ರಭಾವವನ್ನು ನೇರವಾಗಿ ಮಾರ್ಗದರ್ಶನದ ಮೂಲಕವೇ ಪಡೆದುಕೊಳ್ಳಬಹುದು.

ಬಹುತೇಕ ಸಂದರ್ಭಗಳಲ್ಲಿ, ಇವೆರಡೂ ಆಯಾಮಗಳು ಒಂದಕ್ಕೊಂದು ಸಮ್ಮಿಲನಗೊಳ್ಳುತ್ತವೆ. ಆ ಮೂಲಕ ಒಗ್ಗೂಡಿಕೊಂಡೇ ಕಾರ್ಯತತ್ಪರವಾಗುತ್ತವೆ. ಅಂತಿಮವಾಗಿ "ಒಂದೇ" ಅಗಿ ಬೆಳಗುವಂತೆ ಮಾಡುತ್ತವೆ. ಆದರೆ ಇವೆರಡರಲ್ಲಿ ಯಾವುದೇ ಒಂದನ್ನು ಆಯ್ಕೆ ಮಾಡಿಕೊಂಡು ಸಾಧನೆಯನ್ನು ಪ್ರಾರಂಭಿಸಿದರೂ, ಅದು ಅವನೀಗ ಅತ್ಯಂತ ಸ್ವಾಭಾವಿಕ ಮತ್ತು ಅನುಸರಿಸಲು ಯೋಗ್ಯವಾಗಿರುವದರ ಜೊತೆಗೆ ಸುಲಭವಾಗಿರುವದನ್ನೂ ಕಾಣಬಹುದು.

ಅಂತಿಮವಾಗಿ, ಎಲ್ಲೆಲ್ಲಿ ವೈಯಕ್ತಿಕವಾಗಿ ಕೈಕೊಂಡ ಪ್ರಯತ್ನಗಳು ಆಘಾತಕ್ಕೆ ಸಿಲುಕಿ ತೊಂದರೆ ಅನುಭವಿಸುತ್ತವೆಯೋ, ಅಲ್ಲೆಲ್ಲ ಗುರುವಿನ ಮಧ್ಯ ಪ್ರವೇಶದಿಂದ ಮತ್ತು ಸಾಕ್ಷಾತ್ಕಾರಕ್ಕಾಗಿ ಅಲ್ಲಿ ಅವಶ್ಯವಿದ್ದುದನ್ನು ತರುವ ಸಲುವಾಗಿ ಮತ್ತು ಅತ್ಯಾವಶ್ಯವಾಗಿರುವದನ್ನು ತಕ್ಷಣವೇ ಕೈಕೊಳ್ಳುವಂತೆ ಅವಕಾಶ ದೊರೆಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/8**

ಇಲ್ಲಿ ಮತ್ತೂ ಒಂದು ವಿಧಾನವಿದೆ –

ಅ) ಹೃತ್ಪೂರ್ವಕವಾಗಿಯೇ ಏಕಾಗ್ರತೆಯನ್ನು ಸಾಧಿಸಿ ಮತ್ತು ಅಭೀಪ್ಸೆಯನ್ನು ಹೊಂದುವದು ಆ) ದಿವ್ಯಮಾತೆಯನ್ನು (ವಿಶ್ವಮಾತೆಯನ್ನು) ಇಲ್ಲಿಗೇ ಆಹ್ವಾನಿಸಿ ಆ ಮೂಲಕ ಮಾನಸಿಕವಾಗಿ, ಪ್ರಾಣಿಕವಾಗಿ ಪರಿಶುದ್ಧಗೊಳ್ಳಲು, ನಿರಂತರವಾಗಿ ಅವಳ ಮಾರ್ಗದರ್ಶನವು ಲಭ್ಯವಾಗುವಂತೆ, ಹಾಗೂ ಅವಳ ಅಸ್ತಿತ್ವವನ್ನೂ ಅಲ್ಲಿ ಕಾಣುವಂತೆ ಮತ್ತು ಅದು ಸದಾ ಅನುಭವಕ್ಕೆ ಬರುವಂತೆ ಕೋರುವದಾಗಿದೆ.

ಇದಕ್ಕಾಗಿ ಮೊದಲು ಶಿರೋಭಾಗದಲ್ಲಿನ ಪ್ರಶಾಂತ ಮನಸ್ಸಿನ ಮೇಲೆಯೇ ಏಕಾಗ್ರತೆಯನ್ನು ಸಾಧಿಸಿ, ತನ್ನಲ್ಲಿ ತಾನೇ ಮೊದಲು ತೆರೆತೆರೆದುಕೊಳ್ಳುವಂತೆ ಹಾಗೂ ಆ ದಿವ್ಯಬಲವನ್ನು ಪಡೆಯುವಂತೆ, ಪ್ರಕಾಶವನ್ನು ಕಾಣುವಂತೆ ಸೂಚಿಸಿಕೊಳ್ಳಬೇಕು. ಏಕೆಂದರೆ ಎಲ್ಲವೂ ಈ ಮನೋಪಾತಳಿಗಿಂತ ಮೇಲೆಯೇ ಇರುತ್ತದೆ. ಅದು ಅವತರಣಗೊಂಡು, ಈ ದೇಹದಲ್ಲಿ ಬರಲಿ ಎಂದು

ಪ್ರಾರ್ಥಿಸಿಕೊಳ್ಳುವದಾಗಿದೆ. ಹೀಗೆ ಇಡೀ ಜೀವನವೇ, ಇದಾದರೂ ಸರಿ ಅದಾದರೂ ಸರಿ ಅಥವಾ ಎರಡೂ ಸರಿಯಾಗಿದ್ದು, ಅದೆಲ್ಲವೂ ಆಯಾ ಸಾಧಕನ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/45 – ಶ್ರೀ ಅರವಿಂದರು**

ಬರಲಿಹುದು ದಿನವೊಂದು, ನಾನು ಆಶಿಸುತ್ತಿರುವದೇನೆಂದರೆ, ಪಾಂಡಿಚೇರಿಯ ಮಹತ್ವವೆಂದರೆ, ಅದು ಅಲ್ಲಿರುವ ಶ್ರೀ ಅರವಿಂದರ ಅಸ್ತಿತ್ವದಿಂದಾಗಿಯೇ ಎಂದು ಮುಕ್ತ ಕಂಠದಿಂದ ಹೇಳುವದನ್ನು ನಾನು ಆಶಿಸುತ್ತೇನೆ, ಮತ್ತು ಇದು ನೈಜಘಟನೆಯಾಗಿದೆ ಎಂದು ಹೇಳುವ ದಿನವೊಂದು ಖಂಡಿತವಾಗಿಯೂ ಬಂದೇ ಬರುತ್ತದೆ ಎಂದು ಹಂಬಲಿಸುವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/32 – ಶ್ರೀಮಾತೆ**

**ಪಥಕ್ಕೆ ತಕ್ಕ ಸಾಮರ್ಥ್ಯ ಮತ್ತು ಕರೆ**

ನಾನು ಸಿದ್ಧಗೊಂಡಿದ್ದೇನೆ ಎಂದರೆ ಸಮರ್ಥನಾಗಿದ್ದೇನೆ ಎಂದರ್ಥವಲ್ಲ, ಆದರೆ ಆ ಇಚ್ಛೆಯನ್ನು ಹೊಂದಿದ್ದೇನೆ ಎಂದಾಗುತ್ತದೆ ಅಷ್ಟೇ. ಅಂತರಂಗದ ಎಲ್ಲ ಅಡೆತಡೆಗಳನ್ನೂ ಎದುರಿಸುವ ಇಚ್ಛೆ ಇದ್ದಲ್ಲಿ ಹಾಗೂ ಮುಂದುವರೆಯಲು ಸಾಧ್ಯವಾದಲ್ಲಿ – ಅದು ಎಷ್ಟೇ ದೀರ್ಘಕಾಲ ತೆಗೆದುಕೊಂಡರೂ ಸಹಿತ – ಅಲ್ಲಿ ನಿಗದಿತವಾದ ಪಥವೊಂದು ಆಯ್ಕೆ ಮಾಡಲ್ಪಟ್ಟಿರುತ್ತದೆ.

*

ಸಾಮಾನ್ಯ ಜೀವನದ ಕುರಿತು ಕೇವಲ ಅಸಂತೃಪ್ತಿಯ ತಹತಹಿಕೆ ಇದ್ದಲ್ಲಿ ಅದು "ಈ ಯೋಗ"ವನ್ನು ಪ್ರಾರಂಭಿಸಲು ಸಹಕಾರಿಯಾಗಿರುವದಿಲ್ಲ. ಅಂತರಂಗದ ಧನಾತ್ಮಕವಾದ ಕರೆ, ಒಂದು ಬಲವಾದ ಇಚ್ಛೆ, ಮತ್ತು ನಿಖರವಾದ ಅಚಲತನಗಳು ಮಾತ್ರ ಈ ಆಧ್ಯಾತ್ಮಿಕ ಜೀವನದಲ್ಲಿ ಯಶಸ್ಸು ಕಾಣಲು ಅವಶ್ಯವಾಗಿರುತ್ತವೆ.

*

ಅರ್ಹತೆಯ ಬಗೆಗೆ ಪ್ರಶ್ನೆ ಎತ್ತುವದೇ ಒಂದು ಅನುಪಯುಕ್ತವಾದ ವಿಷಯವಾಗಿದೆ. ಇಲ್ಲಿ ಯಾರೂ ಅರ್ಹರಲ್ಲ – ಎಲ್ಲ ಮಾನವರೂ ಅಸಾಮರ್ಥ್ಯದಿಂದ ಹಾಗೂ ಪ್ರಮಾದಗಳನ್ನು ಮಾಡುವದರಿಂದಲೇ – ಅದರಲ್ಲೂ ಮಹಾನ್ ಸಾಧಕರೂ ಸಹಿತ – ಮುಕ್ತರಲ್ಲ. ಇಲ್ಲಿರುವ ಒಂದೇ ಒಂದು ವಿಷಯ ಅದು 'ಅಭೀಪ್ಸೆ"; ಆ ದಿವ್ಯ ಕೃಪೆಯಲ್ಲಿ ವಿಶ್ವಾಸ ಮತ್ತು ಆ ದೇವತೆಯು ನಿಮ್ಮಲ್ಲಿ ಕಾರ್ಯ ಮಾಡಲು ಅವಕಾಶ ಕೊಡಿ ಸಾಕು.

*

ಇಲ್ಲಿ ಅರ್ಹ ಅಥವಾ ಅನರ್ಹತೆಯನ್ನು ನಿರ್ಧರಿಸುವ, ನಿಗದಿಗೊಳಿಸುವ ಯಾವುದೇ ಗುಣಗಳಿವೆ ಎಂದು ಹೇಳುವದು ಕಷ್ಟ. ಯಾರೋ ಒಬ್ಬರಿಗೆ ಅದಮ್ಯ ಕಾಮನೆಯ ವಾಂಛೆ ಇರಬಹುದು, ಸಂಶಯಗಳು ಇರಬಹುದು, ವಿದ್ರೋಹದ ಭಾವನೆಗಳೂ ಬರಬಹುದು, ಇವೆಲ್ಲಾ ಇದ್ದೂ ಅಂತಿಮವಾಗಿ ಅವನು ವಿಜ ಪ್ರಾಪ್ತಿಯನ್ನು ಪಡೆಯಬಹುದು, ಆದರೆ ಅದೇ ಸಮಯಕ್ಕೆ ಮತ್ತೊಬ್ಬರು ವಿಫಲತೆಯನ್ನೂ ಕಾಣಬಹುದು. ಒಂದು ವೇಳೆ ಯಾರಾದರೂ ಆತ್ಮಗತವಾದ ವಿಧೇಯತೆಯನ್ನು ಹೊಂದಿದ್ದರೆ, ಇಂತಹ ಎಲ್ಲ ಸಂದರ್ಭಗಳಲ್ಲಿಯೂ ಪ್ರಗತಿಗಾಗಿ ಮುಂದುವರೆಯಲು ಸಿದ್ಧರಿರುವಲ್ಲಿ, ಜೊತೆಗೆ ಆ ಮಾರ್ಗದರ್ಶನದಿಂದ ಬರುವ ಪಥದಲ್ಲಿ ಸದಾ ಚಲಿಸಲು ಸಿದ್ಧರಾಗಿರುವದೇ ಸಾಧನೆಗೆ ಅತ್ಯಂತ ಸುರಕ್ಷಿತವಾದ ವಿಧಾನವಾಗಿರುತ್ತದೆ.

*

ಯೋಗಕ್ಕಾಗಿ ಅರ್ಹನಾಗುವದು ಎನ್ನುವದೇ ಒಂದು ಸಾಪೇಕ್ಷ–ಶಬ್ದವಾಗಿದೆ. ಏಕೆಂದರೆ ನಿಜವಾದ ಕರೆಯು ಆತ್ಮದಿಂದಲೇ ಬರುತ್ತದೆ, ಮತ್ತು ಆ ದಿವ್ಯತ್ವದ ಎಡೆಗೆ ಚಲಿಸಲು ತನ್ನನ್ನು ತಾನೇ ತೆರೆದುಕೊಳ್ಳುವ ಶಕ್ತಿಯನ್ನೂ ಹೊಂದಿರುತ್ತದೆ. ಒಂದು ವೇಳೆ ನಿನ್ನಲ್ಲಿ ಇದು ಇದ್ದರೆ, ಆಗ ನೀನು ಅರ್ಹನಾಗಿದ್ದೀಯಾ ಎಂದರ್ಥ. ಇಲ್ಲಿ ನಿನ್ನ ಗತದ ಕ್ರಿಯೆಗಳಾವವೂ ಎಂದಿಗೂ ಅಡ್ಡಿಯಾಗುವದಿಲ್ಲ. ಏಕೆಂದರೆ ಭೂತವು ಎಂದಿಗೂ ಭವಿಷ್ಯವನ್ನು ಕಟ್ಟಿ ಹಾಕಲು ಸಾಧ್ಯವೇ ಇಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/93, 33 – ಶ್ರೀ ಅರವಿಂದರು**

# ಶ್ರೀ ಅರವಿಂದರು – ಶತಮಾನದ ನೋಟ

– ಶ್ರೀ ನವನೀತ ರಾಮಚಂದ್ರರಾಯರು

## ಭಾಗ 7

ಶ್ರೀ ಅರವಿಂದರು ತಮ್ಮ ಪಾರ್ಥಿವ ದೇಹವಿಡುವ ಮುನ್ನವೇ ಶ್ರೀಮಾತೆಯವರು ಅವರ ಉಗುರು–ಕೂದಲುಗಳಂಥ ಕೆಲವು ಪವಿತ್ರ ಅವಶೇಷಗಳನ್ನು ಕಾದಿಟ್ಟುಕೊಂಡಿದ್ದರಂತೆ. ಹಲವು ವರ್ಷಗಳ ಹಿಂದೆ ಬಂಗಾಲಕ್ಕೆ ಕಳಿಸಿದಾಗ ಈ ಮಾತು ಪ್ರಥಮ ಸಲ ಜಗತ್ತಿಗೆ ವಿದಿತವಾಯಿತು. ಮುಂದೆ ಒಡಿಸಾ, ದಿಲ್ಲಿ, ಆಂಧ್ರ ಪ್ರದೇಶದ ಎರಡು ಸ್ಥಳಗಳು, ಗುಜರಾತಗಳ ದೈವ ತೆರೆಯಿತು. ಏಳನೆಯ ಭಾಗ್ಯಶಾಲಿ ರಾಜ್ಯವೆ ಕರ್ನಾಟಕ. (ಹುಬ್ಬಳ್ಳಿಯ) ಉದಾರಜಿ ಪಿಂಟೋ – ಆಶ್ರಮದ ಮಾನನೀಯ ಸಾಧಕರು – ಶ್ರೀಮಾತೆಯವರಿಂದ ನಿಯೋಜಿಸಲ್ಪಟ್ಟ ಅವಶೇಷ ವಾಹಕರು. 1938ರಲ್ಲಿ ಶ್ರೀ ಅರವಿಂದರು "ಉದಾರ" ಎಂಬ ಸಂಸ್ಕೃತ ನಾಮವನ್ನು ಅವರಿಗೆ ಸ್ವಹಸ್ತಾಕ್ಷರದಿಂದ ಬರೆದುಕೊಟ್ಟಾಗ, Noble, Generous, Straightforward, Sincere (ಉದಾತ್ತ, ಉದಾರ, ಸರಳ, ಒಳ ಹೊರಗಿನ ಕಳಕಳಿಯ) ಎಂಬ ನಾಲ್ಕು ವಿಶೇಷಣಗಳನ್ನು ಉಲ್ಲೇಖಿಸಿದ್ದಾರೆ. ಶ್ರೀ ಉದಾರಜಿಯವರೊಡನೆ ಶ್ರೀಮಾತೆಯವರು ಕಳಿಸಿದ ಶಿಲಾಲಿಖಿತ ಸಂದೇಶವು "ಸೃಷ್ಟಿಯ ಕಾರ್ಯದಲ್ಲಿ ಇಡಬೇಕಾದ ಮುಂದಿನ ಹೆಜ್ಜೆಯನ್ನು (ಎಂದರೆ ಸುಪ್ರಮಾನಸ ತತ್ತ್ವದ ಆವಿಷ್ಕರಣ–ಅವತರಣಗಳ ವಿಧಾನವನ್ನು) ಶ್ರೀ ಅರವಿಂದರು ನಮಗೆ ಸ್ಫುಟಗೊಳಿಸಿದ್ದಾರೆ" ಎಂಬುದಾಗಿತ್ತು. ಉದಾರಜಿಯವರ (ಶ್ರೀ ಅರವಿಂದರಿಂದ ಆವಿಷ್ಕೃತವಾದ) 'ಉದಾರ' ನಾಮದ ಚತುರ್ವಿಧ ವ್ಯುತ್ಪತ್ತಿ, ಪೃಥ್ವೀ ತತ್ತ್ವದ ಈ ಮುಂದಿನ ಊರ್ಧ್ವಮುಖಿ ಉತ್–ಕ್ರಾಂತಿಯಲ್ಲಿ ಸುಪ್ರಮಾನಸದ ಪ್ರಕಾಶನದ ಅನಿವಾರ್ಯತೆಯನ್ನು ಸಾರುವ ಶಿಲಾಫಲಕ – ಇವು ಕನ್ನಡಿಗರ ಗುಣವಿಶೇಷಗಳನ್ನೂ ಅವರು ಭವಿಷ್ಯತ್ತಿನ ರೂಪಕಾರರಾಗಿ ಹೊರಬೇಕಾದ ಹೊಣೆಯನ್ನೂ ಸ್ಫುಟಗೊಳಿಸುತ್ತಿವೆ ಎಂಬರ್ಥದಲ್ಲಿ ಶ್ರೀ ನರೇಗಲ್ಲರು ಸೂಚಿಸಿದುದು ಸೂಕ್ತವೇ ಆಗಿದೆ. ಚಕ್ರವರ್ತಿಗಳೂ ಹೇವ ಪಡುವಂತಹ ಎಂತಹ ಘನಮರ್ಯಾದೆ ಈ ಪವಿತ್ರಾವಶೇಷಗಳಿಗೆ! ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ 12–7–72 ರಂದು (ಶ್ರೀ ಕಲಶದ ಆಗಮನ, ಅಲ್ಲಿ ರಾಜಮರ್ಯಾದೆಯಿಂದ ಮಹಾಪೌರರು ಮತ್ತಿತರರಿಂದ ಸ್ವಾಗತ, ನಗರ

ಭವನದಲ್ಲಿಯ ವಿಶೇಷೋತ್ಸವದ ಸಭೆಗೆ ರಾಜ್ಯಪಾಲ ಶ್ರೀ ಸುಖಾದಿಯಾ ಅವರ ಅಧ್ಯಕ್ಷತೆ, ಮುಖ್ಯಮಂತ್ರಿ ಶ್ರೀ ಅರಸರಿಂದ ಸಭಾಕಾರ್ಯ ಪ್ರಾರಂಭ; ಮರುದಿನ ಬೆಳಿಗ್ಗೆ ವಿಮಾನ ಮಾರ್ಗದಿಂದ ಬೆಳಗಾವಿಗೆ ಆಗಮನ, ಡಿವಿಜನಲ್ ಕಮಿಷನರ, ಡೆಪ್ಯುಟಿ ಕಮಿಷನರ ಮೊದಲಾದ ಉಚ್ಚಾಧಿಕಾರಿಗಳಿಂದ ಸ್ವಾಗತ; ಅದರ ಮರುದಿನ ಬೆಳಿಗ್ಗೆ ಕಾರುಗಳಲ್ಲಿ ವಿಜಾಪುರಕ್ಕೆ ಆಗಮನ, ಅಲ್ಲಿಯೂ ಉಚ್ಚಾಧಿಕಾರಿಗಳಿಂದ ಇದಿರ್ಗೊಳ್ಳುವಿಕೆ; ಸಾಯಂಕಾಲದವರೆಗೂ ಸ್ಥಳೀಯ ಶ್ರೀ ಅರವಿಂದ ಮಂಡಲದ ಧ್ಯಾನ ಮಂದಿರದಲ್ಲಿ ಇರಿಸಲ್ಪಟ್ಟು ಸಾಯಂಕಾಲದ ಸಾರ್ವಜನಿಕ ಸಭೆಗೆ ತರಲ್ಪಡುವಿಕೆ; ಕೊನೆಯದಾಗಿ 15–7–72ರಂದು ಹಲಸಂಗಿಯಲ್ಲಿ ಪಾಂಡಿಚೇರಿಯ ಲೆ. ಗವರ್ನರ ಮಾನ್ಯ ಶ್ರೀ ಬಸಪ್ಪ ದಾನಪ್ಪ ಜತ್ತಿಯವರಿಂದ ಸ್ವಾಗತಾರ್ಪಣ ಹಾಗೂ ಸಾಧಕವರ್ಯ ಶ್ರೀ ಉದಾರಜಿಯವರ ಅಧ್ಯಕ್ಷತೆಯಲ್ಲಿ ಐದಾರು ಸಾವಿರ ಜನಸ್ತೋಮ ಸೇರಿರುವ ಮಹಾಸಭೆಯ ಕಾಲಕ್ಕೆ, ಶ್ರೀ ಅರವಿಂದ ಹೈಸ್ಕೂಲಿನ ಪಕ್ಕದಲ್ಲಿ ಶ್ರೀ ಜತ್ತಿಯವರಿಂದ ವಿಧ್ಯುಕ್ತವಾದ ಪ್ರತಿಷ್ಠಾಪನೆ! ಈ ಪ್ರಚಂಡ ಸಭಿಕ ಸಮುದಾಯದಲ್ಲಿ "ಕನಿಷ್ಠ ಅರ್ಧದಷ್ಟು ಜನ ಶ್ರೀಮಾತಾರವಿಂದರ ದರ್ಶನ ಪಡೆದ ಪುಣ್ಯವಂತರೇ ಇದ್ದುದು ಒಂದು ವೈಶಿಷ್ಟ್ಯವಾಗಿತ್ತು." ಕರ್ನಾಟಕದ ಹಳ್ಳಿ–ಪಟ್ಟಗಳಲ್ಲಿಯ ಪ್ರತಿಯೊಂದು ಶ್ರೀ ಅರವಿಂದ ಕೇಂದ್ರದಿಂದ ಪ್ರತಿನಿಧಿಗಳು ಬಂದು, ಮುಂದಿನ ಹೊಣೆಯನ್ನು ಕುರಿತು ತಮ್ಮ ಭಕ್ತಿಪೂರ್ವಕ ಕಳಕಳಿಯ ಆಶ್ವಾಸನವನ್ನಿತ್ತರು. ಸರ್ವಶ್ರೀ ಎನ್ಕೆ, ದತ್ತಮೂರ್ತಿ, ನರೇಗಲ್ಲ, ರಾಘಣ್ಣ, ಎಂ.ಆರ್. ಜಹಾಗಿರದಾರ, ಸಿಂಪಿ ಲಿಂಗಣ್ಣ, ಆರ್.ಜಿ. ಕುಲಕರ್ಣಿ ಮೊದಲಾದವರು ಶ್ರೀ ಅರವಿಂದರ ತತ್ತ್ವ ನಿರೂಪಣ – ಚರಿತ್ರ ಕಥನ ಇತ್ಯಾದಿ ವಿವಿಧ ಕೋನಗಳನ್ನು ಕುರಿತು ಭಾಷಣ – ಲಾವಣಿಗಾಯನ ಇತ್ಯಾದಿಗಳನ್ನು ಮಾಡಿದರು. ಕೊನೆಯದಾಗಿ, ಶ್ರೀ ಚೆನ್ನಮಲ್ಲರ ಹಿರಿಯ ಮಗಳು ಸೌ. ಸರೋಜಿನಿ ಗೋಗಿಯವರು 'ಹದಿಬದೆಯ ಧರ್ಮ'ದ ಜಾನಪದ ಧಾಟಿಯಲ್ಲಿ ತಾವೇ ರಚಿಸಿದ ಸು. 100 ಸಾಲುಗಳುಳ್ಳ 'ಶ್ರೀ ಅರವಿಂದ ಪಂಚಕ'ವನ್ನು ಸುಮಧುರವಾಗಿ ಹಾಡಿ ತೋರಿಸಿದುದರಲ್ಲಿ ಕೊನೆ ಕೊನೆಯ ಸಾಲುಗಳನ್ನು ಇದರಡಿ ಕೊಡುವೆ –

"ಆಶ್ರಮದ ನಟ್ಟ ನಡು ಗಿಡದ ನೆರಳಲ್ಲಿ  
ಶ್ರೀ ಅರವಿಂದ ಸದನ!  
ಶಾಂತಿ ಸಂಚರಿಸುವದು, ಮೌನ ಮಾತಾಡುವದು  
– ಆನಂದದ ಭವನ!

ಇಂತಿಪ್ಪ ಶ್ರೀಗುರು ಸದನದ ಮೇಲೆ ಹಾಸಿರುವ
ಹೂವುಗಳ ರಾಶಿ!
ಗುಲಾಬಿ ಹೂ ಸೋಸಿ, ಪಾರಿಜಾತ ಹಾಸಿ ಊದು –
ಗುಗ್ಗುಳ– ಶ್ರೀಗಂಧ ಮೂಸಿ!
ಕಮಲ ಕೇದಗೆ ಕರಿತುಂಬಿ ಕಣಗಿಲ
ಕಾಮಕಸ್ತೂರಿ ಕಲ್ಬಾಳೆ ಹೂವು
ಜಾಲಿ – ಆಬಾಲಿ – ಬನ್ನಿ – ಸುರಹೊನ್ನಿ – ಶಿರಸ
ಸಂಪಿಗಿ–ಸೇವಂತಿಗೆ ಹೂವು!
ಉದ್ಧಾರವಾದವು ಹೂವುಗಳ ಕುಲಕೋಟಿ
ಶ್ರೀಗುರು ಸದನವೇರಿ!
ಸಮಾಧಿ ಸುತ್ತಲು ನಿತ್ಯ ನಮಸ್ಕರಿಸಿ
ಎರೆಯುವರು ಹೃದಯ–ಧಾರಿ!
ತಾಯ ನಗೆ ನೋಡಿ, ತಾಯ ಧ್ವನಿ ಕೇಳಿ ಬಾಳುವರ
ಭಾಗ್ಯ ದೊಡ್ಡದು!
ಶ್ರೀ ತಾಯಿ ಶ್ರೀ ಅರವಿಂದರಿಗೆ ನಮಿಸುತ್ತ ಮುಗಿಸುವೆ
ಮುಗಿಯದ ಹಾಡು!
ನೂರು ವರುಷದ ಸಾರ ಹೇಳುವೆನು
ಸತ್ಯವಂತರಿಗೆ ಸದ್ಭಕ್ತರಿಗೆ
ಶ್ರೀಗುರು ಅರವಿಂದರ ಶ್ರೀ ಮೀರಾಮಾತೆಯ
ಮಮತೆಯ ಮಕ್ಕಳಿಗೆ!”

ಇದುವರೆಗೆ ‘ಮಧುರಚೆನ್ನ’ರನ್ನು ಕುರಿತು ಬರೆದುದಾಯಿತು. ಶ್ರೀ ಸಿಂಪಿ ಲಿಂಗಣ್ಣನವರನ್ನು ಕುರಿತು ಆನುಷಂಗಿಕವಾಗಿ ಅನಿವಾರ್ಯವಾಗಿ ಅಲ್ಲಲ್ಲಿ ಬರೆದಿದ್ದೇನೆ. ‘ಅರವಿಂದ ಸಂಸ್ಕೃತಿ’ಯನ್ನು ವಿಜಾಪುರ ಜಿಲ್ಹೆಯಲ್ಲಿ ಬೇರೂರಿಸಿ ಅದರ ಬೆಳೆ ಬರುವಂತೆ ಮಾಡಿದ ಶ್ರೇಯಸ್ಸು ‘ಮಧುರಚೆನ್ನ’ರಿಗೆ ಸಲ್ಲಬೇಕಾಗಿರುವಂತೆ ‘ಲಿಂಗಣ್ಣ’ನವರಿಗೂ ಸಲ್ಲಲೇಬೇಕು. ಮಧುರಚೆನ್ನರು ಬಾಹ್ಯಪ್ರಕೃತಿಯಲ್ಲಿ ಬಡಕಲು ಮೈ ಕಟ್ಟಿನವರು, ಅವರ ಅಂತರಂಗವೂ ಅಷ್ಟೇ ಸಂವೇದನಾಶೀಲ. ಲಿಂಗಣ್ಣನವರದು ತುಂಬಿದ ಗಟ್ಟಿಮುಟ್ಟಿಯಾದ ಮೈಕಟ್ಟು, ಯಾವಾಗಲೂ ಹಸನ್ಮುಖ. ವಿಜಾಪುರದ ಹಳ್ಳಿವಾಡದ ಇಂತಹ ಜಿಜ್ಞಾಸು

ಜೀವಗಳಿಗೆ 'ಶ್ರೀಮಾತಾರವಿಂದ ಸ್ಪರ್ಶ' ದೊರೆತು, ಅವು ಭಾರತೀಯವಷ್ಟೇ ಅಲ್ಲ, ವಿಶ್ವದ ಸಂಸ್ಕೃತಿಯ ಸಾರ ಹೀರಲು ಸಮರ್ಥರಾಗುವಂತಾದುದು ಸಣ್ಣ ಪವಾಡವಲ್ಲ. ಬಂದ ಎಡರನ್ನು ತಡಕೊಂಡು ಮುಂದಡಿಯಿಡುವುದು ಲಿಂಗಣ್ಣನವರ ಸ್ವಭಾವ ಧರ್ಮವಾಗಿದೆ. ಅವರ ಬರೆವಣಿಗೆಯಲ್ಲಿ ಜಾನಪದ ವೈಖರಿಯೂ ಅಭಿಜಾತ ವಿಚಾರಸಿರಿಯೂ ಮುಖ್ಯವಾಗಿ ಕುತೂಹಲ ಪೂರ್ಣ ಜೀವನ ನಿರೀಕ್ಷಣವೂ ಕೂಡಿಕೊಂಡು ಒಡಮೂಡಿವೆ. ಬರೀ ಭಾವಪರವಶತೆಯಲ್ಲ, ಕೊನೆ ಬಾಳುವ ಸಾಹಿತ್ಯಕ್ಕೆ ಬೇಕಾಗುವ 'ವ್ಯವಹಾರ ಜ್ಞಾನ'ವೂ (ಯಾವುದಕ್ಕೆ Sturdy Common Sense ಅನ್ನುತ್ತಾರೋ ಅದು) ಅವರ ತಾತ್ತ್ವಿಕ–ಸಾಂಸ್ಕೃತಿಕ–ಧಾರ್ಮಿಕ–ಸಾಹಿತ್ಯಿಕ ಕೃತಿಗಳಲ್ಲಿ ಅಳವಟ್ಟಿದೆ. ಜೀವನ ವನ್ನು ಸಲೀಲವಾಗಿ – ಬಹಳಷ್ಟು ಮನಸ್ಸಿಗೆ ಹಚ್ಚಿಕೊಳ್ಳದೆ – ನಗೆ ವಿಡಂಬನೆಗಳನ್ನು ಹಾಳತಾಗಿ ಬಳಸಿಕೊಳ್ಳುತ್ತ ಕ್ರಮಿಸುವ ಕಲೆ ಅವರಿಗೆ ಹಸ್ತಗತವಾಗಿದೆಯೆಂದು ನನಗೆ ತೋರುತ್ತವೆ, ಅದಿರಲಿ. ಇಲ್ಲಿ 'ಬಾಳಬಟ್ಟೆ' ಎಂಬ ಅವರ ಅನುಭವೋಕ್ತಿಪೂರ್ಣ ಕೃತಿಯನ್ನು ಕೊಂಚ ಅವಲೋಕಿಸಬೇಕೆಂದಿದ್ದೇನೆ. ಈಗಾಗಲೆ ಈ ಪ್ರಬಂಧ ತುಂಬಾ ಬೆಳೆದಿದೆ; ಆದರೂ ಈ ಕೃತಿಯನ್ನು ಕುರಿತು ಅವರೇ ಬರೆದ 'ಅರಿಕೆ'ಯಿಂದ ಕೊಂಚ ವಿಸ್ತಾರವಾಗಿ ಇಲ್ಲಿ ಉದ್ಧರಿಸುತ್ತಿದ್ದೇನೆ –

"ಇಂದಿನ ನಮ್ಮ ಬಾಳು ನಿಗ್ಗರದ ಕುತ್ತು, ಅನೀತಿಯ ತುತ್ತು, ಭಯದ ಬಿತ್ತು ಆಗಿರುವಾಗ ಅದಕ್ಕೆ ಸರಿಯಾದ ಚಿಕಿತ್ಸೆಯೆಂದರೆ ಶರಣರ ವಚನಧರ್ಮ ಪಾಲನ. ಅದನ್ನು ಯಥೋಚಿತವಾಗಿ ಉಪಯೋಗಿಸಿಕೊಂಡರೆ ನಮ್ಮ ನಿತ್ಯಜೀವನದ ಅದೆಷ್ಟೋ ತೊಡಕುಗಳು ಬಿಟ್ಟುಹೋಗುವವೆಂದೇ ಬಗೆದಿರುವ ನಾನು, ವೃತ್ತಿ ಧರ್ಮ, ದಾಂಪತ್ಯ ಧರ್ಮ, ಕುಟುಂಬ ಧರ್ಮ, ಸಾಮಾಜಿಕ ಧರ್ಮಗಳಿಗೆ ಹೊಂದಿಕೆಯಾಗುವಂಥ ವಚನಗಳನ್ನು ಗುರುತಿಸಿಕೊಂಡೆನು. ಭೂಮಿಯ ಮೇಲೆ ಜನ್ಮ ತೊಡಲು ಒಪ್ಪದ ಜೀವಜಂಗುಳಿ ಶಿವನ ಸನ್ನಿಧಿಗೆ ನಿಯೋಗ ಹೋಗುವಂತೆಯೂ, ಜಗತ್ಸಂಕಲ್ಪಕನಾದ ಶಿವನೂ, ಜಗಚ್ಚಾಲಕ ಶಕ್ತಿಯಾದ ಪಾರ್ವತಿಯೂ ಅವರ ಸಂದೇಹಗಳನ್ನು ಕೇಳಿಕೊಂಡು ಯಶಸ್ವೀ ಜೀವಾತ್ಮರಾದ ಶರಣ ಸಂಕುಲದ ಸಮಷ್ಟಿ ಪುರುಷನಿಂದ ಸಮಾಧಾನ ಹೇಳಿಸಿದಂತೆಯೂ ರಚನೆಯನ್ನು ಅನುಸರಿಸಿದೆನು. ಇಲ್ಲಿಯ ಶಿವನು ತ್ರಿಮೂರ್ತಿಗಳಲ್ಲೊಬ್ಬನಲ್ಲ; ದೇವದೇವನು. ಪಾರ್ವತಿಯಂತೂ ಜಗಜ್ಜನನಿ. ಸಮಷ್ಟಿ ಪುರುಷನಾದ ಸಂಗಮ ಶರಣನಲ್ಲಿ ಭಕ್ತಿ, ಜ್ಞಾನ, ಕರ್ಮ, ವೈರಾಗ್ಯಗಳು ಒಬ್ಬುಳಿಗೂಡಿ ಆತನು

ಪೂರ್ಣಯೋಗಿಯೇ ಆಗಿದ್ದಾನೆ. ಅಧ್ಯಾತ್ಮವಾಗಲಿ, ಯೋಗವಾಗಲಿ ಗುರುವಿನ ನೇತೃತ್ವಕ್ಕಿಂತ ಜಗಜ್ಜನನಿಯ ಆಶ್ರಯದಲ್ಲಿ ಸುಲಭಸಾಧ್ಯವೆನ್ನುವ ರೀತಿಯಲ್ಲಿ ಪಾರ್ವತಿಯ ಪಾತ್ರವು ಅಳವಡಬೇಕೆಂದು ನನ್ನ ಎಣಿಕೆ."


"ಹೇಳು ಬಾಳು ಶರಣರ ಮಹಾಮನೆಯ ಬಾಳು ಆಗಬೇಕಾದರೆ, ಕನ್ನಡ ನಾಡಿನ ರಕ್ತಗುಣಕ್ಕೆ ತಕ್ಕ ಆರೈಕೆ ದೊರೆಯಬೇಕು. ಅದು ಆಯುರ್ವೇದ ಚಿಕಿತ್ಸೆಯಾಗಬೇಕಾಗಿರುವಂತೆ ಆಧುನಿಕವಾದ ಚುಚ್ಚುಮದ್ದು – ಶಸ್ತ್ರಚಿಕಿತ್ಸೆಗಳನ್ನೂ ನಡೆಯಿಸಬೇಕು. ವಚನ ಧರ್ಮವು ಆಯುರ್ವೇದ ಚಿಕಿತ್ಸೆಯಂತೆಯೂ, ಪಾಂಡಿಚೇರಿಯ ಶ್ರೀ ಅರವಿಂದಾಶ್ರಮದ ಸಿದ್ಧಿಯು ಚುಚ್ಚುಮದ್ದು ಶಸ್ತ್ರಚಿಕಿತ್ಸೆ ಯಂತೆಯೂ ಜೀವನಾರೋಗ್ಯಕ್ಕೆ ಬಳಸಲ್ಪಡಬೇಕೆಂದು ಬಗೆಯಲಾಗಿದೆ. ಬಾಳ ತಳಹದಿಯು ಬಂಧುರಗೊಂಡು ಸಾಮಾನ್ಯ ರಹಸ್ಯವನ್ನು ಬಿಚ್ಚಿ ತೋರಿಸುವ ಕೆಲಸವನ್ನು ವಚನ ಧರ್ಮವು ಸಾಧಿಸಿಕೊಡುವುದಾದರೆ, ಪೌರ್ವಾತ್ಯ ಸಿದ್ಧಿಯ ಮೇಲೆ ಪಾಶ್ಚಾತ್ಯ ತತ್ವವನ್ನು ನಿರ್ಮಿಸಿ ಲೌಕಿಕದಿಂದ ಮೃತ್ಯುವನ್ನು ಗೆದ್ದು ಪರಮಾರ್ಥದಿಂದ ಅಮೃತತ್ವವನ್ನು ಪಡೆಯುವ ನಮ್ಮ ಸನಾತನ ಜೀವನಾಡಿ ಯನ್ನು ಮಿಡಿಸುವ ಚಲಕವನ್ನು ಶ್ರೀ ಅರವಿಂದ ಸಾಹಿತ್ಯವು ಒದಗಿಸಬಲ್ಲುದು. ಜೀವಜಂಗುಳಿಯ ಪ್ರಶ್ನೆಗಳನ್ನು ಶರಣರ ಪರಿಭಾಷೆಯಲ್ಲಿ ಬಿಡಿಸಿಕೊಟ್ಟ ಸಂಗಮ ಶರಣನು, ಮುಂದಿನ ದಾರಿಗೆ ಬೆಳಕು ತೋರಿಸುವದಕ್ಕೆ (ಶ್ರೀ ಅರವಿಂದರ ಪರಿಭಾಷೆಯನ್ನು ಬಳಸಿಕೊಂಡಿದ್ದಾನೆ. ಜೀವಜಂಗುಳಿಗೆ ಕಾಣಿಸಿಕೊಂಡ ತೊಡಕುಗಳಲ್ಲದೆ, ಮೈಮರೆಸಿಕೊಂಡ ತೊಡಕುಗಳನ್ನು ಬಿಡಿಸಿಕೊಡುವದಕ್ಕೆ ಜಗಜ್ಜನನಿಯಾದ ಪಾರ್ವತೀದೇವಿಯು ಶ್ರೀ ಅರವಿಂದರ ಸಾಹಿತ್ಯವನ್ನು ಬಳಸಿಕೊಂಡಿದ್ದಾಳೆ. ಅನುಭಾವದ ಅರಿವು, ಅನುಸರಣೆಯ ಹೊಳವು ಎರಡೂ ಜೀವಜಂಗುಳಿಗೆ ದೊರೆತಂತಾಗಿ ಜನ್ಮತೊಡಲಿಕ್ಕೆ ಭೂಮಿಗಿಳಿಯುವ ಧೈರ್ಯ ಬಂದರೂ ಜೊತೆಗೆ ಜಗಜ್ಜನನಿ ಇರಬೇಕೆಂದು ಅವರು ಬಯಸುವರು, ಆಕೆಯೂ ಎಡರು–ತೊಡರುಗಳಲ್ಲಿ ಸಹಾಯಹಸ್ತ ನೀಡುವ ಅಭಯ ಕೊಡುವಳು. ಆದ್ದರಿಂದ ಜನ್ಮ–ಜೀವನಗಳು ಸುಲಭವಾಗುವವೆಂದೂ, ಹೋರಾಟ ತೂರಾಟಗಳು ಸಹಜವಾಗುವವೆಂದೂ, ಬಾಳು ಆಟದಂತೆ ಸಾಮಾನ್ಯವಾಗುವದೆಂದೂ ಜೀವವು ಬಗೆಯಬಲ್ಲದು. ಆದ್ದರಿಂದ ಇದು ಬಾಳಬಟ್ಟೆ; ಮಹಾಮನೆಯ ಬಾಳು ಇದೇ ಅಹುದು."

... ಮುಂದುವರೆಯುತ್ತದೆ

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ವೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |




ಪಂಚಪ್ರಾಣಗಳ ವಾಯು ನೆಲೆದಪ್ಪಿ, ಇಡಾ-ಪಿಂಗಳದಿ ಸತತ
ಚಲಿಸುತಿಹ ಉಸಿರು ಸ್ವರವಡಗಿಕೊಳಲು ಪರಿತ್ಯಕ್ತಗೊಂಡ ಚಿತ್ತ,
ದಶವಾಯುಗಳಿಗೆ ನೆಲೆಯಿರುವ ಪರದೆ, ತೆರಿಯುತಿರೆ ಮುಕ್ತನಾಗಿ
ದೂರದಲಿ ಮತ್ತೆ ಮಸುಕಾಗಿ ಮಿಂಚು-ಸೆಳೆಗಳಲಿ ದೃಶ್ಯ ಕರಗಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 5 ಪುಟ 79)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



ಲೌಕಿಕದ ಭಾವ ಸಂತಸದ ಜೀವಕಿದು ಮಿಗಿಲು ದೃಶ್ಯ ಮುದದಿ
ರಸೋದ್ಗಾರ ಜೊತೆ ದಿವ್ಯಕಾಂತಿಯಾ ಚೈತನ್ಯಕಿಲ್ಲಿ ಆದಿ
ಗ್ರಹಿತಗೊಂಡಂಥ ಗ್ರಹಿಕೆ ತಾನದುವು ಸುಜ್ಞಾನ ರೂಪವಾಗಿ
ಹೃದಯ–ಅರಿವುಗಳ ಅಸ್ಮಿತೆಯು ಪುನರ್–ಸ್ಥಾಪನೆಯ ಭಾಗವಾಗಿ

ಪವನವದು ಹಿಗ್ಗಿ ವರ್ಣಗಳ ಬುಗ್ಗಿ ಆಕರ್ಷ–ಗರ್ಭ ರೂಪು
ಇಡಾ–ಪಿಂಗಳದಿ ತೀವ್ರ ಸಂಚಲನ, ಕಂಪನದಿ ಸೂಸಿ ಛಾಪು

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 1 ಪುಟ 28)**

**ಟಿಪ್ಪಣಿ:** ಇದು ಸಚ್ಚಿದಾನಂದ (ಸತ್ ಚಿತ್ ಆನಂದ) ಸೌಂದರ್ಯದ ಸಾಕ್ಷಾತ್ಕಾರಕ್ಕಾಗಿ ಇರುವ ಅಧ್ಯಯನದ ಸ್ಥಿತಿ.

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.